ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಆಗಸ್ಟ್ 6, 2008 ರೂ. 12/-



ಬೆಂಗಳೂರು ಬಾಂಬ್ ಬ್ಲಾಸ್ಟ್

ಏನಿದು ಇಂಡಿಯನ್ ಮುಜಾಹಿದ್ದೀನ್?

ರೆಡ್ಡಿ ಬಂಧನದಲ್ಲಿ ಲೋಕಾಯುಕ್ತ

ಶೃಂಗೇರಿ: ನಾಟಾ ಕಳ್ಳ ಪಾಂಡುರಂಗ

ಮೈಸೂರು: ದಳ ಕಾರ್ಪೋರೇಟರ್‌ಗಳು ಚೆಡ್ಡಿ ತೆಕ್ಕೆಗೆ

ಸಾಹಿತ್ಯ ಪರಿಷತ್: ಲಿಂಗಾಯತ-ಒಕ್ಕಲಿಗರ ಕದನ

ಟಿ.ಬಾಬು ಹತ್ಯೆ

ಲಿಕ್ಕರ್ ಮಾಫಿಯಾ ಅಟ್ಟಹಾಸ



ಉದ್ಯಮಪತಿಗಳ ಆಬಾದಿ-ಬಡಜನತೆಯ ಬರ್ಬಾದಿ

ಅಣುಬಂಧ ಒಪ್ಪಂದದ ಬಗ್ಗೆ ಸದನದಲ್ಲಿ ವಿಶ್ವಾಸಮತವನ್ನು ಕೊಂಡುಕೊಂಡ ಕಾಂಗ್ರೆಸ್ ಪಕ್ಷಕ್ಕೆ ಈಗ ಇಡಿಯಾಗಿ ಭಾರತವನ್ನು ಅಮೆರಿಕಕ್ಕೆ ಮತ್ತು ಇತರ ಶ್ರೀಮಂತ ರಾಷ್ಟ್ರಗಳಿಗೆ ಹರಾಜು ಹಾಕಲು ಏನೇನೂ ಅಡ್ಡಿ ಉಳಿದಿಲ್ಲ. ವಾಸ್ತವವಾಗಿ ಈ ಅಣು ಒಪ್ಪಂದ ಕೇವಲ ಅಣು ಒಪ್ಪಂದವಲ್ಲ; ಇದು ಭಾರತದ ಸಾರ್ವಭೌಮತೆಯನ್ನು ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿಗಳಿಗೆ ಮಾರಿಕೊಳ್ಳುವ ಒಪ್ಪಂದವೆಂಬುದು ಎಡರಂಗದ ಹಂಗಿಲ್ಲದೆ ವಿಶ್ವಾಸಮತ ಪಡೆದ ಮರುದಿನದಿಂದಲೇ ಸಾಬೀತಾಗುತ್ತಿದೆ. ಅಷ್ಟು ಮಾತ್ರವಲ್ಲ, ದೇಶದೊಳಗೆ ಬಡಜನತೆಯನ್ನು ಕಾರ್ಪೊರೇಟ್ ಉದ್ಯಮಪತಿಗಳು ಇನ್ನಷ್ಟು ಸುಲಿಯಲು ಪಡೆದುಕೊಂಡ ಮತವೆಂಬುದು ಸಾಬೀತಾಗುತ್ತಿದೆ. ಅಣು ಒಪ್ಪಂದದ ಬಗ್ಗೆ ಯುಪಿಎ ಸರ್ಕಾರದ ಪರವಾಗಿ ಉದ್ಯಮಪತಿಗಳು ನಿಲುವು ತೆಗೆದುಕೊಂಡಾಗಲೇ ಇದು ನಿಚ್ಚಳವಾಗಿತ್ತು. ಮಾತ್ರವಲ್ಲದೆ ಬಹುಮತಕ್ಕೆ ಬೇಕಾದಷ್ಟು ಸಂಸದರನ್ನು ಕೊಳ್ಳಲು ಹಣವನ್ನು ಪೂರೈಸಿದ್ದು ಸಹ ಈ ಉದ್ಯಮಪತಿಗಳೇ. ಪ್ರಮುಖ ವಿರೋಧ ಪಕ್ಷವಾದ ಬಿಜೆಪಿ ಸಹ ಈ ಉದ್ಯಮಪತಿಗಳ ಪಕ್ಷವಾಗಿದ್ದರಿಂದಲೇ ಅಡ್ವಾನಿಯವರು ವಿಶ್ವಾಸಮತವನ್ನು ವಿರೋಧಿಸಿದರೂ ಅಣು ಒಪ್ಪಂದವನ್ನು ವಿರೋಧಿಸಲಿಲ್ಲ. ಹಾಗೆ ನೋಡಿದರೆ ಬಿಜೆಪಿ ಸಂಸದರೇ ಯುಪಿಎ ಸರ್ಕಾರವನ್ನು ಉಳಿಸಿದ್ದು. ಇಂದು ಈ ಎಲ್ಲಾ ಪಕ್ಷಗಳನ್ನು ನಿಯಂತ್ರಿಸುವುದು ಈ ಉದ್ಯಮಪತಿಗಳೇ ಹೊರತು ಜನರಲ್ಲ ಎಂಬುದನ್ನು ಇದು ಮತ್ತೊಮ್ಮೆ ಸಾಬೀತು ಮಾಡುತ್ತದೆ.



ಇದೇ ಉದ್ಯಮಪತಿಗಳ ಕೈಯಲ್ಲಿರುವ ಮಾಧ್ಯಮಗಳು ಸಹ ಉದ್ಯಮಪತಿಗಳಿಗೆ ಪೂರಕವಾದ ನೀತಿಯನ್ನು ತರುತ್ತಿರುವ ಯುಪಿಎ ಸರ್ಕಾರದ ಉಳಿವಿಗೆ ಬೆಂಬಲವಾಗಿ ನಿಂತಿದ್ದವು. ಬೇರೆ ಸಂದರ್ಭದಲ್ಲಿ ಸದನದ ಒಳಗೆ ನಡೆದ ಮೂರು ಕೋಟಿ ಲಂಚ ಪ್ರಕರಣವನ್ನು ದೊಡ್ಡ ಇಷ್ಯೂ ಮಾಡುತ್ತಿದ್ದ ಈ ಮಾಧ್ಯಮಗಳು ಅದೊಂದು ದೊಡ್ಡ ವಿಷಯವೇ ಅಲ್ಲವೆಂಬಂತೆ ಮರೆಮಾಚಿದ್ದೂ ಸಹ ಇದೇ ಕಾರಣಕ್ಕೆ.

ಈಗ ಕಾರ್ಪೊರೇಟ್ ಇಂಡಿಯಾ ತಮ್ಮ ಈ ಎಲ್ಲಾ ಬೆಂಬಲಕ್ಕೆ ಪ್ರತಿಯಾಗಿ ದೇಶವನ್ನು ಮತ್ತು ಜನರನ್ನು ಇನ್ನಷ್ಟು ಸುಲಿಯುವುದಕ್ಕೆ ಸಂಪೂರ್ಣ ಅವಕಾಶ ನೀಡಲು "ನೂರು ದಿನಗಳ ಅಜೆಂಡಾ" ಎಂಬ ಆದೇಶವನ್ನು ಕೇಂದ್ರ ಸರ್ಕಾರಕ್ಕೆ ನೀಡಿದೆ. ಈ ಅಜೆಂಡಾಗಳನ್ನೆಲ್ಲಾ ಯುಪಿಎ ಸರ್ಕಾರ ಜಾರಿಗೆ ತಂದರೆ ಕಾರ್ಪೊರೇಟ್ ಇಂಡಿಯಾದ ಲಾಭಗಳು ಗಗನ ಮುಟ್ಟುವುದರಲ್ಲಿ ಸಂಶಯವಿಲ್ಲ. ಆದರೆ ಅದೇ ಸಮಯದಲ್ಲಿ ಭಾರತದ ಬಡ ಮತ್ತು ಮಧ್ಯಮ ವರ್ಗದವರ ಬದುಕೂ ಬರ್ಬಾದಾಗುವುದರಲ್ಲೂ ಸಂಶಯವಿಲ್ಲ!

ಉದಾಹರಣೆಗೆ ಈ "ನೂರು ದಿನಗಳ ಅಜೆಂಡಾ"ದಲ್ಲಿ ಕಾರ್ಪೊರೇಟ್ ಇಂಡಿಯಾ ಕೊಟ್ಟಿರುವ ಕೆಲವು ಕಾರ್ಯ ಸೂಚಿಗಳನ್ನು ನೋಡೋಣ.

1. ವಿಶೇಷ ಆರ್ಥಿಕ ವಲಯಗಳ (SEZಗಳ) ತ್ವರಿತ ಅನುಷ್ಠಾನ ಮತ್ತು ಹೆಚ್ಚಳ.

ಇದರಿಂದಾಗಿ ರೈತರ ಬದುಕು ಮತ್ತು ಒಟ್ಟಾರೆ ದೇಶದ ಆರ್ಥಿಕತೆ ಹೇಗೆ ಹದಗೆಡುತ್ತದೆ ಎಂಬುದನ್ನು ದೇಶಾದ್ಯಂತ ಸೃಷ್ಟಿಯಾಗಿರುವ ಹಲವಾರು ನಂದಿಗ್ರಾಮಗಳು ಸಾಬೀತು ಮಾಡಿವೆ. ಅವರ ಪ್ರತಿರೋಧದಿಂದಾಗಿಯೇ ಇವೆಲ್ಲಕ್ಕೂ ಸ್ವಲ್ಪವಾದರೂ ತಡೆಯೊಡ್ಡಲಾಗಿತ್ತು. ಈಗ ಕಾಂಗ್ರೆಸ್ ಬಹುಮತ ಪಡೆದಿರುವುದರಿಂದ ಕಾರ್ಪೊರೇಟ್ ಇಂಡಿಯಾ ಆಕ್ರಮಣಕಾರಿಯಾಗಿ ಜನರ ವಿರುದ್ಧ ಯುದ್ಧಕ್ಕೆ ನಿಲ್ಲುತ್ತಿದೆ. (ಈ ನೀತಿಗೆ ಬಿಜೆಪಿಯ ಅಥವಾ ಎಡರಂಗದ ಯಾವುದೇ ವಿರೋಧ ಇರುವುದಿಲ್ಲ ಎಂಬುದು ಮತ್ತೊಂದು ವಿಷಯ-ಬಿಡಿ!)

2. ಚಿಲ್ಲರೆ ಮಾರಾಟಕ್ಕೆ ಕೈಗಾರಿಕಾ ಸ್ಥಾನಮಾನ ಕೊಟ್ಟು ವಿದೇಶಿ ಮತ್ತು ಖಾಸಗಿ ಬಂಡವಾಳಕ್ಕೆ ಅನುಮತಿ ನೀಡುವುದು.

ಈಗಾಗಲೇ ಚಿಲ್ಲರೆ ಮಾರಾಟಕ್ಕೂ ಉದ್ಯಮಪತಿಗಳು ಪ್ರವೇಶಿಸಿರುವುದರಿಂದ ದೇಶಾದ್ಯಂತ ಬಡ ಚಿಲ್ಲರೆ ವ್ಯಾಪಾರಿಗಳು ಬರ್ಬಾದಾಗುತ್ತಿದ್ದಾರೆ. ತಮಗೆ ತೋರಿದ ರೀತಿಯಲ್ಲಿ ಎಲ್ಲೆಡೆ ಪ್ರತಿಭಟಿಸುತ್ತಿದ್ದಾರೆ. ಇನ್ನೂ ಅದಕ್ಕೆ ಕೈಗಾರಿಕಾ ಸ್ಥಾನ ಮಾನ ನೀಡಿ ದೊಡ್ಡ ಬಂಡವಾಳ ಹೂಡಿಕೆಯನ್ನು ಉತ್ತೇಜಿಸಿದರೆ ಬಡ ವ್ಯಾಪಾರಿಗಳ ಪಾಡೇನಾಗಬೇಕು?

3. ಬ್ಯಾಂಕುಗಳು ಆದ್ಯತಾ ಕ್ಷೇತ್ರದ ಹೆಸರಲ್ಲಿ ಕೃಷಿಗೆ ಒದಗಿಸುವ ಬಂಡವಾಳವನ್ನು ಕೃಷಿಯಲ್ಲಿ ಖಾಸಗಿ ಬಂಡವಾಳದ ಉತ್ತೇಜನದ ಕಡೆಗೆ ಹರಿಸಬೇಕು. ಅಂದರೆ ಖಾಸಗಿ ಗೋಡೌನು, ಶೀತಸಂಗ್ರಹ ಇನ್ನಿತ್ಯಾದಿ ಮೂಲಭೂತ ಸೌಕರ್ಯಗಳ ಉತ್ತೇಜನದೆಡೆಗೆ ಬಂಡವಾಳ ನೀಡಬೇಕು.

ಇದರರ್ಥವಿಷ್ಟೇ: ಈಗಾಗಲೇ ಬ್ಯಾಂಕಿಂಗ್ ಕ್ಷೇತ್ರವು ಸಣ್ಣ ಮತ್ತು ಅತಿ ಸಣ್ಣ ರೈತರಿಗಿರಲಿ ಮಧ್ಯಮ ರೈತರಿಗೆ ಕೊಡುತ್ತಿರುವ ಸಾಲ ಬಂಡವಾಳದ ಪ್ರಮಾಣವೇ ಕಡಿಮೆಯಾಗುತ್ತಾ ಬರುತ್ತಿದೆ. ಅದು ಇನ್ನೂ ಕಡಿಮೆಯಾಗುತ್ತದೆ. ಅವೆಲ್ಲವೂ ಕೃಷಿಯಲ್ಲಿ ಬರಲಿರುವ ಖಾಸಗಿ ಬಂಡವಾಳದ ಉತ್ತೇಜನಕ್ಕೆ ಹೋಗುತ್ತದೆ. ಅಂದರೆ ಈ ನೀತಿಯು ಕೃಷಿಯಲ್ಲಿ ಕಾಂಟ್ರಾಕ್ಟ್ ಫಾರ್ಮಿಂಗ್, ಕಾರ್ಪೊರೇಟ್ ಫಾರ್ಮಿಂಗ್‌ಗಳನ್ನು ಉತ್ತೇಜಿಸುತ್ತಾ ಬಡ ರೈತರನ್ನು ಕೃಷಿಯಿಂದ ಹೊರಹಾಕುವ ಯೋಜನೆಯನ್ನಷ್ಟೇ ಹೊಂದಿದೆ.

4. ಪೆನ್ಷನ್ ಫಂಡ್ ರೆಗ್ಯುಲೇಟರಿ ಅಂಡ್ ಡೆವಲಪ್‌ಮೆಂಟ್ ಅಥಾರಿಟಿಯ ಸ್ಥಾಪನೆಗೆ ಅನುಮತಿ ನೀಡುವುದು..

ಕಾರ್ಪೊರೇಟ್ ಇಂಡಿಯಾದ "ನೂರು ದಿನಗಳ ಅಜೆಂಡಾ"!

ಪೆನ್ಷನ್-ಪಿಂಚಣಿ ಎಂಬುದು ಒಬ್ಬ ಕಾರ್ಮಿಕ/ಉದ್ಯೋಗಿಯ ಜೀವಿತಾದ್ಯಂತ ದುಡಿತದಿಂದ ಉಳಿಸಿದ ಹಣ. ಉಳಿದ ಜೀವನವನ್ನು ನೆಮ್ಮದಿಯಿಂದಲ್ಲವಾದರೂ ಹೊಟ್ಟೆಬಟ್ಟೆಗೆ ಕೊರತೆ ಇಲ್ಲದಂತೆ ಬದುಕಲು ಕೂಡಿಟ್ಟ ಹಣ. ಸರ್ಕಾರ ಕಾರ್ಮಿಕರ ಹಣವನ್ನು ತನ್ನಲ್ಲಿ ಕೂಡಿಟ್ಟುಕೊಂಡು ನಂತರ ಕಾರ್ಮಿಕ ಸಾಯುವ ತನಕ ಆ ಹಣವನ್ನು ಮಾಹೆಯಾನ ನೀಡುವ ಸಾಮಾಜಿಕ ಜವಾಬ್ದಾರಿಯನ್ನು ಹೊಂದಿದೆ. ಕಾರ್ಮಿಕರ ಈ ಕೂಡಿಟ್ಟ ಹಣ ಕನಿಷ್ಠ 4 ಲಕ್ಷ ಕೋಟಿ ರೂಪಾಯಿಗಳಾಗುತ್ತವೆ. ಈಗ ಈ ದೇಶದ ಮತ್ತು ವಿದೇಶದ ಹೂಡಿಕೆದಾರರ ಕಣ್ಣು ಇದರ ಮೇಲೆ ಬಿದ್ದಿದೆ. ಹೀಗಾಗಿಯೇ ಪಿಂಚಣಿ ಮೊತ್ತವನ್ನು ಒಂದು ನಿಧಿಯನ್ನಾಗಿ ಮಾಡಿ ಅದನ್ನು ನೋಡಿಕೊಳ್ಳಲು ಒಂದು ಪ್ರಾಧಿಕಾರವನ್ನು ನೇಮಿಸಿ ಖಾಸಗಿಯವರಿಗೆ ಹೂಡಿಕಾ ಬಂಡವಾಳವನ್ನಾಗಿ ಮಾಡಿಕೊಳ್ಳುವ ಸಂಚು ಕಾರ್ಪೊರೇಟ್ ಇಂಡಿಯಾದ ಮೇಲಿನ ಪ್ರಸ್ತಾಪದ ಹಿಂದೆ ಇದೆ. ಇದರಿಂದ ಖಾಸಗಿ ಬಂಡವಾಳಿಗರಿಗೆ ಸುಲಭ ಬಂಡವಾಳವಂತೂ ಸಿಗುತ್ತದೆ. ಆದರೆ ಪಿಂಚಣಿದಾರರ ಬಾಳು?

ಇದು ವಾಸ್ತವವಾಗಿ ಅಣು ಒಪ್ಪಂದದಲ್ಲಿ ಕಾಂಗ್ರೆಸ್ ಬಹುಮತ ಪಡೆದದ್ದರಿಂದ ಜನರ ಬದುಕಿಗೆ ಆಗಲಿರುವ ಅನಾಹುತ. ರಾಜ್ಯಾಧಿಕಾರ ಕಾರ್ಪೊರೇಟ್ ಶಕ್ತಿಗಳ ಪಾಲಾಗುವುದರಿಂದ ಆಗುವ ಅನಾಹುತ. ಇಷ್ಟು ಮಾತ್ರವಲ್ಲದೆ ಇಡೀ ದೇಶವನ್ನೇ ಹರಾಜು ಹಾಕುವ ಮತ್ತೊಂದು ಸಂಚಿಗೂ ಈ ಬಹುಮತದ ನಂತರ ಚಾಲನೆ ದೊರೆತಿದೆ.

ಅಮೆರಿಕ ಮತ್ತು ಐರೋಪ್ಯ ಒಕ್ಕೂಟದಂತಹ ಶ್ರೀಮಂತ ದೇಶಗಳು ಭಾರತದಂತ ಬಡದೇಶಗಳ ಕೃಷಿ ಮಾರುಕಟ್ಟೆ ಮತ್ತು ಸಂಪನ್ಮೂಲವನ್ನು ಲೂಟಿ ಹೊಡೆಯಲು ವಿಶ್ವ ವಾಣಿಜ್ಯ ಸಂಸ್ಥೆಯನ್ನು ಕಟ್ಟಿಕೊಂಡಿದ್ದರೂ ಈ ಹುನ್ನಾರಗಳನ್ನು ಬಡ ದೇಶಗಳು ವಿರೋಧಿಸುತ್ತಾ ಬಂದಿದ್ದವು. ಬಡ ದೇಶಗಳು ತಮ್ಮ ಮಾರುಕಟ್ಟೆಯನ್ನು ಸಂಪೂರ್ಣವಾಗಿ ಈ ಶ್ರೀಮಂತ ದೇಶಗಳಿಗೆ ತೆರೆದಿಡಬೇಕೆಂದು ಮತ್ತು ತಮ್ಮ ದೇಶದ ರೈತರಿಗೆ ಕೊಡುತ್ತಿದ್ದ ಸಬ್ಸಿಡಿ ಸಹಾಯವನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂದು ಒತ್ತಾಯಿಸುತ್ತಿದ್ದ ಈ ದೇಶಗಳು ತಮ್ಮ ದೇಶಗಳ ಮಾರುಕಟ್ಟೆಯನ್ನಾಗಲೀ ಅಥವಾ ತಮ್ಮ ರೈತರಿಗೆ ಕೊಡುತ್ತಿದ್ದ ಸಬ್ಸಿಡಿಯನ್ನಾಗಲೀ ಕಿಂಚಿತ್ತೂ ಕಡಿಮೆ ಮಾಡುತ್ತಿಲ್ಲ. ಬಡ ದೇಶಗಳು ಇದನ್ನು ವಿರೋಧಿಸುತ್ತಿರುವುದರಿಂದ 2001ರಿಂದ ವಿಶ್ವ ವಾಣಿಜ್ಯ ಸಂಘಟನೆಯಲ್ಲಿ ಯಾವುದೇ ಹೊಸ ಮಾತುಕತೆಗಳಾಗಿರಲಿಲ್ಲ. ಈಗ 2008ರ ಜುಲೈ 21ರಂದು ಅಣು ಒಪ್ಪಂದದ ಬಗ್ಗೆ ಸದನದಲ್ಲಿ ವಿಶ್ವಾಸಮತ ಕೋರುತ್ತಿರುವ ಹೊತ್ತಿನಲ್ಲೇ ಜಿನಿವಾದಲ್ಲಿ ಬಡ ದೇಶಗಳನ್ನು ಬಗ್ಗಿಸಲು ಅಮೆರಿಕ ಹೊಸ ಸಂಚನ್ನು ಹೊಸೆದಿತ್ತು. ಅದು ಬಡ ದೇಶಗಳಲ್ಲೇ ಒಡಕು ತಂದು ಆಳುವ ಸಾಮ್ರಾಜ್ಯಶಾಹಿಗಳ ಹಳೆಯ ತಂತ್ರ. ಅದರಂತೆ ವಿಶ್ವ ವಾಣಿಜ್ಯ ಸಂಘಟನೆಯಲ್ಲಿ 145 ದೇಶಗಳಿದ್ದರೂ 2008 ಜುಲೈ 21ರಿಂದ ಒಂದು ವಾರಗಳ ಕಾಲ ಕೇವಲ 35 ದೇಶಗಳ ವಿಶೇಷ ಸಭೆ ಕರೆದು ಅವುಗಳ ನಡುವೆ ವಿಶೇಷ ಒಪ್ಪಂದ ಕುದುರಿಸಿ ಕೊಳ್ಳುವ ಸಂಚು ನಡೆದಿತ್ತು. ಅದು ಮುರಿದು ಬೀಳುವ ಸಂಭವ ಇದ್ದಾಗ ಇಲ್ಲಿ ಕಾಂಗ್ರೆಸ್ ಅವಕಾಶವಾದಿಗಳ ಬೆಂಬಲ ಪಡೆದು ಎಡರಂಗದ ಬೆಂಬಲವಿಲ್ಲದೆ ಬಹುಮತ ಪಡೆದೊಡನೆ ಅಲ್ಲಿ ಭಾರತವು ಚೀನಾ, ಆಸ್ಟ್ರೇಲಿಯಾ ಮತ್ತು ಬ್ರೆಜಿಲ್ ಜೊತೆಗೂಡಿ ಅಮೆರಿಕದ ಒಡೆದಾಳುವ ಸಂಚಿಗೆ ಒಪ್ಪಿಗೆ ಕೊಟ್ಟಿದೆ. ಇದರಿಂದ ಭಾರತದ ರೈತರ ಬಿಕ್ಕಟ್ಟು ಮತ್ತಷ್ಟು ಹೆಚ್ಚುತ್ತದೆ. ಆತ್ಮಹತ್ಯೆಗಳು ಇನ್ನಷ್ಟು ಹೆಚ್ಚಾಗುತ್ತವೆ ಮಾತ್ರವಲ್ಲದೆ ಇತರ ಬಡ ದೇಶಗಳ ಆಸಕ್ತಿಗೂ ದ್ರೋಹ ಬಗೆದಂತಾಗಿದೆ.

ಹೀಗಾಗಿ ಅಣುಒಪ್ಪಂದದಲ್ಲಿ ಗೆದ್ದದ್ದು ಕಾರ್ಪೊರೇಟ್ ಇಂಡಿಯಾ. ಸೋತದ್ದು ಬಡ ಭಾರತ. ಅಲ್ಲವೇ?

ಬೇಜವಾಬ್ದಾರಿ ಟೈಮ್ಸ್‌ಗೆ ಕೆಎಫ್‌ಡಿ ಗೂಸಾ!

ಬೆಂಗಳೂರಿನಲ್ಲಿ ಕಳೆದ ಶುಕ್ರವಾರ ನಡೆದ ಬಾಂಬ್ ಬ್ಲಾಸ್ಟ್‌ಗಳಿಂದ ಕೆಲವು ಸಾವುನೋವುಗಳ ಹೊರತಾಗಿ ಸಾರ್ವಜನಿಕರಿಗೆ ಹೆಚ್ಚು ತೊಂದರೆಯಾಗಲಿಲ್ಲ. ಆದರೆ ಇದರಿಂದ ನಿರಾಶೆಗೊಂಡಂತಿರುವ ಕೆಲವು ಮಾಧ್ಯಮಗಳ ಬೇಜವಾಬ್ದಾರಿ ಮತ್ತು ಬೆಂದ ಮನೆಯಲ್ಲಿ ಗಳ ಹಿರಿಯುವಂತ ಸೆನ್ಸೇಷನಲ್ ಪತ್ರಿಕೋದ್ಯಮ ಮಾತ್ರ ಸಾರ್ವಜನಿಕರ ನೆಮ್ಮದಿಯನ್ನು ಹಾಳು ಮಾಡುವ ತೀರ್ಮಾನ ಮಾಡಿದಂತಿದೆ. ಪ್ರಾರಂಭದಲ್ಲಿ ಇದು ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ವರದಿಗೊಂಡ ರೀತಿ ನೋಡಿ. "ಬೆಂಗಳೂರು ತತ್ತರ", "ಉಗ್ರಗಾಮಿಗಳ ಕೈವಾಡ 'ಶಂಕೆ'", "ಲಷ್ಕರ್ ಇ ತೊಯ್ಬಾ ಹಸ್ತ".. ಇತ್ಯಾದಿಗಳು.

ಕೆಲವು ಕಡೆ ಟ್ರಾಫಿಕ್ ಜಾಮ್‌ಗಳಾಗಿದ್ದದ್ದು ನಿಜವೇ ಆಗಿದ್ದರೂ ಮಿಕ್ಕಂತೆ ಬೆಂಗಳೂರಿನಲ್ಲಿ ಎಲ್ಲವೂ ಸುಗಮವಾಗಿಯೇ ಸಾಗಿತ್ತು. ಅಂಗಡಿ, ವಾಹನ ಸಂಚಾರ ಎಲ್ಲವೂ ಮಾಮೂಲಿನಂತೆಯೇ ಇದ್ದರೂ ಟೈಮ್ಸ್ ಆಫ್ ಇಂಡಿಯಾ ಎಂಬ ಕಾರ್ಪೊರೇಟ್ ಉದ್ಯಮಿಗಳ ಮತ್ತು ಎಲೈಟ್ ಬೆಂಗಳೂರಿಗರ ಇಂಗ್ಲಿಷ್ ಪತ್ರಿಕೆಯ ಸಂಪಾದಕ ಬಲರಾಮ್ ಬೆಂಗಳೂರಿನಲ್ಲಿ ಎಲ್ಲವೂ ಸ್ತಬ್ಧಗೊಂಡಿದೆ ಎಂದು ಎಂಜಿ ರೋಡಿನಲ್ಲೇ ಕೂತುಕೊಂಡು ಅರಚುತ್ತಿದ್ದ. ಹಾಗೆ ನೋಡಿದರೆ ಈ ಪತ್ರಿಕೆಗಳು ಜನರ ಆತಂಕವನ್ನೇ ಬಂಡವಾಳವನ್ನಾಗಿ ಮಾಡಿಕೊಂಡಿದ್ದಾವೆ. ಜನರ ಆತಂಕ ಹೆಚ್ಚಿದಷ್ಟು ತಮ್ಮ ಸುದ್ದಿ ಮಾರಾಟವಾಗುವುದು ಸುಲಭ ಎಂದು ಅರ್ಥ ಮಾಡಿಕೊಂಡಿರುವ ಈ ಮಾಧ್ಯಮಗಳು ಇಂಥ ಸಂದರ್ಭವನ್ನು ಬಳಸಿಕೊಂಡು ಪೈಪೋಟಿಯಲ್ಲಿ ಆತಂಕವನ್ನು ಬಿತ್ತುತ್ತವೆ. ಭೀತಿಯ ನೆಲದಲ್ಲಿ ಅರ್ಧ ಸತ್ಯ ಮತ್ತು ಅಸತ್ಯಗಳ ಗೊಬ್ಬರವನ್ನು ಹಾಕಿ ಹುಲುಸಾದ ಬೆಳೆಯನ್ನು ತೆಗೆಯುತ್ತಿವೆ.

ಬೆಂಗಳೂರಿನಲ್ಲಿ 'ಸರಣಿ ಬಾಂಬ್' ಸ್ಫೋಟದ ಹಿನ್ನೆಲೆಯಲ್ಲಿ ಇಂಗ್ಲಿಷ್ ಮಾಧ್ಯಮಗಳ ಅದರಲ್ಲೂ ಟೈಮ್ಸ್ ಆಫ್ ಇಂಡಿಯಾದ ಬೇಜವಾಬ್ದಾರಿ ಮಿತಿಮೀರಿದೆ. ಬೆಂಗಳೂರು ಎಂದರೆ ಸಾಫ್ಟ್‌ವೇರಿಗರು ಮಾತ್ರ ಎಂದು ಅರ್ಥ ಮಾಡಿಕೊಂಡಿರುವ ಈ ಅರ್ಥಹೀನ ಪತ್ರಿಕೆ ಬಾಂಬ್ ಇಟ್ಟ ಜಾಗಗಳು ಬಡ ಮುಸ್ಲಿಮರು ವಾಸಿಸುವ ಪ್ರದೇಶಗಳೇ ಆಗಿದ್ದರೂ ಸಾಫ್ಟ್‌ವೇರಿಗರೇ ಬಾಂಬಿನ ಗುರಿಯಾಗಿದ್ದರು ಎಂದು ಬರೆಯುತ್ತದೆ. ಮಡಿವಾಳ ಎಂಬ ಪ್ರದೇಶ ಸಾಫ್ಟ್‌ವೇರ್ ಕಂಪನಿಗಳಿರುವ ಹೊಸೂರಿನಿಂದ ಮೈಲುಗಟ್ಟಲೆ ದೂರದಲ್ಲಿದ್ದರೂ ಹೊಸೂರು ರಸ್ತೆಯಲ್ಲಿ ಬಾಂಬ್‌ಬ್ಲಾಸ್ಟ್ ಎಂದು ಬಣ್ಣಕಟ್ಟುತ್ತದೆ. ಕೊನೆಗೆ ಯಾವ ರೀತಿ ಈ ಬಾಂಬ್ ಬ್ಲಾಸ್ಟ್‌ಗೂ ಸಾಫ್ಟ್‌ವೇರ್‌ಗೂ ಸಂಬಂಧ ಕಟ್ಟಬೇಕೆಂದು ತಿಳಿಯದೆ ಬೆಂಗಳೂರಿನ ಜನರೆಲ್ಲಾ ಓಡಾಡುವ ನಗರದ ಮಧ್ಯಭಾಗದಲ್ಲಿರುವ ರಿಚ್‌ಮಂಡ್ ವೃತ್ತದಲ್ಲಿ ಬಂದು ಬಾಂಬ್‌ಬ್ಲಾಸ್ಟ್ ಆಗಲು ಕಾರಣ ಅದು ಸಾಫ್ಟ್‌ವೇರಿಗರು ಓಡಾಡುತ್ತಿದ್ದ ಜಾಗವೆಂದು ಹಾಸ್ಯಾಸ್ಪದ ವಿವರಣೆ ಕೊಟ್ಟಿದೆ.

ಇವೆಲ್ಲವನ್ನು ಹಾಸ್ಯಪ್ರಜ್ಞೆಯಿಂದ ಸಹಿಸಿಕೊಳ್ಳಬಹುದೇನೋ! ಆದರೆ ಮರುದಿನ ಬಾಂಬ್ ಬ್ಲಾಸ್ಟ್ ಅನ್ನು ಕೆಎಫ್‌ಡಿ ಸಂಘಟನೆಯ ತಲೆಗೆ ಕಟ್ಟಲು ನಡೆಸಿದ ಪ್ರಯತ್ನ ಮಾತ್ರ ಅಕ್ಷಮ್ಯವಾಗಿತ್ತು. ಈ ನೀತಿಗೆಟ್ಟ ಪತ್ರಿಕೆ ಬಾಂಬ್ ಸ್ಫೋಟವನ್ನು ಕೆಎಫ್‌ಡಿ ಸಂಘಟನೆಯೇ ಮಾಡಿರಬಹುದೆಂದು ಕಪೋಲಕಲ್ಪಿತ, ಆಧಾರರಹಿತ ಮಿಥ್ಯೆಯನ್ನು ಸತ್ಯವೆಂಬಂತೆ ತನ್ನ ಮುಖಪುಟದಲ್ಲಿ ಪ್ರಕಟಿಸಿತು.

ಆದರೆ ಕಳೆದ ಹಲವು ವರ್ಷಗಳಿಂದ ಜನ ಹೋರಾಟಗಳಿಗೆ ಮುಸ್ಲಿಂ ಯುವಜನತೆಯನ್ನು ಸಂಘಟಿಸುತ್ತಿರುವ, ಮುಸ್ಲಿಮರ ಅಭಿವೃದ್ಧಿಗೆ ಕೆಲಸ ಮಾಡುತ್ತಿರುವ ಮತ್ತು ಹಕ್ಕುಗಳಿಗಾಗಿ ಹೋರಾಡುತ್ತಿರುವ ಸಂಘಟನೆ ಕೆಎಫ್‌ಡಿ. ಮಾತ್ರವಲ್ಲ ರಾಜ್ಯದ ಇತರ ಹೋರಾಟ ನಿರತ ಸಂಘಟನೆಗಳೊಂದಿಗೆ ಸೇರಿಕೊಂಡು ಅನ್ಯಾಯ ಮತ್ತು ಅನೀತಿಗಳಿರದ ಸಮಾಜವನ್ನು ಕಟ್ಟಬೇಕೆಂದು ಬದ್ಧತೆಯಿಂದ ಶ್ರಮಿಸುತ್ತಿರುವ ಜನಪರ ಸಂಘಟನೆ ಕೆಎಫ್‌ಡಿಯೆಂಬುದು ಕರ್ನಾಟಕ ಜನತೆಗೂ ಗೊತ್ತು, ಸರ್ಕಾರಕ್ಕೂ ಗೊತ್ತು.

ಆದರೂ ಸರ್ಕಾರ ಮತ್ತು ಸಂಘ ಪರಿವಾರ ನಡೆಸುವ ಅತ್ಯಾಚಾರಗಳ ವಿರುದ್ಧ ರಾಜಿ ರಹಿತವಾದ ಹೋರಾಟಗಳನ್ನು ಮತ್ತು ಸಮೂಹ ಸಂಘಟನೆಗಳನ್ನು ಕೆಎಫ್‌ಡಿ ಕಟ್ಟುತ್ತಾ ವೇಗವಾಗಿ ಬೆಳೆಯುತ್ತಿದೆ ಎಂಬ ಏಕೈಕ ಕಾರಣಕ್ಕಾಗಿ ಚಡ್ಡಿಗಳು, ಚಡ್ಡಿ ಪೊಲೀಸರು ಮತ್ತು ಚಡ್ಡಿ ಪತ್ರಿಕೆಗಳು ಅದರ ಬಗ್ಗೆ ಇಲ್ಲ ಸಲ್ಲದ ಅಪಪ್ರಚಾರ ಮಾಡುತ್ತಾ ಅದನ್ನು ಬಗ್ಗುಬಡೆಯಲು ಯತ್ನಿಸುತ್ತಿವೆ. ಇದು ಹೊಸದೇನಲ್ಲ, ಕೆಲವು ತಿಂಗಳ ಹಿಂದೆ 'ವಿಜಯ ಕರ್ನಾಟಕ' ಎಂಬ ಕೇಸರಿ ಪತ್ರಿಕೆಯಲ್ಲಿ ಅರೆಬೆಂದ ಅಂಕಣಕಾರ ಪ್ರತಾಪ್ ಸಿಂಹ ಎಂಬುವವನು ನಗ್ನ ಮುಸ್ಲಿಂ ದ್ವೇಷದ ಕರಪತ್ರದಂತಿರುವ ತನ್ನ ಅಂಕಣವಾದ 'ಬೆತ್ತಲೆ ಜಗತ್ತಿ'ನಲ್ಲಿ ಕೆಎಫ್‌ಡಿ ಬಗ್ಗೆ ಇದೇ ರೀತಿ ಆಧಾರ ರಹಿತ ಆರೋಪಗಳನ್ನು ಮಾಡಿದ್ದ.

ಇದರಿಂದ ನೊಂದು ಕೆರಳಿದ್ದ ಕೆಎಫ್‌ಡಿ ಸಂಘಟಕರು ಮತ್ತು ಕಾರ್ಯಕರ್ತರು ವಿಜಯ ಕರ್ನಾಟಕ ಕಚೇರಿಗೆ ತೆರಳಿ ಸಮಜಾಯಿಷಿಯನ್ನು ಆಗ್ರಹಿಸಿದ್ದರು. ಆಧಾರ ರಹಿತ ಬರಹಗಳನ್ನು ದಕ್ಕಿಸಿಕೊಳ್ಳುವುದಾದರೂ ಹೇಗೆ? ಹೀಗಾಗಿ ಕೂಡಲೇ ಕ್ಷಮೆ ಯಾಚನೆ ಮಾಡಿದ ಸಂಪಾದಕ ವಿಶ್ವೇಶ್ವರ ಭಟ್ಟರು ಮರುದಿನ ಮುಖಪುಟದಲ್ಲಿಯೇ ಬಹಿರಂಗವಾಗಿ ಕೆಎಫ್‌ಡಿಯ ಕ್ಷಮೆ ಯಾಚಿಸಬೇಕಾಯಿತು.

ಇವತ್ತು (ಶನಿವಾರ, ಜುಲೈ 26) ಸಹ ಕೆಎಫ್‌ಡಿ ಕಾರ್ಯಕರ್ತರು ತಮ್ಮ ವಿರುದ್ಧ ನಡೆಯುತ್ತಿರುವ ಈ ವ್ಯವಸ್ಥಿತ ಸಂಚನ್ನು ಸಹಿಸದೆ ಟೈಮ್ಸ್ ಆಫ್ ಇಂಡಿಯಾ ಕಚೇರಿಗೆ ತೆರಳಿ ಸಂಪಾದಕ ಬಲರಾಮರಿಗೆ ತಾವು ಪ್ರಕಟಿಸಿದ ಸುದ್ದಿಯ ಆಧಾರವೇನು ಎಂದು ಪ್ರಶ್ನಿಸಿದರು. ಆಧಾರವಿದ್ದರೆ ಸಮರ್ಥಿಸಿಕೊಳ್ಳಬಹುದಾಗಿದ್ದ ಬಡಾಯಿ ಬಲರಾಮರು ಕೆಎಫ್‌ಡಿಯಿಂದ ಈ ರೀತಿ ಪ್ರತಿಕ್ರಿಯೆ ಬರುತ್ತದೆಂದು ಎಣಿಸಿರಲಿಲ್ಲವಾದ್ದರಿಂದ ಕಂಗಾಲಾಗಿಬಿಟ್ಟರು. ತಮ್ಮ ಬರಹಕ್ಕೆ ಯಾವ ರೀತಿಯಿಂದಲೂ ಸಮರ್ಥನೆ ಒದಗಿಸಲಾಗದ ಸಂಪಾದಕರು ಬಂದಿದ್ದ ಕೆಎಫ್‌ಡಿ ಸದಸ್ಯರ ಕ್ಷಮೆ ಯಾಚಿಸಿದ್ದಲ್ಲದೆ ಮರುದಿನ ಅದನ್ನು ಮುಖಪುಟದಲ್ಲಿ ಪ್ರಕಟಿಸುವುದಾಗಿಯೂ ಒಪ್ಪಿಕೊಂಡರು.

Report on KFD not correct

TIMES NEWS NETWORK

Bangalore: The report about the Karnataka Forum for Dignity (TOI, July 26), which referred to its suspected involvement in the serial blasts on Friday, was found to be incorrect. On the contrary, the KFD had condemned the incidents on Friday. In a press release, its general secretary Abdul Latheef said: "We strongly condemn the serial bomb blasts that happened on Friday in different parts of Bangalore killing an innocent woman and injuring about 20 persons. The anti-social elements who have engineered these acts might have the ulterior motives such as to disturb the peaceful atmosphere prevailing in the city, to create panic among the citizens and to divide the people."

The error is deeply regretted.

ಕೆಎಫ್‌ಡಿಯು ತಮ್ಮ ಬಗ್ಗೆ ನಡೆಯುತ್ತಿರುವ ಅಪಪ್ರಚಾರದ ವಿರುದ್ಧ ಪಡೆದ ಎರಡನೆ ಗೆಲುವು. ಆದರೆ ಪದೇ ಪದೇ ನೀತಿ ರಹಿತ ಪತ್ರಿಕೋದ್ಯಮವು ಒಂದು ಪ್ರಾಮಾಣಿಕ ಜನ ಸಂಘಟನೆಯೊಂದಕ್ಕೆ, ಅದು ಮುಸ್ಲಿಮರನ್ನು ಸಂಘಟಿಸುತ್ತಿದೆ ಎನ್ನುವ ಏಕೈಕ ಕಾರಣಕ್ಕೆ ಮಸಿ ಬಳಿಯುವ ಪ್ರಯತ್ನ ನಡೆಸುತ್ತಿರುವುದು ಪತ್ರಿಕೋದ್ಯಮಕ್ಕೆ ಮಾತ್ರವಲ್ಲ ಪ್ರಜಾತಂತ್ರಕ್ಕೇ ಒಂದು ಕಳಂಕ!

■ ಶಿವು

ಗುವಾ ಎಂಬ ಅಪ್ರತಿಮ ಸುಂದರಿ




ಕಂಡಹಾಗೆ

■ ಗೌರಿ ಲಂಕೇಶ್

"ಆರೋಗ್ಯವಾಗಿರುವ ಎಲ್ಲರೂ ಸುಂದರವಾಗಿರುತ್ತಾರೆ. ಅದ್ದರಿಂದಲೇ ಶ್ರೇಷ್ಠ ಕ್ರೀಡಾಪಟುಗಳು ಕುರೂಪಿಗಳಾಗಿರುವುದಿಲ್ಲ. ಅವರು ಸೌಂದರ್ಯ ಸ್ಪರ್ಧೆಯಲ್ಲಿ ಭಾಗವಹಿಸದೆ ಇರಬಹುದು. ಆದರೆ ಅವರ ಸಾಧನೆ, ಯಶಸ್ಸು, ಆರೋಗ್ಯ-ಎಲ್ಲದರೂ ಸೇರಿ ಸುಂದರವಾಗಿರುತ್ತಾರೆ. ಬರೀ ಸುಂದರವಾಗಿರುವವರ ದೊಡ್ಡ ಗೋಳು ಯಾವುದು ಗೊತ್ತೆ? ನಾರ್ಸಿಸಂ ಅಥವಾ ಸ್ವಪ್ರೇಮ."

ಕೆಲ ದಿನಗಳಲ್ಲೇ ಚೀನಾದಲ್ಲಿ ಒಲಂಪಿಕ್ಸ್ ಕ್ರೀಡಾಕೂಟ ಪ್ರಾರಂಭವಾಗಲಿದ್ದು, ಅದರಲ್ಲಿ ಭಾಗವಹಿಸುತ್ತಿರುವ ನೂರಾರು ಕ್ರೀಡಾಪಟುಗಳು ಜನರ ಗಮನ ಸೆಳೆಯುತ್ತಿದ್ದಾರೆ. ಹಾಗೆ ನನ್ನ ಗಮನ ಸೆಳೆದಾಕೆ ಚೀನಾದಲ್ಲಿ 'ಡೈವಿಂಗ್ ರಾಜಕುಮಾರಿ' ಎಂದು ಖ್ಯಾತಳಾಗಿರುವ ಗುವಾ ಜಿಂಗ್‌ಜಿಂಗ್. ಈಕೆಯ ಬಗ್ಗೆ ಇಂಟರ್‌ನೆಟ್‌ನ ವೆಬ್‌ಸೈಟ್‌ಗಳಲ್ಲಿ ಓದುತ್ತಿದ್ದಾಗ ಮೇಲೆ ಉಲ್ಲೇಖಿಸಿರುವ ಅಪ್ಪ ಬರೆದಿದ್ದ ಸಾಲುಗಳು ನೆನಪಾದವು.



ಈ ಗುವಾ ಎಷ್ಟು ಶ್ರೇಷ್ಠ ಕ್ರೀಡಾಪಟುವೋ ಅಷ್ಟೇ ಸುಂದರಿ ಕೂಡ. ಆರು ವರ್ಷ ವಯಸ್ಸಾಗಿದ್ದಾಗಲೇ ಈಜಲು ಪ್ರಾರಂಭಿಸಿದ ಗುವಾ ಈಗಾಗಲೇ ನಾಲ್ಕು ಒಲಂಪಿಕ್ ಪದಕಗಳನ್ನು ಗೆದಿದ್ದಾಳಲ್ಲದೆ, ಹಲವಾರು ವಿಶ್ವದಾಖಲೆಗಳನ್ನು ಸ್ಥಾಪಿಸಿದ್ದಾಳೆ. ಬರಲಿರುವ ಒಲಂಪಿಕ್ಸ್‌ನಲ್ಲಿ ಆಕೆ ಇನ್ನೆರಡು ಚಿನ್ನದ ಪದಕಗಳನ್ನು (ಅದು ಆಕೆಗೆ ತುಂಬಾ ಸುಲಭ ಎನ್ನಲಾಗುತ್ತಿದೆ) ಗೆದ್ದರೆ ಇಲ್ಲಿಯ ತನಕ ಯಾವ ಮಹಿಳೆಯೂ ಗೆದ್ದಿಲ್ಲದಿರುವಷ್ಟು ಒಲಂಪಿಕ್ ಪದಕಗಳನ್ನು ಆಕೆ ಗೆದ್ದಂತಾಗುತ್ತದೆ.

ಗುವಾಳ ಬದುಕು ಕೇವಲ ಈಜುಕೊಳಕ್ಕೆ ಧುಮುಕುವ ಕ್ರೀಡೆಗೆ ಸೀಮಿತವಾಗಿದ್ದರೆ ಆಕೆ ಇಷ್ಟೊಂದು ಗಮನ ಸೆಳೆಯುತ್ತಿರಲಿಲ್ಲ. ಸುಂದರಿಯೂ ಆದ ಗುವಾ ಇವತ್ತು ಚೈನಾದಲ್ಲಿ ಅತಿ ಬೇಡಿಕೆ ಹೊಂದಿರುವ ರೂಪದರ್ಶಿಯೂ ಆಗಿದ್ದಾಳೆ. ಅವಳ ಅಂದದ ಮುಖ ಕೋಕೊ ಕೋಲಾದಿಂದ ಹಿಡಿದು ಸಾಬೂನುಗಳ ಜಾಹೀರಾತುಗಳ ತನಕ ಚೀನಾದ ಬಸ್‌ಗಳ ಮೇಲೆ, ಹೋರ್ಡಿಂಗ್‌ಗಳ ಮೇಲೆ ರಾರಾಜಿಸುತ್ತಿವೆ.

ಇದು ವಿಶೇಷವೇನಲ್ಲ, ಭಾರತದಲ್ಲೂ ಕ್ರಿಕೆಟ್ ಆಟಗಾರರು ಹಲವಾರು ಜಾಹೀರಾತುಗಳಲ್ಲಿ ರೂಪದರ್ಶಿಗಳಾಗಿದ್ದಾರೆ. ಆದರೆ ಗುವಾ ಇವರಂಥಲ್ಲ, ಚೀನಾ ಭಾರತದಂತಲ್ಲ. ಗುವಾ ಚಿಕ್ಕವಳಾಗಿದ್ದಾಗಿನಿಂದಲೂ ಆಕೆಯ ತರಬೇತಿಗೆ ಅಲ್ಲಿನ ಸರ್ಕಾರ ಅಪಾರ ಹಣವನ್ನು ವೆಚ್ಚ ಮಾಡಿರುವುದರಿಂದ ಆಕೆ ಯಾವ ಸಾಬೂನಿಗೆ ರೂಪದರ್ಶಿಯಾಗಬೇಕೆಂದು, ಎಲ್ಲಿ ಮತ್ತು ಎಂತಹ ಶೂಟಿಂಗ್‌ನಲ್ಲಿ ಭಾಗವಹಿಸಬೇಕೆಂದು ಅಲ್ಲಿನ ಕ್ರೀಡಾ ಮಂಡಳಿಯೇ ನಿರ್ಧರಿಸುತ್ತದೆ. ಹಾಗೆಯೇ ಆಕೆಗೆ ನೀಡುವ ಸಂಭಾವನೆಯನ್ನು ಕೂಡ.



ಇದೆಲ್ಲದರ ಮಧ್ಯೆ, ಆಕೆಯ ವಯಸ್ಸಿಗೆ ತಕ್ಕಂತೆ ಗುವಾಳಿಗೂ ಪ್ರಿಯಕರ, ರೋಮಾನ್ಸ್ ಎಂಬೆಲ್ಲ ಬಯಕೆ. ಆದರೆ ಕ್ರೀಡಾಪಟುವಾಗಿರುವ, ಯಶಸ್ವಿ ರೂಪದರ್ಶಿಯಾಗಿರುವ ಅವಳ ಬದುಕು ಗಾಜಿನ ಮನೆಯಂತಾಗಿದೆ. ಅದರಲ್ಲೂ ಈಗ ಚೀನಾದ ಮಾಧ್ಯಮಗಳೂ ಪಾಪರಾಜಿಯರ ಪ್ರವೃತ್ತಿ ಬದುಕಿನ ಬಗ್ಗೆಯೇ ಹೆಚ್ಚು ಆಸಕ್ತಿ ಹೊಂದಿರುವುದರಿಂದ ಗುವಾ ಯಾವ ಯುವಕನನ್ನು ಭೇಟಿ ಆದರೂ ಅದೇ ಎಲ್ಲೆಡೆ ಸುದ್ದಿಯಾಗುತ್ತದೆ. ಅಷ್ಟೇ ಅಲ್ಲ ಆಕೆಯ ಬಗ್ಗೆ ಕಪೋಲಕಲ್ಪಿತ ವರದಿಗಳನ್ನು ಅಲ್ಲಿನ ಮಾಧ್ಯಮಗಳು ಹುಟ್ಟಿ ಹಾಕುತ್ತಿವೆ.

ಸಹಜವಾಗಿಯೇ ಇದೆಲ್ಲದರಿಂದ ಬೇಸತ್ತಿರುವ ಗುವಾ ತಾನು ಸದ್ಯದಲ್ಲೇ ನಿವೃತ್ತಿ ಹೊಂದಲಿದ್ದೇನೆ ಎಂದು ಘೋಷಿಸಿದಳು. ಅವಳ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವ ಬದಲು "ಆಕೆ ಕ್ರೀಡೆಗೆ ವಿದಾಯ ಹೇಳಿ ಅಪಾರ ಹಣ ತರುವ ಮಾಡಲಿಂಗ್ ಜಗತ್ತಿನತ್ತ ಆಕರ್ಷಿತಳಾಗಿದ್ದಾಳೆ"ಎಂದೇ ಎಲ್ಲರು ದೂರಿದರು.

ಅವರನ್ನೆಲ್ಲ ಸುಮ್ಮನಾಗಿಸುವಂತೆ ಆಕೆ ಈಗ ಒಲಂಪಿಕ್ಸ್‌ಗೆ ರೆಡಿಯಾಗಿದ್ದಾಳೆ; ಹಲವು ಪದಕಗಳನ್ನು ತನ್ನ ಮುಡಿಗೇರಿಸಿಕೊಳ್ಳಲು ಸಜ್ಜಾಗಿದ್ದಾಳೆ; ವಿಶ್ವದಾಖಲೆ ಸ್ಥಾಪಿಸುವ ಹುಮ್ಮಸ್ಸಿನಲ್ಲಿದ್ದಾಳೆ ಗುವಾ ಎಂಬ ಅಪ್ರತಿಮ ಸುಂದರಿ....

* * *

ರಾಜ್ಯದಲ್ಲಿ ಬಿಜೆಪಿ ಸರ್ಕಾರವನ್ನು ಭದ್ರಪಡಿಸಿಕೊಳ್ಳಲು ಗಣಿ ರೆಡ್ಡಿಗಳು ಆರು ಪಕ್ಷೇತರರನ್ನು 'ಒಪ್ಪಿಸಿದ'ರಲ್ಲದೆ, ಆನಂತರ ಐವರು ಬೇರೆ ಪಕ್ಷದ ಶಾಸಕರನ್ನೂ ತಮ್ಮ ಪಕ್ಷಕ್ಕೆ 'ಸೆಳೆದು'ಕೊಳ್ಳುವಲ್ಲಿ ಯಶಸ್ವಿಯಾದರು. ಈ 'ಪ್ರಾಮಾಣಿಕ' ಕಾರ್ಯಾಚರಣೆಗೆ ಅವರೆಷ್ಟು ಕೋಟಿ ರೂಪಾಯಿಗಳನ್ನು ಚೆಲ್ಲಿದರು ಎಂಬುದು ಕೊಂಡವರಿಗೆ ಮತ್ತು ಮಾರಿಕೊಂಡವರಿಗೆ ಮಾತ್ರ ಗೊತ್ತು.

ಆದರೆ ಇದೇ ಬಿಜೆಪಿ "ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷಗಳು ನಮ್ಮ ಸಂಸದರನ್ನು ಖರೀದಿಸಲು ಯತ್ನಿಸುತ್ತಿದ್ದೆ ಎಂದು ಬೊಬ್ಬೆ ಹಾಕಿದ್ದು ಅಸಹ್ಯಕರವಾಗಿತ್ತು. ತಾನು ಮಾಡಿದ ಅನೈತಿಕ ರಾಜಕೀಯವನ್ನು ಮತ್ತೊಂದು ಪಕ್ಷ ಮಾಡಬಾರದು ಎಂದರೆ ಏನರ್ಥ? ಬಿಜೆಪಿಯು ತಾನು **'A party with a difference'** ಎಂದು ತೋರಿಸಿಕೊಳ್ಳಲು ತಾನು ಮಾತ್ರ ಶಾಸಕರ, ಸಂಸದರ ಖರೀದಿಯಲ್ಲಿ ತೊಡಗಬಹುದು, ಬೇರೆ ಪಕ್ಷಗಳು ತೊಡಗಬಾರದು ಎಂದರೆ ಹೇಗೆ?!

ಅದೆಲ್ಲ ಬದಿಗಿರಲಿ; ಕಳೆದ ಜುಲೈ 22 ರಂದು ಸಂಸತ್ತಿನಲ್ಲಿ ಯುಪಿಎ ಸರ್ಕಾರ ವಿಶ್ವಾಸಮತವನ್ನು ಯಾಚಿಸಿದಾಗ, ತನ್ನಿಂದ ಈ ಸರ್ಕಾರವನ್ನು ಉರುಳಿಸಲು ಸಾಧ್ಯವಿಲ್ಲ ಎಂಬುದು ಬಿಜೆಪಿಗೆ ಗೊತ್ತಾಯಿತು. ಆದರೆ ಅಂತಹ ಸೋಲನ್ನು ಸುಮ್ಮನೆ ಒಪ್ಪಿಕೊಂಡರೆ ಬಿಜೆಪಿ ಹೇಗೆ **'different'** ಆಗಿರಲು ಸಾಧ್ಯ? ಅದಕ್ಕೆ ಪ್ರಧಾನಿ ಮನಮೋಹನ್ ಸಿಂಗ್‌ರವರು ತಮ್ಮ ಉತ್ತರವನ್ನು ನೀಡುವ ಕೆಲಕ್ಷಣಗಳ ಮುನ್ನ ಬಿಜೆಪಿಯ ಮೂವರು ಸಂಸದರು ಒಂದು ಕೋಟಿ ರೂಪಾಯಿಗಳ ಕಂತೆಯನ್ನು ಸಂಸತ್ತಿನಲ್ಲಿ ಪ್ರದರ್ಶಿಸಿ ರಾಡಿ ಎಬ್ಬಿಸಿದರು.

ಅಂದಹಾಗೆ ಅವತ್ತು ಈ ಹಣವನ್ನು ಎತ್ತಿ ಎತ್ತಿ ತೋರಿಸುತ್ತಿದ್ದವರಲ್ಲಿ ಫಾಗನ್ ಸಿಂಗ್ ಕಲುಸ್ತೆ ಎಂಬ ಮಹನೀಯನೂ ಇದ್ದ. ಮಧ್ಯಪ್ರದೇಶದ ಮಾಂಡ್ಲ ಕ್ಷೇತ್ರದಿಂದ ಸಂಸತ್ತಿಗೆ ಚುನಾಯಿತನಾಗಿರುವ ಈ ಕಲುಸ್ತೆ ಎಷ್ಟು ಪ್ರಾಮಾಣಿಕ, ಎಂತಹ ಜನಸೇವಕ ಎಂಬುದಕ್ಕೆ ಇಲ್ಲೊಂದು ಉದಾಹರಣೆಗೆ ಇದೆ ನೋಡಿ. 2005ರ ಡಿಸೆಂಬರ್‌ನಲ್ಲಿ ಸ್ಟಾರ್ ನ್ಯೂಸ್ ಚಾನಲ್‌ನವರು 'ಆಪರೇಷನ್ ಚಕ್ರವ್ಯೂಹ' ಎಂಬ ಸ್ಟಿಂಗ್ ಕಾರ್ಯಾಚರಣೆಯನ್ನು ನಡೆಸಿದಾಗ, ತನ್ನ ಸಂಸತ್ ಸದಸ್ಯರ ಕ್ಷೇತ್ರ ಅಭಿವೃದ್ಧಿ ನಿಧಿಯಿಂದ ನಕಲಿ ಎನ್‌ಜಿಓಗಳಿಗೆ ಹಣ ಬಿಡುಗಡೆ ಮಾಡಲು ಈತ ಒಪ್ಪಿಕೊಂಡಿದ್ದ. ಆದರೆ ಈ ನಕಲಿ ಎನ್‌ಜಿಓಗಳು ತನ್ನ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುತ್ತಾರೆ ಎಂಬ ಕಾರಣಕ್ಕಲ್ಲ, ಬದಲಾಗಿ ತಾನು ಬಿಡುಗಡೆ ಮಾಡಿದ ಹಣದಲ್ಲಿ ಬರೋಬ್ಬರಿ 30% ಕಮಿಷನ್ ಅನ್ನು ತನಗೆ ನೀಡುತ್ತಾರೆಂಬ ನಂಬಿಕೆಯಿಂದ.


ಇಂತಹ ಭ್ರಷ್ಟನೊಬ್ಬ ಬೇರೆ ಪಕ್ಷದ ಭ್ರಷ್ಟತನದ ಬಗ್ಗೆ ಸಂಸತ್ತಿನಲ್ಲಿ ಬೊಬ್ಬೆ ಹಾಕುತ್ತಾನೆಂದರೆ, ಆತನ ಬೆಂಬಲಕ್ಕೆ ಬಿಜೆಪಿಯ 'ಭಾವಿ' ಪ್ರಧಾನಿ ಎಲ್.ಕೆ. ಅಡ್ವಾಣಿ ನಿಲ್ಲುತ್ತಾರೆಂದರೆ, ಬಿಜೆಪಿ ಎಷ್ಟು 'ವಿಭಿನ್ನ' ಎಂದು ಅರ್ಥಮಾಡಿಕೊಳ್ಳುವುದು ತುಂಬಾ ಸುಲಭವಾಗುತ್ತದೆ.

ಚೆಡ್ಡಿಗಳ ಆರಾಧ್ಯದೈವ ಎ.ಬಿ. ವಾಜಪೇಯಿ ಈ ಕಲುಸ್ತೆ ಎಂಬಾತನಿಗೆ ತಮ್ಮ ಸಂಪುಟದಲ್ಲಿ ಸಚಿವ ಸ್ಥಾನ ನೀಡಿದ್ದರು. ಹಾಗೆಯೇ ಈತನ 30% ಹಗರಣ ಹೊರಬಿದ್ದಾಗ ಆಗ ಬಿಜೆಪಿಯ ಅಧ್ಯಕ್ಷರಾಗಿದ್ದ ಅಡ್ವಾಣಿ ಈತನನ್ನು ತೋರಿಕೆಗೆ ಮಾತ್ರ ಒಂದು ವಾರದ ಮಟ್ಟಕ್ಕೆ ತಮ್ಮ ಪಕ್ಷದಿಂದ ಸಸ್ಪೆಂಡ್ ಮಾಡಿದ್ದರು. ನಿಜವಾಗಲೂ ಬಿಜೆಪಿ **'different'** ಅಲ್ಲವೆ.

ಕಾಂಗ್ರೆಸ್‌ನವರಾಗಲಿ, ಸಮಾಜವಾದಿ ಪಾರ್ಟಿಯವರಾಗಲಿ ಪ್ರಾಮಾಣಿಕರು, ಸಭ್ಯರು ಎಂದು ನಾನು ಹೇಳುತ್ತಿಲ್ಲ. ಆದರೆ ತಾನು ಇತರ ಪಕ್ಷಗಳಿಗಿಂತ ವಿಭಿನ್ನ, ತಾನು ಪ್ರಾಮಾಣಿಕ ಪಕ್ಷ ಎಂದೆಲ್ಲ ಹೇಳಿಕೊಳ್ಳುವ ಬಿಜೆಪಿಯ ಕಪಟತನವನ್ನು ಎಲ್ಲರೂ ಅರ್ಥ ಮಾಡಿಕೊಳ್ಳಲಿ ಎಂದಷ್ಟೇ.

* * * * *

ಮೊನ್ನಿನ ವಿಶ್ವಾಸ ಮತ ಯಾಚನೆಯ ಸಂದರ್ಭದಲ್ಲಿ ಪಿಡಿಪಿ ಪಕ್ಷದ ಮೆಹಬೂಬಾ ಮುಫ್ತಿ ಚೆನ್ನಾಗಿ ಮಾತನಾಡುತ್ತಾರೆ ಎಂದು ನಿರೀಕ್ಷಿಸಿದ್ದೆ. ಆದರೆ ಅವತ್ತು ಸದನದಲ್ಲಿ ಬಿಜೆಪಿ ಮತ್ತು ಎಡಪಕ್ಷಗಳು ಅದೆಷ್ಟು ಗಲಾಟೆ ಮಾಡುತ್ತಿದ್ದವೆಂದರೆ ಆಕೆ ಒಂದೆರಡು ಸಾಲುಗಳನ್ನು ಮಾತ್ರ ಮಾತನಾಡಿ ಸುಮ್ಮನೆ ಕೂತರು. ಆದರೆ ಕಾಶ್ಮೀರದಲ್ಲಿ ಪಿಡಿಪಿಯ ವಿರೋಧ ಪಕ್ಷವಾಗಿರುವ ನ್ಯಾಷನಲ್ ಕಾನ್ಫರೆನ್ಸ್‌ನ ಒಮರ್ ಅಬ್ದುಲ್ಲಾರವರನ್ನು ವಿರೋಧ ಪಕ್ಷದವರಿಂದ ಸುಮ್ಮನಾಗಿಸಲಾಗಲಿಲ್ಲ. ಆ ಅಬ್ಬರದ ನಡುವೆ ತಾನು ಸಿದ್ಧಪಡಿಸಿಕೊಂಡಿದ್ದ ಟಿಪ್ಪಣಿಗಳನ್ನು ಓದಿದರೆ ಯಾರೂ ಕೇಳಿಸಿಕೊಳ್ಳುವುದಿಲ್ಲ ಎಂದರಿತ ಅಬ್ದುಲ್ಲಾ ತನ್ನ ಮನಸ್ಸಿನಾಳದಿಂದ ನಿಜವಾಗಲೂ ಪ್ರಾಮಾಣಿಕವಾಗಿ ಮಾತನಾಡಿದರು. ಅದನ್ನು ಬಹಳಷ್ಟು ಕನ್ನಡ ಪತ್ರಿಕೆಗಳು ವರದಿ ಮಾಡಲಿಲ್ಲವಾದ್ದರಿಂದ ಅಬ್ದುಲ್ಲಾರವರ ಭಾಷಣದ ಕೆಲ ಸಾಲುಗಳನ್ನು ಇಲ್ಲಿ ನೀಡಿದ್ದೇನೆ.



"ನಾನು ಹತ್ತು ವರ್ಷಗಳಿಂದ ಈ ಸದನದ ಸದಸ್ಯನಾಗಿದ್ದೇನೆ ಮತ್ತು ನಾನು ಈ 10 ವರ್ಷಗಳಲ್ಲಿ ಈ ಸದನವನ್ನು ಎಂದೂ ಡಿಸ್ಟರ್ಬ್ ಮಾಡಲಿಲ್ಲ. ನಾನು ಆ ಬದಿಯಲ್ಲಿ ಮತ್ತು ಈ ಬದಿಯಲ್ಲೂ ಕುಳಿತಿದ್ದೇನೆ. ಆದರೆ ನಾನೆಂದೂ ಸ್ಪೀಕರ್‌ಗೆ ಕಿರಿಕಿರಿ ಮಾಡಲಿಲ್ಲ. ಆದರೂ ಇವತ್ತು ನಾನು ಹೇಳುವುದನ್ನು ಕೇಳುವ ತಾಳ್ಮೆ, ಕೃಪೆ ಇವರಿಗಿಲ್ಲ. ನಾನು ಒಬ್ಬ ಮುಸ್ಲಿಂ ಮತ್ತು ನಾನು ಒಬ್ಬ ಭಾರತೀಯ. ಈ ಎರಡರ ನಡುವೆ ನನಗೇನೂ ವ್ಯತ್ಯಾಸ ಕಾಣಿಸುತ್ತಿಲ್ಲ. ಒಬ್ಬ ಮುಸ್ಲಿಮನಾಗಿ ಭಾರತ-ಅಮೆರಿಕಾಗಳ ಮಧ್ಯದ ಅಣು ಒಪ್ಪಂದದ ಕುರಿತು ಭಯಪಡಲು ನನಗೆ ಕಾರಣಗಳೇ ಕಾಣುತ್ತಿಲ್ಲ. ಇದು ಎರಡು ರಾಷ್ಟ್ರಗಳ ನಡುವಿನ ಒಪ್ಪಂದ. ಭವಿಷ್ಯದಲ್ಲಿ ಸಮಾನ ಶಕ್ತಿಗಳಾಗಬಹುದಾದ ಎರಡು ರಾಷ್ಟ್ರಗಳ ನಡುವಿನ ಒಪ್ಪಂದವಿದು.

ಸರ್, ಭಾರತೀಯ ಮುಸ್ಲಿಮರ ವೈರಿಗಳು ಅಮೆರಿಕನ್ನರಲ್ಲ ಮತ್ತು ಇಂತಹ 'ಡೀಲ್'ಗಳೂ ಅಲ್ಲ. ಭಾರತೀಯ ಮುಸ್ಲಿಮರ ವೈರಿಗಳೆಂದರೆ, ಭಾರತದ ಎಲ್ಲಾ ಬಡವರು ಎದುರಿಸುತ್ತಿರುವ ಬಡತನ ಮತ್ತು ಹಸಿವು, ನಿರುದ್ಯೋಗ, ಅಭಿವೃದ್ಧಿಯ ಕೊರತೆ ಮತ್ತು ಅವರ ಪರವಾದ ಧ್ವನಿಯ ಕೊರತೆ. ನಮ್ಮ ಧ್ವನಿಯನ್ನು ಹತ್ತಿಕ್ಕುವುದರ ವಿರುದ್ಧ ನಾವಿದ್ದೇವೆ.

ನಾನು ಯುಪಿಎ ಸದಸ್ಯನಲ್ಲ, ಅದರ ಸದಸ್ಯತ್ವವನ್ನೂ ಬಯಸುವುದಿಲ್ಲ. ಯಾರು ಸೆಕ್ಯುಲರ್, ಯಾರು ಅಲ್ಲ ಎಂದು 'ಸರ್ಟಿಫಿಕೇಟ್' ನೀಡುವ ಅಧಿಕಾರ ಸ್ಥಾನದಲ್ಲಿ ತಾವೇ ಕುಳಿತಿರುವ ನಮ್ಮ ಎಡಪಂಥೀಯ ಮಿತ್ರರ ವರ್ತನೆಯಿಂದ ನನಗೆ ತುಂಬ ಬೇಸರವಾಗಿದೆ.

ಕೆಲವರ್ಷಗಳ ಹಿಂದೆ ನಾನು ಎನ್‌ಡಿಎಯ ಸದಸ್ಯನಾಗಿದ್ದೆ ಮತ್ತು ಅವರ ಸರ್ಕಾರದಲ್ಲಿ ಸಚಿವನೂ ಆಗಿದ್ದೆ. ಆ ಕಾರಣಕ್ಕಾಗಿ ಇದೇ ಎಡಪಂಥೀಯರು ಅಂದು ನನ್ನನ್ನು ರಾಜಕೀಯ ಅಸ್ಪೃಶ್ಯ ಎಂದು ಪರಿಗಣಿಸಿದ್ದರು. ಆದರೆ ಇವತ್ತು ಇದೇ ಎಡಪಂಥೀಯರು "ಎಲ್ಲ ಸೆಕ್ಯುಲರ್ ಪಕ್ಷಗಳು ಬಿಜೆಪಿಯೊಂದಿಗೆ ಸೇರಿ ಈ ಸರ್ಕಾರವನ್ನು ಕೆಡವಬೇಕು"ಎಂದು ನನಗೆ ಹೇಳುತ್ತಿದ್ದಾರೆ.

ನಾನು ಒಮ್ಮೆ ಅವರ ಜೊತೆ ಸೇರಿ ತಪ್ಪು ಮಾಡಿದ್ದೆ. ಗುಜರಾತ್ ಪ್ರಕರಣದ ಪ್ರಶ್ನೆ ಎದ್ದಾಗ ನನ್ನ ಆತ್ಮಸಾಕ್ಷಿ ಆ ಸರಕಾರದಿಂದ ಹೊರಬರಲು ಹೇಳಿದರೂ ನಾನು ನನ್ನ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿರಲಿಲ್ಲ. ಇವತ್ತಿಗೂ ನನ್ನ ಆತ್ಮಸಾಕ್ಷಿ ನನ್ನನ್ನು ಕ್ಷಮಿಸಿಲ್ಲ. ನಾನು ಅಂತಹ ತಪ್ಪನ್ನು ಮತ್ತೊಮ್ಮೆ ಮಾಡುವುದಿಲ್ಲ.

ತಾವು ಅಮರನಾಥ್ ವಿಷಯ ಮಾತಾಡುತ್ತೀರಿ, ಆ ಕುರಿತು ಆರೋಪವನ್ನು ಮಾಡಿದ್ದೀರಿ. ನನಗೆ ಒಂದೇ ಒಂದು ಉದಾಹರಣೆ ತೋರಿಸಿ; ಎಲ್ಲಿ ಯಾವನೇ ಕಾಶ್ಮೀರಿ ನಮಗೆ ಯಾತ್ರಿಗಳು ಬೇಡ ಎಂದಿದ್ದಾನೆ, ಎಲ್ಲಿ ಯಾತ್ರಿಗಳ ಮೇಲೆ ದಾಳಿ ನಡೆದಿದೆ ಎಂದು. ಇದು ನಮ್ಮ ನೆಲದ ಪ್ರಶ್ನೆ. ನಾವು ನಮ್ಮ ನೆಲಕ್ಕಾಗಿ ಹೋರಾಡಿದ್ದೇವೆ ಮತ್ತು ಸಾಯುವವರೆಗೂ ನಮ್ಮ ನಾಡಿಗಾಗಿ ಹೋರಾಡಲಿದ್ದೇವೆ. ಆದರೆ ನಾವು ನಿಮ್ಮ ತರಹ ಕೋಮುವಾದಿಗಳಲ್ಲ, ನಾವು ಮಸೀದಿಯನ್ನೂ ಕೆಡುವುದಿಲ್ಲ, ಮಂದಿರವನ್ನೂ ಕೆಡುವುದಿಲ್ಲ.


ಅಲ್ಲಿ ನೂರಾರು ವರ್ಷಗಳಿಂದ ಅಮರನಾಥ ಯಾತ್ರೆ ನಡೆದುಕೊಂಡು ಬಂದಿದೆ. ಎಲ್ಲಿವರೆಗೆ ಅಲ್ಲಿ ಮುಸಲ್ಮಾನರಿರುತ್ತಾರೋ ಅಲ್ಲಿವರೆಗೂ ಶ್ರೀನಗರ ಮತ್ತು ಅಮರನಾಥಗಳಲ್ಲಿ ಯಾತ್ರಾ ನಡೆದೇ ನಡೆಯುತ್ತದೆ.

ಅಧ್ಯಕ್ಷ ಮಹೋದಯರೆ, ಈ ಜನರಂತೆ ನನ್ನ ನಿಷ್ಠೆ ಬದಲಾಗುವುದಿಲ್ಲ. ಅವರಂತೆ ಇವತ್ತು ಈ ಕಡೆ, ನಾಳೆ ಆ ಕಡೆ ನಾನು ಇರುವುದಿಲ್ಲ. ನಾವು ಜಾತ್ಯತೀತ ಶಕ್ತಿಗಳೊಂದಿಗೆ ಕೈಜೋಡಿಸಿದ್ದೇವೆ ಮತ್ತು ಕೈ ಜೋಡಿಸುತ್ತಲೇ ಇರುತ್ತೇವೆ. ಜೆಕೆಎನ್‌ಸಿ ಪ್ರಧಾನಿಗಳ ವಿಶ್ವಾಸಮತ ನಿಲುವಳಿಯನ್ನು ಬೆಂಬಲಿಸುತ್ತದೆ."

ಒಮರ್ ಅಬ್ದುಲ್ಲಾರವರ ಹಲವು ನಿಲುವುಗಳೊಂದಿಗೆ ಮತ್ತು ಅವರು ಬೆಂಬಲಿಸಿದ ಅಮೆರಿಕಾದೊಂದಿಗಿನ ಭಾರತದ ಅಣು ಒಪ್ಪಂದದ ಬಗ್ಗೆ ಹಲವಾರು ಭಿನ್ನಾಭಿಪ್ರಾಯಗಳಿದ್ದರೂ ಅತ ಬೆಂದವಾಗಿ ಮನಸ್ಸಿನಾಳದಿಂದ, ಪ್ರಾಮಾಣಿಕವಾಗಿ ಮಾತನಾಡಿದರು. ಆ ಕಾರಣಕ್ಕೆ ಹಲವಾರು ಸಂಸದರ ಮತ್ತು ಜನರ ಮೆಚ್ಚುಗೆಯನ್ನು ಗಳಿಸಿದರು. ■

ಎ.ಟಿ. ಬಾಬು ಹತ್ಯೆ
ಲಿಕ್ಕರ್ ಮಾಫಿಯಾ ಅಟ್ಟಹಾಸ




ಎ.ಟಿ.ಬಾಬು

ನಾಡಿನ ಉದ್ದಗಲಕ್ಕೂ ನೂರಾರು ಯುವಕರ ಕುಡಿತ ಬಿಡಿಸಿದ, ದಜನ್ನು ಗಟ್ಟಲೇ ಸಾರಾಯಿ ಅಂಗಡಿಗಳನ್ನು ಮುಚ್ಚಿಸಿದ, ತನ್ಮೂಲಕ ಸಹಸ್ರಾರು ಮನೆದೀಪಗಳನ್ನು ಬೆಳಗಿದ, ಲಿಕ್ಕರ್ ಪಿಡುಗಿನ ವಿರುದ್ಧದ ಹೋರಾಟಕ್ಕಾಗಿ ತನ್ನ ಮಗಳನ್ನೇ ಬಲಿಕೊಟ್ಟ, ಪದೇ ಪದೇ ಲಾಕಪ್ಪು, ರೌಡಿಗಳಿಂದ ಹಲ್ಲೆ ಗೀಡಾದ, ಹೋರಾಟ ಮಾಡಿ ಮಾಡಿಯೇ ದಿವಾಳಿಯಾದ, ಕೊನೆ ತನಕ ಜನನಿಷ್ಠನಾಗಿಯೇ ಉಳಿದ ಹೋರಾಟಗಾರನೊಬ್ಬ ಕಗ್ಗೊಲೆ ಯಾದರೆ ಅದೊಂದು ಯಕಶ್ಚಿತ್ ಕ್ರೈಂ ವರದಿಯೇ?

ಕ್ರಿಮಿ ರೌಡಿಯೊಬ್ಬನ ಹತ್ಯೆಗೂ ಪ್ರಾಮಾಣಿಕ ಹೋರಾಟಗಾರನೊಬ್ಬನ ಕಗ್ಗೊಲೆಗೂ ಯಾವುದೇ ವ್ಯತ್ಯಾಸ ವಿಲ್ಲವೇ?

ಎ.ಟಿ.ಬಾಬು ಎಂಬ ನಿಷ್ಠುರಿ ಹೋರಾಟಗಾರನನ್ನು ರಾಮನಗರದ ತನಕ ಚೆನ್ನತ್ತಿ ಹೆದ್ದಾರಿಯಲ್ಲೇ ಕೊಚ್ಚಿಹಾಕಿದ್ದು ಲಿಕ್ಕರ್ ಮಾಫಿಯಾ ಮತ್ತು ಬೆಂಗಳೂರು ಅಂಡರ್‌ವರ್ಲ್ಡ್‌ನ ಜಂಟಿ ದುಸ್ಸಾಹಸವೆಂಬ ಬಗ್ಗೆ ಯಾರಲ್ಲೂ ಅನುಮಾನಗಳು ಳಿದಿಲ್ಲ, ಕೊಂದ ರೀತಿ, ಅದರ ಕ್ರೌರ್ಯ ನೋಡಿದರೆ ಇದು ಪಳಗಿದ ಹಂತಕರಿಗಷ್ಟೇ ಸಾಧ್ಯವಾದ ಸುಪಾರಿಯೆಂಬ ಬಗ್ಗೆಯೂ ಎರಡು ಮಾತಿಲ್ಲ. ಆದರೆ ಮೀಡಿಯಾಗಳು ಮತ್ತು ಸರ್ಕಾರ ಇದನ್ನು ಪರಿಗಣಿಸಿದ ರೀತಿ ಹತ್ಯೆ ಪ್ರತಿಭಟಿಸಿ ಗಾಂಧಿವಾದಿ ಹೆಚ್.ಎಸ್. ದೊರೆಸ್ವಾಮಿ, ಪ್ರಮೀಳಾ ನೇಸರ್ಗಿ, ಮಾಜಿಮಂತ್ರಿ ಗಳಾದ ಲಲಿತಾನಾಯಕ್, ರಾಣಿಸತೀಶ್ ಇತ್ಯಾದಿ ಹತ್ತಾರು ದಲಿತ-ಜನಪರ ಸಂಘಟನೆಗಳು ಬೀದಿಗಿಳಿದು ಪ್ರತಿಭಟಿಸಿದರೂ ಆ ಬಗ್ಗೆ ಸಣ್ಣದೊಂದು ಸುದ್ದಿ ಯನ್ನು ಮಾಡದ ಪತ್ರಿಕಾ ನೀತಿ, ಕೊಲೆಯಾಗಿ ನಾಲ್ಕು ದಿನಗಳಾದರೂ ತನ ಗಿದು ಗೊತ್ತೇ ಇಲ್ಲ ಎನ್ನುವ ಮುಖ್ಯಮಂತ್ರಿ, ಕಾಟಾಚಾರಕ್ಕೂ ಹತ್ಯೆ ಖಂಡಿಸದ ವಿರೋಧಿ ಜೆಡಿಎಸ್-ಕಾಂಗ್ರೆಸ್ ನಾಯಕರ ಪ್ರಜಾಕಾಳಜಿ(!) ಇತ್ಯಾದಿಗಳೆಲ್ಲವೂ ಕರ್ನಾಟಕದ ನೈತಿಕ ಅಧಃಪತನಕ್ಕೆ ಅಪಶಕುನಗಳಷ್ಟೆ.

■ ರಾ. ಸೋಮನಾಥ್


ಟೀವಿ9 ಎಂಬ ಎಡಬಿಡಂಗಿ ನ್ಯೂಸ್ ಚಾನಲ್‌ನ ದುರಾಚಾರ ಹೇಗಿದೆಯೆಂದರೆ ಕೊಲೆಯಾದ ಬಾಬು ವಿರುದ್ಧ ರೌಡಿಯೊಬ್ಬನ ಸಂದರ್ಶನ ಮಾಡಿ 'ಕೊಂದಿದ್ದೇ ಸರಿ' ಎಂಬರ್ಥದ ವರದಿ ಬಿತ್ತರಿಸುತ್ತದೆ!

ಇರಲಿ, ಅಷ್ಟಕ್ಕೂ, ಬಾಬು ಬದುಕಿದ ರೀತಿ, ನಡೆಸಿದ ಹೋರಾಟ, ಅನುಭವಿಸಿದ ಪಡಿಪಾಟಲುಗಳ ಬಗ್ಗೆ ತಲೆಕೆಡಿಸಿಕೊಳ್ಳಲೇಬೇಕೆಂಬ ಕಾನೂನಿಲ್ಲವಲ್ಲ?

ಸುಮ್ಮನೇ ಕುತೂಹಲಕ್ಕಾದರೂ ಹತ್ಯೆಯ ಕಾರಣಗಳನ್ನು ಕೆದಕುತ್ತಾ ಹೋದರೆ ಈ ಎ.ಟಿ.ಬಾಬು ಯಾನೇ ಅಲ್ತಾರ್ ತೇಜಪ್ಪ ಶೆಟ್ಟರ ಮಗ ಬಾಬುವಿನ ದುರಂತ ಬದುಕಿನ ಒಂದೊಂದೇ ಪುಟ. ತೆರೆದುಕೊಳ್ಳುತ್ತದೆ. ಎ.ಟಿ. ಬಾಬು ಕೇವಲ ರಾಜಾಜಿನಗರ ಅಥವಾ ಶ್ರೀರಾಂಪುರಕ್ಕಷ್ಟೇ ಸೀಮಿತನಾಗಿದ್ದರೆ ಆ ಮಾತು ಬೇರೆ. ದೂರದ ಗುಲ್ಬರ್ಗಾ, ರಾಯಚೂರು, ಬೀದರ್‌ಗಳಲ್ಲಿ ನೂರಾರು ಜನರನ್ನು ಸೇರಿಸಿ ಪಾನ ನಿಷೇಧದ ಬಗ್ಗೆ ಪ್ರತಿಭಟಿಸಿದ್ದು; ಸಾಗರದ ಕುಖ್ಯಾತ ಪುಢಾರಿಯೊಬ್ಬ ಸ್ತ್ರೀಶಕ್ತಿ ಕಟ್ಟಿದರೆಂಬ ಒಂದೇ ಕಾರಣಕ್ಕೆ ಮನೆಮನೆಗೆ ನುಗ್ಗಿ ಹೆಂಗಸರನ್ನು ಹಿಡಿದು ಬಡಿದಾಗ ಹೋರಾಡಿ ಆತನ ಬಂಧನಕ್ಕೆ ಕಾರಣವಾಗಿದ್ದು, ಚಾಮರಾಜನಗರದ ಹಳ್ಳಿಹಳ್ಳಿಗಳಲ್ಲಿ ಪಾದ ಯಾತ್ರೆ ಮಾಡಿ ಸಾರಾಯಿ ಅಂಗಡಿಗಳನ್ನು ಎತ್ತಿಸಿದ್ದು, ಚಿತ್ರದುರ್ಗ, ಚಳ್ಳಕೆರೆಗಳಲ್ಲಿ ರೌಡಿ, ಸಾರಾಯಿ ದೊರೆಗಳ ವಿರುದ್ಧದ ಆತನ ಹೋರಾಟ, ದಾವಣಗೆರೆ, ಹಾವೇರಿ, ಧಾರವಾಡ ಬೆಳಗಾವಿಗಳನ್ನೂ ಬಿಡದಂತೆ ಆತ ನಡೆಸಿದ ಸಾರಾಯಿ ವಿರೋಧಿ ಚಳುವಳಿಗಳ ಬಗ್ಗೆ ಯಾವ ಪತ್ರಿಕೆ ತಾನೇ ಬರೆದಿಲ್ಲ?

ತಲೆಗೊಂದು ಗಾಂಧಿ ಟೋಪಿ, ಹೆಗಲಿಗೆ ಗಾಂದಿ ಚಿತ್ರವುಳ್ಳ ವಿಚಿತ್ರ ರುಮಾಲು ಮತ್ತು ಖಾದಿ ಜುಬ್ಬಾ ತೊಟ್ಟು ಪ್ರತಿನಿತ್ಯ ಒಂದಲ್ಲಾ ಒಂದು ಮದ್ಯವಿರೋಧಿ ಹೋರಾಟ ಮಾಡಿಕೊಂಡಿದ್ದ ಬಾಬು ಬಹುತೇಕ ಕನ್ನಡ, ದಲಿತ ಜನಪರ ಸಂಘಟನೆಗಳ ಪಾಲಿಗೆ ಆಪದ್ಭಾಂಧವನಂತಿದ್ದ. ತನ್ನ ಪ್ರಾಮಾಣಿಕತೆಗೆ ಒಂದಲ್ಲಾ ಒಂದು ದಿನ ಬೆಲೆ ಬರುತ್ತದೆ ಮತ್ತು ಇವತ್ತಲ್ಲಾ ನಾಳೆ ಜನಕ್ಕೆ ತನ್ನ ಕಾಳಜಿ ಅರ್ಥವಾಗುತ್ತದೆ ಎಂಬುದು ಆತನ ಅಚಲ ನಿರೀಕ್ಷೆಯಾಗಿತ್ತು.

ಮೂಲತಃ ಉಡುಪಿ ತಾಲ್ಲೂಕು ಬ್ರಹ್ಮಾವರ ಸಮೀಪದ ಅಲ್ತಾರ್‌ನ ಬಾಬು ಪ್ರಾರಂಭದಲ್ಲಿ ಟೈಲರ್ ಅಂಗಡಿ ಇಟ್ಟುಕೊಂಡಿದ್ದ. ಮೂರು ಹೋಟೆಲ್ ಗಳಿದ್ದವು. ಪ್ರಕಾಶ್‌ನಗರದಲ್ಲೊಂದು, ಕುರುಬರಹಳ್ಳಿಯಲ್ಲೊಂದು ಕಾನ್ವೆಂಟ್ ತೆರೆದಿದ್ದ, ಪತ್ತಿನ ಸಹಕಾರ ಸಂಘ ಸ್ಥಾಪಿಸಿದ್ದ. ಕಾರಿತ್ತು, ಸ್ವಂತ ಮನೆಯಿತ್ತು, ಒಂದು ಗಂಡು ಇಬ್ಬರು ಹೆಣ್ಣು ಮಕ್ಕಳಿದ್ದರು. ಬಾಬು ಮಂಗಳೂರಿನ ಬೇರೆಲ್ಲ ಬಂಟರಂತೆ ಫೈನಾನ್ಸ್, ಹೋಟೆಲ್ ಮಾಡಿಕೊಂಡೇ ಇದ್ದು ಬಿಟ್ಟಿದ್ದರೆ ಈ ಹೊತ್ತಿಗೆ ಕೋಟ್ಯಾಧಿಪತಿ ಯಾಗಿರುತ್ತಿದ್ದನೋ ಏನೋ?


ಕುಮಾರೇಗೌಡ


ಆದರೆ ಸಮಾಜ ಸೇವೆ ಮತ್ತು ಅನ್ಯಾಯದ ವಿರುದ್ಧ ಹೋರಾಡುವ ಗೀಳಿತ್ತಲ್ಲ, ಅದು 1987ರಲ್ಲಿ ಬಾಬು ಸರ್ವ ಕ್ಷೇಮಾಭಿವೃದ್ಧಿ ಸಂಘ ಎಂಬ ಸಂಘಟನೆಯೊಂದನ್ನು ಹುಟ್ಟಿಹಾಕಲು ಕಾರಣವಾಯಿತು. ಮುಂದೆ ಕನ್ನಡ ಚಳವಳಿಗಾರರ ಜೊತೆಬಿದ್ದು ವಿಮೋಚನಾ ರಂಗದ ಸಂಪರ್ಕಕ್ಕೆ ಬಂದ ಮೇಲಂತೂ ಬಾಬು ತನ್ನ ಸ್ಕೂಲು, ಹೋಟೆಲ್‌ಗಳನ್ನು ಮರೆತೇ ಬಿಟ್ಟ. ಜಪಾನ್ ಕೈಗಾರಿಕಾ ಮಸಾಹತು, ಗ್ಯಾಟ್ ಒಪ್ಪಂದ, ನೈಸ್ ಕಾರಿಡಾರ್‌ಗಳ ವಿರುದ್ಧದ ಹೋರಾಟದಲ್ಲಿ ಬಾಬು ಪಾತ್ರವಿತ್ತು, ಅದಕ್ಕೆ ಪೂರಕವಾಗಿ ಕಾಂಗ್ರೆಸ್ ನಾಯಕರಾದ ರಾಮಲಿಂಗಾರೆಡ್ಡಿ, ರಾಣಿಸತೀಶ್, ಬಿ.ಕೆ.ಹರಿಪ್ರಸಾದ್ ಥರದವರ ಒಡನಾಟವೂ ಇತ್ತು, ಬಾಬು ರಾಮಮಂದಿರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷನಾಗಿದ್ದ.

1995ರಲ್ಲಿ ಆತ ಲಿಕ್ಕರ್ ಲಾಬಿಯ ವಿರುದ್ಧ ಹೋರಾಟಕ್ಕಿಳಿಯುವ ತನಕ ಎಲ್ಲವೂ ನೆಟ್ಟಗಿತ್ತು, ಯಾರೋ ಹೆಣ್ಣುಮಗಳು ವರದಕ್ಷಿಣೆ ಹಿಂಸೆಗೆ ಬಲಿಯಾದರೆ, ತನಗೆ ಪರಿಚಿತರನ್ನು ಇನ್ನಾರೋ ವಂಚಿಸಿದರೆ, ಯಾರೋ ಹುಡುಗಿಯನ್ನು ಪುಂಡರು ಚುಡಾಯಿಸಿದರೆ ಅದರ ವಿರುದ್ಧ ಹೋರಾಡುವುದಕ್ಕೂ ಸಾರಾಯಿ ಅಂಗಡಿಯೊಂದನ್ನು ಎತ್ತಂಗಡಿ ಮಾಡಿ ಎಂದು ಬೀದಿಗಿಳಿಯುವುದಕ್ಕೂ ವ್ಯತ್ಯಾಸವಿದೆ.

ಲೈವ್‌ಬ್ಯಾಂಡ್ ದಂಧೆಯ ಹಿಂದೆ, ಬಾರ್, ವೈನ್‌ಸ್ಟೋರ್‌ಗಳ ಮೇಲೆ ಪೊಲೀಸ್ ನೆರಳಿರುತ್ತದೆ. ರೌಡಿ ಗ್ಯಾಂಗಿರುತ್ತದೆ. ಪಾಪದ ದುಡ್ಡಿರುತ್ತದೆ. 1996ರ ಹೊತ್ತಿಗೆ ಭಾಷ್ಯಂ ಸರ್ಕಲ್‌ನಲ್ಲಿ ರಾಜಧಾನಿ ಬಾರ್ ನಡೆಸುತ್ತಿದ್ದ ಮೋಹನ್ ಶೆಟ್ಟಿಯ ದುಷ್ಮನಿ ಕಟ್ಟಿಕೊಂಡ ಬಾಬು ಆತನ ಬಾರ್ ಮುಚ್ಚುವ ತನಕ ಹೋರಾಟ ಬಿಡಲಿಲ್ಲ, 1998ರ ಹೊತ್ತಿಗೆ ಅಪಾಯಕಾರಿ ಲೈವ್ ಬ್ಯಾಂಡ್ ದಂಧೆಗೆ ಪೆಟ್ಟುಕೊಟ್ಟ ಬಾಬು ರಾಜಾಜಿನಗರದ ನಟೋರಿಯಸ್ ಶಿವಾಸ್ ಬಾರ್ ವಿರುದ್ಧ ಪ್ರತಿಭಟನೆಗಿಳಿದರು. ನಡುರಾತ್ರಿ ತನಕ ಬ್ಯಾಂಡ್ ಕುಣಿಸುತ್ತಿದ್ದ ಶಿವಾಸ್ ಬಾರ್ ಮಾಲೀಕ ಮಲೆಯಾಳಿ ಪ್ರಸನ್ನ ಹೇಳಿಕೇಳಿ ಪಾಖಂಡಿ. ಆತನ ಹಿನ್ನೆಲೆ ಗೊತ್ತಿಲ್ಲದೇ ಬಾರಿನ ಒಳಕ್ಕೆ ಹೋಗಿ ಪ್ರತಿಭಟಿಸಿದ ಸರ್ವರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಕರ್ತ ಉಮಾಪತಿಯನ್ನು ಮಲೆಯಾಳಿ ಬ್ಯಾಂಡ್ ರೌಡಿಗಳು ಇರಿದುಕೊಂದೇ ಬಿಟ್ಟರು. ಇದಾಗಿದ್ದು 1998ರ ಮೇ ತಿಂಗಳಲ್ಲಿ ಉಮಾಪತಿ ಹತ್ಯೆ ಪ್ರತಿಭಟಿಸಿ ರಾಜಾಜಿನಗರದಲ್ಲಿ ಭಯಂಕರ ಪ್ರತಿಭಟನೆಗಳಾದವು. ನಡುರಸ್ತೆಯಲ್ಲೇ ಹೆಣ ಇಟ್ಟು ಪ್ರತಿಭಟಿಸಿದ ಎ.ಟಿ.ಬಾಬು ಶಿವಾಸ್ ಬಾರ್ ಮುಚ್ಚಿಸಿ ಮಾಲೀಕ ಪ್ರಸನ್ನ ಜೈಲು ಪಾಲಾಗುವ ತನಕ ವಿರಮಿಸಲಿಲ್ಲ ನಿಜ.

ಆದರೆ ಶಿವಾಸ್ ಬಾರಿನ ದೊಡ್ಡ ಫಲಾನುಭವಿಯಾಗಿದ್ದವನು ರಾಜಾಜಿನಗರದ ಪೊಲೀಸ್ ಇನ್ಸ್‌ಪೆಕ್ಟರ್ ಚಂದ್ರಪ್ಪ!

ಅಲ್ಲಿಗೆ ಬಾಬು ಪ್ರಾರಂಭಿಸಿದ ಲಿಕ್ಕರ್ ವಿರೋಧಿ ಹೋರಾಟಕ್ಕೆ ಮೊದಲ ಬಲಿ ನಡೆದುಹೋಗಿತ್ತು. ಬಹುಶಃ ಎರಡನೇ ಬಲಿ ತನ್ನ ಮಗಳೇ ಎಂಬುದೆಲ್ಲಿ ಗೊತ್ತಿತ್ತು? ಮುಚ್ಚಿದ ಶಿವಾಸ್ ಬಾರ್‌ಗೆ ಅನತಿ ದೂರದಲ್ಲೇ ನವರಸ ಎಂಬ ಮತ್ತೊಂದು ಬಾರಿತ್ತು, ಬಾಬು ಅದರ ವಿರುದ್ಧವೂ ದೂರು ಕೊಟ್ಟರು. ಪರಿಣಾಮ ಇನ್ನೂ ದಾರುಣವಾಗಿತ್ತು, ತನಗೆ ಮಾಮೂಲಿ ಕೊಡು ಎಂದು ಕೊಲೆ ಬೆದರಿಕೆ ಹಾಕಿದ್ದಾರೆಂದು ನವರಸ ಬಾರ್ ಮಾಲೀಕನಿಂದ ಸುಳ್ಳು ಕಂಪ್ಲೇಂಟ್ ಒಂದನ್ನು ಬರೆಸಿಕೊಂಡಿದ್ದ ಇನ್ಸ್‌ಪೆಕ್ಟರ್ ಚಂದ್ರಪ್ಪ ಬಾಬು ವಿರುದ್ಧ ರೌಡಿಶೀಟ್ ತೆಗೆಯುತ್ತೇನೆಂದು ಹೆದರಿಸಿದ.


ಪಾಯ್ಸನ್ ರಾಮು

ಪಾಯ್ಸನ್ ರಾಮನ ಹಿಂದೆ ಶೆಟ್ಟಿ ಬ್ರದರ್ಸ್


ಬಾಬು ಹತ್ಯೆಗೆ ಕೇವಲ ಕುಮಾರೇಗೌಡನೊಬ್ಬನೇ ಸುಪಾರಿ ಕೊಟ್ಟನಾ ಅಥವಾ ಬೆಂಗಳೂರಿನ ಇನ್ನೂ ನಾಲ್ಕು ಲಿಕ್ಕರ್ ಕುಳಗಳು ಫೈನಾನ್ಸ್ ಮಾಡಿರಬಹುದಾ?

ಹೀಗೊಂದು ಜಿಜ್ಞಾಸೆ ಪೊಲೀಸರನ್ನು ಕಾಡುತ್ತಿದೆ. 2008ರ ಜುಲೈ 21 ರ ಅಪರಾಹ್ನ ರಾಮನಗರಕ್ಕಿನ್ನೂ ಐದು ಕಿ.ಮೀ.ಗೆ ಮೊದಲೇ ಮಾಯಗಾನಹಳ್ಳಿಯಲ್ಲಿ ಬಾಬು ಓಡಿಸುತ್ತಿದ್ದ ಮಾರುತಿ ವ್ಯಾನನ್ನು ಅಡ್ಡಗಟ್ಟಿದ ಬೈಕ್ ಸವಾರರಿಬ್ಬರನ್ನೂ ಹಿಂದೆ ಕುಳಿತಿದ್ದ ಸಿಸ್ಟರ್ ಸಿಲಿಯಾ ಮತ್ತು ಮದ್ಯ ವಿರೋಧಿ ಕಾರ್ಯಕರ್ತೆ ರುಕ್ಮಿಣಿ ನೋಡಿದ್ದಾರೆ. ಬಾಬು ಇನ್ನೇನು ವ್ಯಾನನ್ನು ನಿಲ್ಲಿಸಬೇಕೆನ್ನುವಷ್ಟರಲ್ಲಿ ಹಿಂದಿದ್ದ ಸ್ಕಾರ್ಪಿಯೋ ಗಾಡಿಯಿಂದ ಏಳೆಂಟು ಮಂದಿ ಇಳಿದಿದ್ದಾರೆ. ಪ್ರತಿಯೊಬ್ಬರ ಕೈಯಲ್ಲೂ ಲಾಂಗು-ಡ್ಯಾಗರ್‌ಗಳಿದ್ದವು. ಇಳಿಯುವುದಕ್ಕೂ ಆಸ್ಪದ ಕೊಡದೇ ಎದೆಗೆ ಹಾಕಿ ತಿವಿದಿದ್ದಾರೆ. ಬೀಸಿದ ಲಾಂಗು ತಲೆ ಚಿಪ್ಪನ್ನೇ ಎಗರಿಸಿದೆ.

ಕುಂತ ಡ್ರೈವರ್ ಸೀಟಿನಲ್ಲೇ ಬಾಬು ಅಂತ್ಯವಾಗಿತ್ತು.

ಇದು ಪಕ್ಕಾ ಅಂಡರ್‌ವರ್ಲ್ಡ್ ಶೈಲಿಯ ಸುಸಜ್ಜಿತ ಹತ್ಯೆ, ಬಾಬು ರೌಡಿಯಲ್ಲ, ರೌಡಿಗಳ ಒಡನಾಟವಿರಲಿಲ್ಲ. ಆದರೆ ಇಲ್ಲಿಗೆ ಎಂಟು ತಿಂಗಳ ಹಿಂದೆ ಕಡಬಗೆರೆಯ ಪಾಯ್ಸನ್ ರಾಮನಿಗೂ ಬಾಬುವಿಗೂ ಸಣ್ಣದೊಂದು ಝಟಾಪಟಿ ನಡೆದಿತ್ತು, ಪಾಯ್ಸನ್ ರಾಮನ ಬಲಗೈ ಬಂಟನಂತಿದ್ದವನು ಬೇಕರಿ ಜಗ್ಗ ಉರ್ಫ್ ಜಗದೀಶ್‌ಶೆಟ್ಟಿ. ಕಂಠೀರವ ಸ್ಟುಡಿಯೋಕ್ಕೆ ಹೊಂದಿಕೊಂಡಂತೆ ರಾಜ್‌ಕುಮಾರ್ ಸಮಾಧಿಯ ಬಳಿ ಬೇಕರಿ ಇಟ್ಟುಕೊಂಡಿದ್ದ ಜಗದೀಶ್‌ಶೆಟ್ಟಿ ಕುಡಿದು ನಡುರಾತ್ರಿಯಲ್ಲಿ ಲಾರಿಯೊಂದಕ್ಕೆ ತನ್ನ ಕಾರ್ ಗುದ್ದಿ ಸತ್ತೇಹೋದ. ಆತನ ತಿಥಿತನಕ ಕಾದ ಪಾಯ್ಸನ್ ರಾಮನ ಪತ್ನಿ ಕಾರದಪುಡಿ ಶಾರದಾ ಎಂಬಾಕೆ ಆತನ ವಿಧವಾ ಪತ್ನಿ ಲಲಿತಳಿಗೆ 'ನಿನ್ನ ಗಂಡ ನನಗೆ ಇಪ್ಪತ್ತು ಲಕ್ಷ ಕೊಡಬೇಕಿತ್ತು, ದುಡ್ಡು ಎಲ್ಲಿಟ್ಟಿದ್ದಾನೆ ಹೇಳು' ಎಂದು ಧಮಕಿ ಆರಂಭಿಸಿದ್ದಾಳೆ.


ಆದರೆ ಜಗ್ಗನ ಬ್ಯಾಂಕ್ ಖಾತೆಯಲ್ಲಿದ್ದದ್ದು ಕೇವಲ ಹತ್ತು ಲಕ್ಷ ಮಾತ್ರ. ಗಂಡನೇ ಸತ್ತ ಮೇಲೆ ದುಡ್ಡನ್ನು ಬೇರೆ ಕೊಡುವುದುಂಟಾ?


ರಾಮಕೃಷ್ಣ ಶೆಟ್ಟಿ

ಆದರೆ ಪಾಯ್ಸನ್ ರಾಮು ಬಿಡಲಿಲ್ಲ. ಪದೇಪದೇ ಜಗ್ಗನ ಪತ್ನಿಗೆ ಕಾಟ ಶುರು ಹಚ್ಚಿಕೊಂಡ. ಹೆದರಿದ ಲಲಿತಾ ಕಾಪಾಡುವಂತೆ ಅಂಗಲಾಚಿದ್ದು ಎ.ಟಿ.ಬಾಬುರನ್ನು. ತಮ್ಮ ಮನೆಯಲ್ಲೇ ಪಂಚಾಯ್ತಿ ಮಾಡಿದ ಬಾಬು ಪಾಯ್ಸನ್ ರಾಮನ ಅಣ್ಣ ಶ್ರೀನಿವಾಸ್‌ರನ್ನು ಕರೆಸಿ ಗಂಡಸತ್ತ ಹೆಂಗಸಿಗೆ ಕಾಟ ಕೊಟ್ಟರೆ ನಿಮಗೆ ದೇವರು ಒಳ್ಳೇದು ಮಾಡಲ್ಲ ಎಂದು ದಬಾಯಿಸಿದ್ದಾರೆ.

ಆದರೆ ಹೆದರಿದ ಜಗ್ಗನ ಪತ್ನಿ ತಾನು ಆರೊಪತರೆ ಲಕ್ಷವನ್ನಷ್ಟೇ ಕೊಡ್ತೀನಿ ಎಂದಿದ್ದಾಳೆ. ದುಡ್ಡನ್ನು ಕೊಟ್ಟಿದ್ದಾಳೆ. ಆದರೆ ಇದಾಗಿ ಒಂದೇ ವಾರಕ್ಕೆ ಪಾಯ್ಸನ್‌ರಾಮ ಬಾಬು ಮನೆಗೇ ಬಂದಿದ್ದಾನೆ. ನಿಮ್ಮ ಸಪೋರ್ಟಿನಿಂದಲೇ ನನಗೆ ಬರಬೇಕಿದ್ದ ದುಡ್ಡು ಬರುತ್ತಿಲ್ಲ. ಇಪ್ಪತ್ತು ಲಕ್ಷಕ್ಕೆ ಬದಲು ಕೇವಲ ಆರು ಲಕ್ಷ ತಗೊಳ್ಳಕ್ಕೆ ನಾನೇನೂ ಮೂರ್ಖನಲ್ಲ ಎಂದು ಬಾಬುವಿಗೆ ಧಮಕಿಹಾಕಿದ್ದಾನೆ. ತನ್ನ ಬಳಿಯಿದ್ದ ರಿವಾಲ್ವರ್ ತೋರಿಸಿ ಪೋ ಕೂಡ ಕೊಟ್ಟಿದ್ದಾನೆ. ಹೀಗೆ ಪಾಯ್ಸನ್ ರಾಮನನ್ನು ಬಾಬು ಮನೆತನಕ ಕರೆತಂದಿದ್ದು ಜಗ್ಗನ ಹತ್ತಿರದ ಸಂಬಂಧಿಗಳಾದ ಶಿವಾ ಶೆಟ್ಟಿ ಮತ್ತು ರಾಮಕೃಷ್ಣ ಶೆಟ್ಟಿ ಎಂಬ ಅಣ್ಣತಮ್ಮಂದಿರು!

ಇವರಿಬ್ಬರೂ ಸದ್ಯ ಮಹಾಲಕ್ಷ್ಮೀಲೇಔಟ್ ಶಾಸಕರ ನರೇಂದ್ರ ಬಾಬುವಿಗೆ ಪರಮಾಪ್ತರು. ಇನ್ನೊಂದೆಡೆ ಬಾಬು ಪ್ರಕಾಶನಗರದ ಕುಮಾರ ವೈನ್ಸ್ ವಿರುದ್ಧ ಹೋರಾಟಕ್ಕೆ ನಿಂತಾಗಲೂ ಆತನ ಪರವಹಿಸಿ ಬಾಬು ಮೇಲೆ ಒತ್ತಡ ತಂದದ್ದು ಇದೇ ಶಿವಾಶೆಟ್ಟಿ ಮತ್ತ ರಾಮಕೃಷ್ಣ ಶೆಟ್ಟಿಯೇ. ನಂದಿನಿ ಲೇಔಟ್‌ನ ಕುಮಾರೇಗೌಡ ಮಾಜಿಮೇಯರ್ ಹುಚ್ಚಪ್ಪನ ಬಲಗೈ ಬಂಟನಂತಿದ್ದ. ಸಿದ್ದರಾಮಯ್ಯ ಕಾಂಗ್ರೆಸ್ಸಿಗೆ ಬಂದ ಮೇಲೆ ಹುಚ್ಚಪ್ಪನ ಜೊತೆ ಕಾಂಗ್ರೆಸ್ಸಿಗೆ ಬಂದವನು ಎಮ್ಮೆಲ್ಲೆ ನರೇಂದ್ರ ಬಾಬು ಪರಮಾಪ್ತನಂತೆ ಓಡಾಡಿಕೊಂಡಿದ್ದ. ಮುಂದಿನ ಪಾಲಿಕೆ ಚುನಾವಣೆಯಲ್ಲಿ ಮಹಾಲಕ್ಷ್ಮಿ ಲೇಔಟ್ ವಾರ್ಡಿಗೆ ಕಾಂಗ್ರೆಸ್ ಅಭ್ಯರ್ಥಿಯಾಗುತ್ತೇನೆಂದೇ ಹೇಳಿಕೊಂಡಿದ್ದ.


ಶಿವಾಶೆಟ್ಟಿ

ಯಾವತ್ತು ಆತನ ಪ್ರಕಾಶ್‌ನಗರ ಕುಮಾರ್‌ವೈನ್ಸ್ ಮುಚ್ಚಿಸಲು ಬಾಬು ಹೋರಾಟಕ್ಕಿಳಿದರೋ ಕುಮಾರ್ ಕಂಡಕಂಡವರಿಂದ ಬಾಬು ವಿರುದ್ಧ ಒತ್ತಡ ತಂದ. ಮಂತ್ರಿ ಸುರೇಶ್‌ಕುಮಾರ್ ಮನೆಯಲ್ಲೇ ಪಂಚಾಯತಿ ನಡೆದರೂ ಬಾಬು ಒಪ್ಪಲೇ ಇಲ್ಲ, ಕಾರಣ ಬಾಬು 'ತನಗೆ ಐದು ಲಕ್ಷ ರೂಪಾಯಿ ಲಂಚ ಕೊಡು' ಎಂದಿದ್ದಾರೆಂದು ಕುಮಾರೇಗೌಡ ಅಪಪ್ರಚಾರ ಮಾಡಿಬಿಟ್ಟಿದ್ದ. ವೈನ್‌ಸ್ಟೋರ್ ಇದ್ದದ್ದನ್ನು ಬಾರ್ ಆಗಿ ಪರಿವರ್ತಿಸದೇ ಹಿಂದಿನಂತೆ ಇದ್ದುಬಿಟ್ಟಿದ್ದರೆ ಬಹುಶಃ ಬಾಬು ಒಪ್ಪುತ್ತಿದ್ದರೋ ಏನೋ. ಯಾವತ್ತು ತನಗೆ ಐದು ಲಕ್ಷದ ಲಂಚ ಕೇಳಿದ್ದಾರೆಂದು ಗುಲ್ಲೆಬ್ಬಿಸಿದನೋ ಕಳಂಕಕ್ಕೆ ಅಂಜಿದ ಬಾಬು ರಾಜಿ ಕಬೂಲಿಯನ್ನೇ ನಿರಾಕಸಿಬಿಟ್ಟರು.

ಇದರಿಂದ ಸಿಟ್ಟಿಗೆದ್ದ ಕುಮಾರೇಗೌಡ ಮೊದಲು ಶ್ರೀರಾಂಪುರದ ಶೇಷನನ್ನು ಛೂಬಿಟ್ಟ. ಶೇಷನ ಶಿಷ್ಯ ಭಾಸ್ಕರ ಸೀದಾ ಬಾಬು ಮನೆಗೇ ಬಂದು ಧಮಕಿ ಕೊಟ್ಟ. ಭಾಸ್ಕರನನ್ನು ರಾಜಾಜಿನಗರ ಪೊಲೀಸರಿಗೆ ಹಿಡಿದು ಕೊಟ್ಟರೆ ತಿಪ್ಪೆ ಸಾರಿಸಿದ ಪೊಲೀಸರು ಆತನನ್ನು ಬಿಟ್ಟು ಕಳಿಸಿದ್ದಾರೆ. ಹೇಗೂ ಪಾಯ್ಸನ್ ರಾಮನಿಗೆ ಬಾಬು ವಿರುದ್ಧ ಜಿದ್ದಿತ್ತಲ್ಲ, ಬೇಕರಿ ಜಗ್ಗನ ತರುವಾಯ ಪಾಯ್ಸನ ರಾಮನ ಎಲ್ಲಾ ಡೀಲು-ದಂಧೆಗಳನ್ನು ನಿಭಾಯಿಸುತ್ತಿದ್ದ ಶಿವಾಶೆಟ್ಟಿ ಮತ್ತು ರಾಮಕೃಷ್ಣ ಶೆಟ್ಟಿ ಸೇರಿದ್ದೇ ಕುಮಾರೇಗೌಡನಿಗೂ ಪಾಯ್ಸನ್ ರಾಮನಿಗೂ ಮಧ್ಯೆ ಬಾಬು ಹತ್ಯೆ ಡೀಲು ಕುದುರಿಸಿದ್ದಾರೆ.

ದುಡ್ಡು ಬರುತ್ತದೆಯೆಂದರೆ ಪಾಯ್ಸನ್ ರಾಮು ಯಾವುದಕ್ಕೂ ಹೇಸುವವನಲ್ಲ. ಕೇವಲ ಕುಮಾರೇಗೌಡನಷ್ಟೇ ಅಲ್ಲದೇ ಬೆಂಗಳೂರಿನ ಸಾರಾಯಿ ಅಂಗಡಿಗಳು ಮತ್ತು ವೈನ್‌ಸ್ಟೋರ್‌ಗಳ ಪೈಕಿ ಯಾರೆಲ್ಲ ಬಾಬು ಹೋರಾಟದಿಂದ ಕೈ ಸುಟ್ಟುಕೊಂಡಿದ್ದರೋ ಅವರೆಲ್ಲರಿಂದಲೂ ಬಾಬು ಹತ್ಯೆಗೆ ದುಡ್ಡೆತ್ತಿರುವ ಸಾಧ್ಯತೆಯಿದೆ. ಈ ಬಗ್ಗೆ ತನಿಖೆಯಾಗಬೇಕು. ■

ಇಷ್ಟಾದ್ದವರೂ ಜಗ್ಗದೇ ಬಾಬು ಹೋರಾಟ ಮುಂದು ವರಿಸಿತ್ತು. ಮದ್ಯಪಾನ ವಿರೋಧಿ ಆಂದೋಲನ ಸಮಿತಿ ಎಂಬ ಹೊಸ ಸಂಘಟನೆ ಶುರುವಾಗಿತ್ತು. ಸ್ವಾತಂತ್ರ ಹೋರಾಟಗಾರ ದೊರೆಸ್ವಾಮಿ, ಸುಮಂಗಲಿ ಸೇವಾಶ್ರಮದ ಸುಶೀಲಮ್ಮ ಇದರ ಗೌರವಾಧ್ಯಕ್ಷರಾದರು. ಇಷ್ಟಾಗ್ಯೂ ಇನ್ಸ್‌ಪೆಕ್ಟರ್ ಚಂದ್ರಪ್ಪ ಜಿದ್ದು ಬಿಡದೇ ಬಾಬುರನ್ನು ಠಾಣೆಗೆ ಎಳೆದೊಯ್ದು ಹಿಂಸಿಸಿಬಿಟ್ಟ. ಪೊಲೀಸ್ ಹಿಂಸೆಗೆ ಅರೆಜೀವವಾಗಿದ್ದ ಬಾಬು ಪ್ರಜ್ಞೆ ತಪ್ಪಿ ಆಸ್ಪತ್ರೆಗೆ ದಾಖಲಾದರೆ ಕಾಂಗ್ರೆಸ್ ನಾಯಕ ರಾಮಲಿಂಗಾರೆಡ್ಡಿಯೇ ನಿಂತು ಠಾಣೆಯ ಮುಂದೆ ಧರಣಿ ಕೂತರು.

ದೌರ್ಭಾಗ್ಯವೆಂದರೆ ಸಸ್ಪೆಂಡಾದ ಇನ್ಸ್‌ಪೆಕ್ಟರ್ ಚಂದ್ರಪ್ಪ ಹದಿನೈದೇ ದಿನದಲ್ಲಿ ಮತ್ತೆ ಠಾಣೆಗೆ ವಕ್ಕರಿಸಿದ. ಬಾಬು ಇಲ್ಲದ ಹೊತ್ತನ್ನೇ ನೋಡಿ ಅವರ ಮನೆಗೆ ನುಗ್ಗುತ್ತಿದ್ದ. ಬಾಬು ಮೊದಲ ಮಗಳು ಅದೆಷ್ಟು ಕಂಗೆಟ್ಟಿದ್ದಳೋ? ಮಲಗುತ್ತಿದ್ದ ಕೋಣೆಯ ಬಾಗಿಲು ತೆರೆಯಲೇ ಇಲ್ಲ. ಕೊನೆಗೂ ಬಾಗಿಲು ಮುರಿದರೆ ಒಳಗೆ ಸೌಮ್ಯಳ ಶವ ನೇಣುಕುಣಿಕೆ ಯಲ್ಲಿ ನೇತಾಡುತ್ತಿತ್ತು. ಬಾಬು ಶುರು ಹಚ್ಚಿಕೊಂಡ ಹೋರಾಟದ ಗೀಳು ತನ್ನ ಎರಡನೇ ಬಲಿ ಪಡೆದಿತ್ತು.

ಮಗಳ ಶವವನ್ನು ಇಡೀ ಪ್ರಕಾಶನಗರದುದ್ದಕ್ಕೂ ಮೆರವಣಿಗೆ ಮಾಡಿದ ಬಾಬು ಅದನ್ನು ರಾಜಾಜಿನಗರ ಪೊಲೀಸ್ ಠಾಣೆಯ ಮುಂದಿಟ್ಟು ಧರಣಿ ಕೂತರು. ಇನ್ಸ್‌ಪೆಕ್ಟರ್ ಚಂದ್ರಪ್ಪನ ಎತ್ತಂಗಡಿಯಾಗಿತ್ತಾದರೂ ಅದಕ್ಕೆ ಬಾಬು ಮಗಳ ತಲೆದಂಡ ತೆತ್ತಾಗಿತ್ತು.

ಬಹುಶಃ ಬೇರೆ ಯಾರೇ ಆಗಿದ್ದರೂ ತನ್ನ ಹೋರಾಟಕ್ಕೆ ತಿಲಾಂಜಲಿಯಿತ್ತು ತೆಪ್ಪಗಿದ್ದು ಬಿಡುತ್ತಿದ್ದರೋ ಏನೊ? ಮಗಳ ಆತ್ಮಹತ್ಯೆಗೆ ಬಾಬು ಕುಸಿದುಹೋದರು. ಒಂದಷ್ಟು ದಿನಗಳ ಕಾಲ ಉಳಿದಿದ್ದ ಏಕೈಕ ಹೋಟೆಲ್‌ನ್ನು ನಡೆಸಿದರು. ಆದರೆ ಹೋರಾಟದ ಸೆಳೆತವಿತ್ತಲ್ಲ, ಒಂದೇ ವರ್ಷಕ್ಕೆ ಮತ್ತೆ ಚೇತರಿಸಿಕೊಂಡಂತೆ ಬಾಬು ಮದ್ಯವಿರೋಧಿ ಹೋರಾಟ ಮುಂದುವರೆಸಿದ್ದರು. ರಾಜ್ಯಾದ್ಯಂತ ಬೇರೆ ಬೇರೆಡೆ ಹೋರಾಟಗಳಾದವು. ಇದ್ದ ಟೈಲರ್ ಅಂಗಡಿ ಯಾವಾಗಲೋ ಮುಚ್ಚಿಹೋಗಿತ್ತು. ಹೋರಾಟದ ವ್ಯಾಮೋಹದಲ್ಲಿ ಇದ್ದ ಎರಡೂ ಕಾನ್ವೆಂಟ್‌ಗಳನ್ನೂ ನಿಭಾಯಿಸಲಾಗದೆ ಮಾರಿ ಹಾಕಿದ್ದರು. ಆದಾಯಮೂಲ ವಾಗಿದ್ದ ಮೂರು ಹೋಟೆಲುಗಳನ್ನು ಮುಚ್ಚಿಬಿಟ್ಟರು. ಹೋರಾಟದ ಜಂಜಾಟದಲ್ಲಿ ಫೈನಾನ್ಸಿಂಗ್, ಪತ್ತಿನ ಸಹಕಾರ ಸಂಘ ಯಾವುದೂ ಬರಕತ್ತಾಗಲಿಲ್ಲ. ಕೊನೆಗೆ ಪ್ರಕಾಶ್‌ನಗರದ


ಬಾಬುಹತ್ಯೆ ಖಂಡನಾ ಸಭೆ

ಮನೆ ಬಿಟ್ಟರೆ ಬಾಬು ಆದಾಯಕ್ಕಂತ ಏನೇನೂ ಉಳಿದಿರಲಿಲ್ಲ.


ಹಾಗಿದ್ದೂ ಬಾಬು ದುಸ್ಸಾಹಸಕ್ಕೆ ಕೈಯಿಟ್ಟದ್ದು ಅವರ ಎಲ್ಲಾ ದುರಂತಕ್ಕೆ ಮುನ್ನುಡಿಯಾಗಿತ್ತು. 2006 ರ ಅಕ್ಟೋಬರ್ 2 ರ ಗಾಂಧಿಜಯಂತಿಯಂದು ಪೀಣ್ಯ ಸಮೀಪದ ಮಂಜುನಾಥನಗರದಲ್ಲಿ ಒಂದು ವೈನ್ ಸ್ಟೋರ್ ಮತ್ತು ಮೂರು ಸಾರಾಯಿ ಅಂಗಡಿಗಳ ವಿರುದ್ಧ ದೊಡ್ಡ ಹೋರಾಟಕ್ಕೆ ಕೈಯಿಟ್ಟರು. ಅಲ್ಲಿನ ವಿಘ್ನೇಶ್ವರ್ ವೈನ್ಸ್‌ನ ಧಣಿ ಪ್ರಕಾರ ಅಬಕಾರಿ ಆಯುಕ್ತರ ಕಚೇರಿಯಲ್ಲೇ ಬಾಬು ವಿರುದ್ಧ ಗೂಂಡಾಗಳನ್ನು ಬಿಟ್ಟ. ಈ ಬಗ್ಗೆ ಅಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟರೆ ಪೊಲೀಸರು ಅದನ್ನು ಮೂಸಿಯೂ ನೋಡಲಿಲ್ಲ. ಮುಚ್ಚಿದ ಮೂರೂ ಸಾರಾಯಿ ಅಂಗಡಿಗಳವರು ರೌಡಿ ಹಿನ್ನೆಲೆಯವರೇ.

ಇದಾಗಿದ್ದೇ ಗವಿಪುರಂ ಗುಟ್ಟಹಳ್ಳಿಯಲ್ಲಿ ಸಾರಾಯಿ ಅಂಗಡಿ ವಿರುದ್ಧ ಮತ್ತೊಂದು ಪ್ರತಿಭಟನೆ ಶುರುರಾಯಿತು. ಸಾರಾಯಿ ಅಂಗಡಿಯ ಮಾಲಿಕ ವರದ ಹೇಳಿಕೇಳಿ ಹಳೇರೌಡಿ. ಮೂರು ಕೊಲೆ ಕೇಸಿನಲ್ಲಿ ಜೈಲು ಕಂಡಾತ. ಜೊತೆಗೆ ವಿಜಯನಗರದ ಮಾಜಿ ಕೌನ್ಸಿಲರ್ ರವೀಂದ್ರ ನಾಯಕನಗರದ ಹರಿಶ್ಚಂದ್ರಘಾಟ್ ಎದುರು ತೆರೆದಿದ್ದ ಚಾಮುಂಡಿ ವೈನ್ಸ್ ವಿರುದ್ಧವೂ ಬಾಬು ಹೋರಾಟ ಶುರುವಾಗಿತ್ತು. ಇಷ್ಟೆಲ್ಲ ಅಪಾಯಗಳನ್ನು ಒಮ್ಮೆಗೇ ಮೈಮೇಲೆ ಹಾಕಿಕೊಂಡಿದ್ದ ಬಾಬು ಪಾಲಿಗೆ ಸಾಕ್ಷಾತ್ ಯಮನಂತೆ ಬಂದವನು ಪ್ರಕಾಶ್‌ನಗರದ ಕುಮಾರ್ ವೈನ್ಸ್ ಮಾಲಿಕ ಕುಮಾರೇಗೌಡ.

ಪ್ರಕಾಶ್ ನಗರದ ಅಯ್ಯಪ್ಪ ದೇವಸ್ಥಾನದ ಎದುರಿಗಿರುವ ಕುಮಾರ್ ವೈನ್ಸ್, ಶ್ರೀರಾಂಪುರ ಸುತ್ತಮುತ್ತಲ ಅಷ್ಟೂ ಸಾರಾಯಿಗಳ ಕೇಂದ್ರಸ್ಥಾನ. ಪಕ್ಕದಲ್ಲೇ ದಲಿತರ ಆರ್‌ಜಿಬಿ ಕಾಲೋನಿಯಿದೆ. ಕೇವಲ ವೈನ್‌ಸ್ಟೋರ್ ಆಗಿದ್ದ ಇದನ್ನು ಮೇಲ್ದರ್ಜೆಗೇರಿಸಿ, ಬಾರ್ ಮಾಡಿಬಿಟ್ಟರೆ ದೊಡ್ಡ ಲಾಭ ಮಾಡ ಬಹುದೆಂಬುದು ಕುಮಾರೇಗೌಡನ ಲೆಕ್ಕಾಚಾರ. ಆದರೆ,

ಬಾಬು ಅಡ್ಡಗಾಲಿಟ್ಟದ್ದು ಒಂದೆಡೆಯಾದರೆ ಮತ್ತೊಂದೆಡೆ ಗಂಡುಸತ್ತ ಹೆಂಗಸೊಬ್ಬಳ ರಕ್ಷಣೆಗೆ ನಿಂತು ಹಂತಕ ಪಾಯ್ಸನ್ ರಾಮನ ವಿರುದ್ಧ ಬಾಬು ತೊಡೆತಟ್ಟಿದ್ದಾರೆ. ಕೇವಲ ಲಿಕ್ಕರ್ ಲಾಬಿಯನ್ನಷ್ಟೇ ಎದುರು ಹಾಕಿಕೊಂಡಿದ್ದರೆ ಅದನ್ನು ಬಾಬು ಎದುರಿಸಬಹುದಿತ್ತು, ಜೊತೆಗೆ ಕಡಬಗೆರೆಯ ಪಾಯ್ಸನ್ ರಾಮನಂಥ ಪಳಗಿದ ಪಾತಕಿಯ ದುಷ್ಮನಿ ಬಾಬು ಪಾಲಿಗೆ ಮರಣದಂಡನೆಯಾಯಿತು.

ವೈನ್ಸ್ ದೊರೆ ಕುಮಾರೇಗೌಡ ಮತ್ತು ಹಂತಕ ಪಾಯ್ಸನ್ ರಾಮ ಕೈಜೋಡಿಸಿದ್ದಾರೆ. ಅದು 2008ರ ಜುಲೈ 21ರ ಸೋಮವಾರ ಬಾಬು ಹತ್ಯೆಯಲ್ಲಿ


ಬಾಬುಹತ್ಯೆ ಖಂಡಿಸುತ್ತಿರುವ ಹೋರಾಟಗಾರ್ತಿ ಮೇಧಪಾಟ್ಕರ್

ಪರ್ಯಾವಸಾನಗೊಂಡಿದೆ. ಬಹುಶಃ ಮದ್ಯವಿರೋಧಿ ಹೋರಾಟದಲ್ಲಿ ಬಾಬು ಪ್ರಾಮಾಣಿಕವಾಗಿಲ್ಲದಿದ್ದರೆ, ಬರುತ್ತಿದ್ದ ಲಕ್ಷಗಟ್ಟಲೆ ದುಡ್ಡಿಗೆ ಕೈಚಾಚಿದ್ದರೆ, ಗಂಡಸತ್ತ ಹೆಂಗಸೊಬ್ಬಳ ಸಂಕಟಕ್ಕೆ ನೆರವಾಗದೇ ಹೋಗಿದ್ದರೆ, ಭ್ರಷ್ಟನಾಗಿದ್ದರೆ, ತನ್ನ ಮೂರು ಹೊಟೇಲು, ಎರಡು ಕಾನ್ವೆಂಟುಗಳನ್ನು ಏಕೆ ಮಾರಿಕೊಳ್ಳಬೇಕಿತ್ತು?

ವಿಕಟ ಹೇಗಿದೆಯೆಂದರೆ ಇಲ್ಲಿಗೆ ತಿಂಗಳ ಹಿಂದೆ ತನ್ನ ಎರಡನೇ ಮಗ ನಿಶ್ಚಿತಾರ್ಥದ ದಿನ ಅಡುಗೆಗೆ ಗ್ಯಾಸ್ ಸಿಲೆಂಡರ್ ತರುವುದಕ್ಕೂ ಬಾಬು ಬಳಿ ದುಡ್ಡಿರಲಿಲ್ಲ. ಬಾಬು ಕೊಲೆಯಾಗಿದ್ದಾರೆಂಬುದನ್ನೇ ಅರಿಯದೇ ಕೇವಲ ಪೆಟ್ಟಷ್ಟೇ ಬಿದ್ದಿದೆಯೆಂದು ನಂಬಿದ ಅವರ ಪತ್ನಿ, ಕತ್ತಿನಲ್ಲಿದ್ದ ಚಿನ್ನದ ತಾಳಿಯ ಗುಂಡು ಮತ್ತು ಹದಿನೈದು ದಿನಕ್ಕಷ್ಟೇ ಸಾಲಬಹುದಾಗಿದ್ದ ದಿನಸಿ ಬಿಟ್ಟರೆ ಮನೆಯಲ್ಲಿ ಬೇರೇನೂ ಇರಲಿಲ್ಲ.

ಬಾಬು ದುಷ್ಟನಾಗಿದ್ದರೆ ಈ ಗತಿ ಬರುತ್ತಿತ್ತೆ? ಕನಿಷ್ಠ ಕುಮಾರೇಗೌಡ ತಂದಿದ್ದ ಐದು ಲಕ್ಷವನ್ನಾದರೂ ಮುಟ್ಟಿದ್ದರೆ ಪ್ರಾಣ ಉಳಿಯುತ್ತಿತ್ತಾ?

ತನ್ನ ಪ್ರಾಮಾಣಿಕತೆ ಮತ್ತು ಜನನಿಷ್ಠೆಯೇ ಬಾಬು ಪಾಲಿಗೆ ಮುಳುವಾಗಿದೆ. ಬಾಬು ಕರ್ನಾಟಕ ಕಂಡ ಮಹಾನ್ ಹುತಾತ್ಮ. ಗಾಂಧಿಯ ದಾರಿ ಹಿಡಿದು ಗಾಂಧಿ ಟೋಪಿ ಧರಿಸಿ ಕೊನೆಗೆ ಅದರಲ್ಲೇ ಕಗ್ಗೊಲೆ ಯಾದ ವೀರಯೋಧ. ಕಾರ್ಗಿಲ್ ಯುದ್ಧದಲ್ಲಿ ಪ್ರಾಣ ಕೊಟ್ಟವರ ಪ್ರತಿಮೆ ಇಟ್ಟಿದ್ದೇವೆ. ಲಕ್ಷಗಟ್ಟಲೇ ನಿಧಿ ಸಂಗ್ರಹಿಸಿ ಅವರ ಕುಟುಂಬ ಉಳಿಸಿದ್ದೇವೆ. ಸೈನಿಕರಿ ಗಾದರೆ ಸರ್ಕಾರಿ ಸಂಬಳವಿರುತ್ತೆ.

ಆದರೆ ಬಾಬು ಸೆಣಸಿದ್ದು ದೇಶದೊಳಗಿನ ಶತ್ರುಗಳ ವಿರುದ್ಧ. ಹೊರಗಿನ ವೈರಿಗಳಿಗಿಂತಲೂ ಇವರೇ ಅಪಾಯಕಾರಿ. ಇಂಥವರ ವಿರುದ್ಧ ಹೋರಾಡಿ ಅವರಿಂದಲೇ ಹತನಾದ ಬಾಬುವಿಗೆ ಯಾರು ಸಂಬಳ ಕೊಟ್ಟರು?

ನೂರಾರು ಜನರನ್ನು ಸಂಘಟಿಸಿ ವರ್ಷಾನುಗಟ್ಟಲೇ ಸಾರಾಯಿ ಅಂಗಡಿಯ ಮುಂದೆ ಧರಣಿ ಕೂತರೂ ಪತ್ರಿಕೆಗಳು ಅದನ್ನು ಗುರುತಿಸಲಿಲ್ಲ, ರಾಜ್ಯಾದ್ಯಂತ ನಡೆದ ಮದ್ಯವಿರೋಧಿ ಹೋರಾಟ ಯಾವ ಮಿಡಿಯಾಗಳಿಗೂ ಕಾಣಿಸಲಿಲ್ಲ, ಎಂಥ ಹತಾಶೆಗೆಬಿದ್ದು ತತ್ತರಿಸಿದರೂ ಬಾಬು ತನ್ನ ಹೋರಾಟ ಬಿಡಲಿಲ್ಲ. ಈಗ ಕೊಲೆಯಾದರೂ ಅದು ಪ್ರಾಮಾಣಿಕ ಹೋರಾಟಗಾರನೊಬ್ಬನ ಕಗ್ಗೊಲೆಯೆಂಬುದು ಕೂಡ ಯಾರಿಗೂ ಅರ್ಥವಾಗದೇ ಹೋದರೆ ಅದಕ್ಕಿಂತ ದುರಂತ ಮತ್ತೊಂದಿಲ್ಲ. ■

ಬಾಂಬ್ ಸ್ಫೋಟಕ್ಕೂ ಜಾತಿಯೇ ಕಾರಣ!


ಥೂತ್ತೇರಿ

ಯಾಹೂ

ಮಾರ್ಕ್ಸ್‌ವಾದಿಗಳು ಯಾವುದೇ ವಿಷಯ ತೆಗೆದರೂ ಅದಕ್ಕೆ ಆರ್ಥಿಕ ಸಮಸ್ಯೆಯ ಅರ್ಥಮೂಲಗಳನ್ನು ಹುಡುಕಿ ಮಾತನಾಡುತ್ತಾರಂತೆ. ಮುಸ್ಲಿಮರನ್ನು ಮಾತನಾಡಿಸಿದರೆ "ಅಲ್ಲಾ ಹೇಳಿದಂತೆ ನಡೆದರೆ ಎಲ್ಲಾ ಖುಲ್ಲಾ ಸಾರ್" ಎನ್ನುತ್ತಾರಂತೆ. ಇನ್ನು ಚೆಡ್ಡಿಗಳನ್ನ ಮಾತನಾಡಿಸಿದರೆ ಹಿಂದೂ ರಾಷ್ಟ್ರದ ಅಡಿಪಾಯದಿಂದ ಹಿಡಿದು ಬಾಬರಿ ಮಸೀದಿಯಿಂದ ರಾಮಮಂದಿರಕ್ಕೆ ತಲುಪುತ್ತಾರಂತೆ. ಹೀಗೆ ಮೂಲಭೂತ ಸಮಸ್ಯೆಗೆ ತುತ್ತಾದವರೆಲ್ಲಾ ಮೂಲವ್ಯಾದಿಯ ಬಗ್ಗೆ ಮಾತನಾಡುತ್ತಿರಬೇಕಾದರೆ, ಕರ್ನಾಟಕದ ಇಂತದೇ ಕೇಸು ಪತ್ತೆಯಾಗಿದೆಯಂತಲ್ಲಾ, ಈಚೆಗೆ ಬೆಂಗಳೂರಲ್ಲಿ ಐದಾರು ಕಡೆ ಸಿಡಿಮದ್ದು ಸಿಡಿಯಲು ಕಾರಣವೇನೆಂದು ದೇವೇಗೌಡ ರನ್ನು ವರದಿಗಾರರು ಕೇಳಲಾಗಿ ಗೌಡರು ಕಣ್ಣುಬಿಟ್ಟೇ "ಜಾತಿಯೇ ಕಾರಣ" ಎಂದರಂತಲ್ಲಾ. ವರದಿಗಾರರು ಮುಸ್ಲಿಂ ಜಾತಿ ಎಂದು ರಭಸದಿಂದ ಕೆರೆದುಕೊಳ್ಳುತ್ತಿರ ಬೇಕಾದರೆ, ಗೌಡರು ಮತ್ತು ಮುಂದುವರಿದು "ಎಡೂರಪ್ಪ ಸ್ವಜಾತಿಯ ಅಧಿಕಾರಿಗಳನ್ನು ಆಯಕಟ್ಟಿನ ಜಾಗಕ್ಕೆ ಕೂರಿಸಿಕೊಂಡು ಆಡಳಿತ ಮಾಡಲು ಹೋದರೆ ಇನ್ನೇನಾ ಗುತ್ತೆ" ಎಂದು ಒಳಗೊಳಗೇ ನಗುತ್ತಾ ಕಣ್ಣುಮುಚ್ಚಿದ ರಂತಲ್ಲಾ, ಥೂತ್ತೇರಿ!!

* * * *

ಇದ್ದಕ್ಕಿದ್ದಂತೆ ಅಪ್ಪನ ಹಿಂದೆ ಸಂತೆಗೆ ಹೋದ ಹೈದನಂತೆ ದೆಹಲಿಗೆ ಹೋಗಿದ್ದ ಕುಮಾರಸ್ವಾಮಿ ಯನ್ನು ಮಾತನಾಡಿಸ ಬೇಕೆನಿಸಿತಲ್ಲಾ. ಆ ಕೂಡಲೇ ಫೋನ್ ಮಾಡ ಲಾಗಿ ಸಿಕ್ಕೇಬಿಟ್ಟರು.



ರಿಂಗ್ ಟೋನ್: "ಈ ಸಂಜೆ ಯಾಕಾಗಿದೆ ನೀನಿಲ್ಲದೆ ಈ ಸಂಜೆ...."

"ಹಲೋ, ಯಾರು?"

"ನಾನು ಸಾರ್, ಯಾಹೂ. ದೆಹಲಿಗೋಗಿದ್ರಂತೆ, ಅದ್ಕೆ ಮಾತನಾಡಸನ ಅಂತ ಫೋನ್ ಮಾಡಿದೆ ಸಾರ್."

"ಇಲ್ಲಿಗೆ. ಬನ್ನಿ ಮಾತಾಡನ."

"ಬೆಂಗಳೂರಲ್ಲಿ ಓಡಾಡಕ್ಕೆ ಹೆದ್ರಿಕೆಯಾಗ್ತಾಯಿದೆ ಸಾರ್."

"ನೋಡಿ, ನನ್ನ ಆಡಳಿತದಲ್ಲಿ ಒಂದು ಸಣ್ಣ ಘಟನೆಗೂ ಆಗಲಿಲ್ಲ, ಒಂದು ಪಟಾಕಿ ಕೂಡ ಸಿಡಿಲಿಲ್ಲ."

"ನಿಜ ಸಾರ್. ರಾಜಕುಮಾರ್ ತೀರಿಕೊಂಡಾಗ ಎಂಟು ಜನ ಕೊಂದಿದ್ದು ಬಿಟ್ರೆ ಇನ್ಯಾರನ್ನೂ ಕೊಲ್ಲಲಿಲ್ಲ ನೀವು."

"ನಾನಲ್ಲ ಕಂಡ್ರಿ ಕೊಂದಿದ್ದು, ಪೊಲೀಸ್‌ನೋರು. ಜನಗಳೇ ಅವರನ್ನ ಕೊಲ್ಲಕ್ಕೆ ಹೋದಾಗ ಪಾಪ ಅವರೇನು ಮಾಡ್ತರೆ?"

"ಆ ಸಮಯದಲ್ಲಿ ಇದಕ್ಕೆಲ್ಲ ಯಾರದೊ ಕೈವಾಡ ಇದೆ, ಮುಂದೆ ಹೇಳ್ತಿನಿ ಅಂದಿದ್ರಿ. ಹೇಳಲೇಯಿಲ್ಲ ಸಾರ್?"

"ಹೇಳ್ತೀನಿ, ಇನ್ನೂ ಟೈಮಿದೆ."

"ನಾನ್ಯಾರಿಗೂ ಹೇಳಲ್ಲ, ಹೇಳಿ ಸಾರ್."

"ಇನ್ಯಾರು, ಆ ಶಿವಕುಮಾರಂದೇ ಇದೆಲ್ಲಾ ಕಿತಾಪತಿ."

"ಇರಬಹುದು ಸಾರ್. ನೀವು ಅವನನ್ನ ಬೇಹುಗಾರಿಕೆ ಮಾಡ್ತಿರಿ, ಅವನು ನಿಮ್ಮನ್ನ ಬೇಹುಗಾರಿಕೆ ಮಾಡ್ತನೆ. ಯಾರ್ನನದ ನಂಬನ ಸಾರ್?"

"ನನ್ನನ್ನೇನು ಬೇಹುಗಾರಿಕೆ ಮಾಡ್ತನೆ ಅವುನು?"

"ಮೊನ್ನೆ ದೆಲ್ಲಿಗೋಗಿದ್ದಾಗ ನೀವು ಯಾವುದೊ ಹೆಂಗಸಿನ ಜೊತೆ ಗುಟ್ಟಾಗಿ ಮಾತಾಡ್ತಯಿದ್ರಂತಲ್ಲಾ ಸಾರ್?"

"ಗುಟ್ಟಾಗೇನು? ಬಹಿರಂಗವಾಗೇ ಮಾತಾಡಿದೆ ಕಂಡ್ರಿ. ಅದೂ ಮಾಯಾವತಿ ಜೊತೆ. ಆಗ ನಮ್ಮ ತಂದೆನೂ ಇದ್ರು."

"ಮಾಯಾವತಿ ಅಲ್ಲವಂತೆ ಸಾರ್. ಯಾರೊ ಸುಂದರವಾಗಿದ್ಲಂತೆ. ಹಳೆ ಸಿನಿಮಾ ನಟಿ ತರ ಇದ್ಲಂತೆ. ಆದ್ರು ಒಂದು ಮಗುವಿನ ತಾಯಿತರ ಕಾಣತ ಇದ್ಲಂತೆ."

"ಅವಳು ಹೋಟೆಲ್‌ನಲ್ಲಿ ಇದ್ದುರಿರಬಹುದು, ರಿಸೆಪ್ಷನ್ನು ಅವ್ರುಳು ಕಂಡ್ರಿ."

"ಅವ್ರುಳು ಗುಟ್ಟಾಗಿ ಯಾಕ್ ಮಾತಾಡ್ತಳೆ ಸಾರ್? ಮಾತಾಡಿದ ಮೇಲೆ ಫ್ಲೈಟ್ ಹತ್ತಿಕೊಂಡು ಹೋದಳಂತೆ."

"ಓ, ಅವಳು ಗಗನಸಖಿ ಕಂಡ್ರೀ. ಇಲ್ಲೆ ನಮ್ಮ ಕರ್ನಾಟಕದವಳೆ. ಪಾಪ ಈಗ ವಿರಿಂದಿಯಾದಲ್ಲಿ ಇದ್ದುಕೊಂಡು ಇಂಗ್ಲೆಂಡು, ದೆಲ್ಲಿ ಅಂತ ಓಡಾಡ್ತಳೆ. ಅವ್ರುಳ ಜೊತೆ ಮಾತಾಡಿದೆ ಅಷ್ಟೆ."

"ಓ ಅದನ್ನೆ ಈ ಜನ ತಪ್ಪು ತಿಳಕಂಡವ್ರರೆ ಸಾರ್."

"ತಿಳಕೊಳ್ಳಿ ಬಿಡ್ರಿ. ನಾನೇನು ಕೇರ್ ಮಾಡದಿಲ್ಲ, ನಮ್ಮ ತಂದೆಗೇ ಇಂತ ವಿಷಯದಲ್ಲಿ ಕೇರ್ ಮಾಡಿಲ್ಲ, ಇನ್ನು ಶಿವಕುಮಾರನಿಗೆ ಮಾಡ್ತಿನಾ?"

"ಮಾಡೊ ಅಗತ್ಯ ಇಲ್ಲ ಸಾರ್. ಅಂಗೆ ನೀವು ಜನಗಳ ಮಾತಿಗೆ ಕೇರ್ ಮಾಡೋರಾಗಿದ್ರೆ ಮುಖ್ಯಮಂತ್ರಿ ಆಗಕ್ಕಾಯಿತ್ತ? ಅದೋಗ್ಲಿ, ದೆಲ್ಲಿಗೆ ತಾವು ಹೋಗಿದ್ದು ಮಾಯಾವತಿ ಭೇಟಿಯಾದ ಬಗ್ಗೆ ಹೇಳಿ ಸಾರ್."

'ಅದೆ, ಮುಂದೆ ರಾಜಕಾರಣ ಒಂದು ಇದಾಗ್ತಾಯಿದೆ, ನಮ್ಮ ಈ ಒಂದು ಇದರ ಪ್ರಕಾರ, ನಾವು ಕಾಂಗ್ರೆಸ್ಸಿನೋರ ಜೊತೆ ರಾಜಕಾರಣ ಮಾಡದು ಅಂದ್ರೆ ನಮ್ಮ ಒಂದು ಸಿದ್ಧಾಂತ ಏನಿದೆ ಅದರ ಪ್ರಕಾರ ಕಷ್ಟ."

"ನಿಮ್ಮ ಸಿದ್ಧಾಂತ ಅಂದ್ರೆ ಅಪ್ಪಮಕ್ಕಳ ಸಿದ್ಧಾಂತ ಅಂತಾರಲ್ಲ ಸಾರ್?"

"ಅಂದುಕೊಳ್ಳಿ ಬಿಡ್ರಿ. ನಾವು ಮುಂದೆ ಬಿಜೆಪಿಯ ವರ ಜೊತೆ ಹೋಗಕ್ಕೂ ಆಗಲ್ಲ, ಅಕಸ್ಮಾತ್ ನಾವು ಹೋಗಿದ್ದನ್ನ ನಮ್ಮ ತಂದೆ ಸರಿಪಡಿಸಿ ಮುಂದೆ ಅವರ ಜೊತೆ ಹೋಗದ ರೀತಿ ತಡದ್ರು. ಆದ್ರಿಂದ ನಾವು ಇನ್ನು ಮುಂದೆ ರಾಜಕಾರಣ ಮಾಡದೇ ಆದ್ರೆ, ಎಲ್ಲಾ ಸಣ್ಣಪುಟ್ಟ ಪಾರ್ಟಿ ಜೊತೆ ಹೋಗಬೇಕು."

"ನೀವು ಸಣ್ಣಪುಟ್ಟ ಪಾರ್ಟಿಗಿಂತ್ಲೂ ಪುಟ್ಟ ಪಾರ್ಟಿ ಅಲ್ಲವ ಸಾರ್?"

"ಆದ್ರೆ ಕರ್ನಾಟಕದಲ್ಲಿ ನಾವು ದೊಡ್ಡ ಪಾರ್ಟಿ ಕಂಡ್ರಿ. ಮುಂದೆ ಲೋಕಸಭಾ ಚುನಾವಣೆ ಬಂದ್ರೆ ನಾವು ಕನಿಷ್ಠ ಹದಿನೇಳು ಸೀಟು ಬರ್ತಿವಿ."

"ಅದ್ಯಂಗೆ ಸಾರ್?"


"ನಮ್ಮ ಪಾರ್ಟಿ ಪ್ರೆಸಿಡೆಂಟು ಮುಸ್ಲಿಮರು, ಅಂಗಾಗಿ ಮುಸ್ಲಿಮರೆಲ್ಲಾ ನಮ್ಮ ಪರ ಬರ್ತರೆ. ಇನ್ನು ಮಾಯಾವತಿ ಕಡೆ ಜನ ನಮ್ಮ ಕಡೆ ಬರ್ತರೆ. ನಮ್ಮ ಜಾತಿ ಜನ ನಮ್ಮನ್ನ ಬಿಟ್ರೆ ಇನ್ಯಾರಿಗೆ ಓಟು ಮಾಡ್ತರೆ? ಆದ್ರಿಂದ ಇನ್ನು ಮುಂದೆ ನಾವು ದಲಿತ್ರು, ಹೊಕ್ಕಲಿಗ್ರು, ಮುಸ್ಲಿಮರ್ನ ಸೇರಿಸಿ ರಾಜಕಾರಣ ಮಾಡ್ತಿವಿ. ಮಾಯಾವತಿನೂ ನಮ್ಮ ಮಾತು ಕೇಳಂಗೆ ಮಾಡ್ತಿವಿ ಕಂಡ್ರೀ."

"ಅಂತೂ ತರದು ಪೊರ್ಸು ತಯಾರು ಮಾಡ್ತಿರಿ?"

"ನೋಡ್ತಯಿರಿ, ಯಂಗೆ ಮಾಡ್ತಿವಿ!"

"ಥೂತ್ತೇರಿ!!!" ■

ಕಡಬಗೆರೆಯ ಸುಪಾರಿ ಕಿಲ್ಲರ್ ಭವಾನಿ



ಇದು ಪಾಯ್ಸನ್ ರಾಮನ ಶಿಷ್ಯ ಭವಾನಿಯದೇ ಕೆಲಸ!

ಪಳಗಿದ ಸಿಸಿಬಿ ಪೊಲೀಸ್ ಪೇದೆಯೊಬ್ಬ ಬಾಬು ಹತ್ಯೆ ಸುದ್ದಿ ಕೇಳಿದ್ದೇ ಹೇಳಿದ ಮಾತಿದು. ಬಾಬು ಹತ್ಯೆಗೂ ಮೂರು ದಿನಗಳ ಹಿಂದಷ್ಟೇ ಮುದಿ ವಾರಂಟ್‌ನ ಮೇಲೆ ಜೈಲು ಹೊಕ್ಕಿ ಕೂತ ಪಾಯ್ಸನ್ ರಾಮ ಸ್ಕೆಚ್ಚು ರೆಡಿ ಮಾಡಿಟ್ಟೇ ಜೈಲುಪಾಲಾಗಿದ್ದ.

ಅತ್ತ ರಾಮ ಜೈಲು ಹೊಕ್ಕಿ ಕೂತರೆ ಹೊರಗಿದ್ದವನು ಆತನ ಬಲಗೈ ಬಂಟ ಭವಾನಿ. ಈತನಕ ಮೂರು ಪ್ರಮುಖ ಹತ್ಯೆಗಳಲ್ಲಿ ಭವಾನಿಯ ಹೆಸರಿದೆ. ಮಚ್ಚನ ಹತ್ಯೆಯಲ್ಲೂ ಭಾಗವಹಿಸಿದ್ದ. ಮೂಲತಃ ರಾಮನ ಕಡಬಗೆರೆಯವನೇ ಆದ ಭವಾನಿ ನರಪಿಶಾಚಿ. ಇಲ್ಲಿಗೆ ವರ್ಷದ ಹಿಂದಷ್ಟೇ ಚಿಕ್ಕಗೊಲ್ಲರಹಟ್ಟಿಯ ಮೇಲೆ ದಾಳಿ ಮಾಡಿ ಸೀಡಿ ಅಂಗಡಿಯೊಂದನ್ನು ಪುಡಿಗೈದಿದ್ದ. ಜನಪ್ರಿಯ ಲೇಟೆಸ್ಟ್ ಕೇಬಲ್ ಕಿತ್ತುಕೊಂಡ. ಮಾಚೋಹಳ್ಳಿ ಗೇಟಿನಲ್ಲಿ ಇನ್ಯಾರದೋ ಹುಡುಗಿಯೊಬ್ಬಳನ್ನು ಧರ್ಮಸ್ಥಳಕ್ಕೆ ಎಳೆದೊಯ್ದು ಮದುವೆಯಾದ.

ವೈನ್ಸ್ ಖದೀಮ ಕುಮಾರೇಗೌಡನ ಸುಪಾರಿಯನ್ನು ಭವಾನಿಗೆ ಒಪ್ಪಿಸಿ ತಾನು ಸೇಫಾಗಿ ಜೈಲು ಸೇರಿಕೊಂಡ ಪಾಯ್ಸನ್ ತಾನು ಸಲೀಸಾಗಿ ಬಚಾವಾಗಬಹುದೆಂದುಕೊಂಡಿದ್ದ. ಆತನ ಸ್ಕೆಚ್ಚನ್ನು ಯಥಾವತ್ತಾಗಿ ಜಾರಿಗೊಳಿಸಿದ ಭವಾನಿ ತನ್ನ ಜೊತೆ ಕಿರಣ ಎಂಬ ಮತ್ತೊಬ್ಬ ಹಂತಕನನ್ನು ಜೊತೆ ಹಾಕಿಕೊಂಡಿರಬೇಕು. ರಾಮನಗರದ ಸಮೀಪ ನಡುರಸ್ತೆಯಲ್ಲೇ ಬಾಬುರನ್ನು ಕೊಂದ ಹಂತಕರು ಹಾಗೇ ಮೈಸೂರಿಗೆ ಹೋಗಿರಬೇಕು. ಅಲ್ಲಿಂದ ಶಿವಾಜೆಟ್ಟಿ ಮತ್ತು ರಾಮಕೃಷ್ಣ ಶೆಟ್ಟಿ ಮಂಗಳೂರಿಗೆ ಹೋಗಿ ತಲೆಮರೆಸಿಕೊಂಡರೂ ಅಚ್ಚರಿಯಿಲ್ಲ.

ಮಾಗಡಿ ಇನ್ಸ್‌ಪೆಕ್ಟರ್ ಕೃಷ್ಣಕುಮಾರ್ ಥರದ ನಿಷ್ಠುರಿ ಪೊಲೀಸ್ ಅಧಿಕಾರಿಯಿರುವ ತನಕ ಬಾಬು ಹಂತಕರಿಗೆ ನಿದ್ದೆಯಿಲ್ಲ.


ಕಸಾಪ ಚುನಾವಣೆ: ಲಿಂಗಾಯತ-ಒಕ್ಕಲಿಗ ಕದನ

ಕನ್ನಡ ಸಾಹಿತ್ಯದಲ್ಲಿ ಲಿಂಗಾಯತ ಸಾಹಿತ್ಯ, ಒಕ್ಕಲಿಗ ಸಾಹಿತ್ಯ ಎಂಬ ವರ್ಗೀಕರಣ ಇಲ್ಲವಾದರೂ ಸಾಹಿತ್ಯ ಪರಿಷತ್ ಚುನಾವಣೆಯಲ್ಲಂತೂ ಒಕ್ಕಲಿಗ-ಲಿಂಗಾಯತ ಕದನ ಯಾವಾಗಲೂ ಇದ್ದಿದ್ದೆ.

ಈ ಸಲದ ಚುನಾವಣೆ ಸಹ ಇದಕ್ಕೆ ಹೊರತಾಗಿಲ್ಲ ಎಂಬುದೇ ಬೇಸರದ ವಿಚಾರ.



ಪಾರ್ಶ್ವನಾಥ

ಡಾ. ಸಿ.ವೀರಣ್ಣ, ಡಾ. ನಲ್ಲೂರು ಪ್ರಸಾದ್, ಡಾ. ವಿದ್ಯಾಶಂಕರ್ ಕೇಂದ್ರ ಕಸಾಪ ಅಧ್ಯಕ್ಷ ಸ್ಥಾನಕ್ಕೆ ಅಖಾಡದಲ್ಲಿರುವ ಪ್ರಬಲ ಅಭ್ಯರ್ಥಿಗಳು. ಸಹಜವಾಗೇ ವೀರಣ್ಣ ಹಾಗೂ ವಿದ್ಯಾಶಂಕರ ಲಿಂಗಾಯತ ಗುಂಪಿನವರೆಂದು, ನಲ್ಲೂರು ಪ್ರಸಾದ್ ಒಕ್ಕಲಿಗರ ಗುಂಪಿನ ಹುರಿಯಾಳೆಂತಲೂ ಈಗಾಗಲೇ ಹವಾ ಕ್ರಿಯೇಟ್ ಆಗಿ ಹೋಗಿದೆ. ಇವರ ಪೈಕಿ ವಿದ್ಯಾಶಂಕರ ಸ್ವಲ್ಪ ದುರ್ಬಲ ಕ್ಯಾಂಡಿಡೇಟ್. ಹಾಗಾಗಿ ಲಿಂಗಾಯತರಿಗೆ ವೀರಣ್ಣನವರೂ, ಒಕ್ಕಲಿಗರಿಗೆ ನಲ್ಲೂರು ಪ್ರಸಾದ್ ಈಗ ಹಾಟ್ ಫೇವರಿಟ್ ರನ್ನರ್‌ಗಳಾಗಿದ್ದಾರೆ.


ಪುನರೂರು

ಅಸೆಂಬ್ಲಿ ಎಲೆಕ್ಷನ್ ನಡೆಯುವಾಗ ನಾನಾ ರೀತಿಯ ಮೂಢನಂಬಿಕೆಗಳೂ ಕೆಲಸ ಮಾಡುವಂತೆ ಕಸಾಪ ಎಲೆಕ್ಷನ್‌ನಲ್ಲೂ ಅಂತಹ ಮೂಢನಂಬಿಕೆಗಳಿವೆ. ಅದರಲ್ಲಿ ಒಂದೆಂದರೆ ಒಮ್ಮೆ ಸ್ಪರ್ಧಿಸಿ ಸೋತವರು ಮುಂದಿನ ಬಾರಿ ಗೆಲ್ಲುತ್ತಾರೆಂಬ ಮೂಢ ನಂಬಿಕೆಯಿದೆ. ಈ ಹಿಂದೆ ಸಾ.ಶಿ. ಮರುಳಯ್ಯ, ಹರಿಕೃಷ್ಣ ಪುನರೂರು, ಚಂಪಾ ಎಲ್ಲಾ ಗೆದ್ದಿದ್ದು ತಾಯಿ ಭುವನೇಶ್ವರಿಯ ಈ ಪವಾಡದಿಂದ ಎಂತಲೇ ಬಹಳ ಜನ ನಂಬಿದ್ದಾರೆ.

ನಲ್ಲೂರು ಪ್ರಸಾದ್ ಈ ಬಾರಿ ಪ್ರಧಾನವಾಗಿ ನಂಬಿಕೊಂಡಿರುವುದು ಇದನ್ನೇ.



ನಾರಾಯಣಗೌಡ

ಆದರೆ ಡಾ.ಸಿ. ವೀರಣ್ಣನವರ ಓಡಾಟ, ಖದರ್ರೇ ಬೇರೆ ರೀತಿಯಲ್ಲಿದೆ. ಬೆಂಗಳೂರು ವಿಶ್ವವಿದ್ಯಾಲಯ ಪ್ರಸಾರಾಂಗದ ನಿರ್ದೇಶಕರಾಗಿದ್ದ ವೀರಣ್ಣನವರ ಅಭ್ಯರ್ಥಿಗಿರಿಯನ್ನೇ ರಾಜ್ಯಾದ್ಯಂತ ಲಿಂಗಾಯತ ಮಠಗಳು, ಸಾಹಿತಿಗಳು, ಮತದಾರರು ಬೆಂಬಲಿಸುತ್ತಿರುವುದು ಸುಳ್ಳೇನಲ್ಲ, ಇದರೊಂದಿಗೆ ವೀರಣ್ಣನವರ ವ್ಯಕ್ತಿತ್ವ ಈ 'ಲಿಂಗಾಯತ' ವ್ಯಾಪ್ತಿಯ ಆಚೆಗೂ ಇದೆ ಎಂಬುದು ಸುಳ್ಳೇನಲ್ಲ.

ಆದರೆ ನಲ್ಲೂರು ಲೆಕ್ಕಾಚಾರವೇ ಬೇರೆ.


ಅವರ ಪ್ರಕಾರ ವೀರಣ್ಣ, ವಿದ್ಯಾಶಂಕರ ಇಬ್ಬರೂ ಲಿಂಗಾಯತರಾದ್ದರಿಂದ ಓಟುಗಳು ವಿಭಜನೆಯಾಗಿ ಅದು ನಲ್ಲೂರಿಗೆ ಉಪಯೋಗ ಆಗುತ್ತೆ ಎಂಬುದು ಒಂದು ಪಾಯಿಂಟು. ಜೊತೆಗೆ ನಲ್ಲೂರು ಈ ಬಾರಿ ಕಸಾಪ ಖಜಾಂಚಿಯಾಗಿದ್ದ ಹೋಟೆಲ್ ಲಾಬಿಯ ಸ್ಟ್ರಾಂಗ್‌ಮನ್ ಪುಂಡಲೀಕ ಹಾಲಂಬಿಯನ್ನು ಬಹಳ ನೆಚ್ಚಿಕೊಂಡಿದ್ದಾರೆ. ಆದರೆ ಹಾಲಂಬಿ ಈ ಬಾರಿ ಓಡಾಡುವ ಸ್ಥಿತಿಯಲ್ಲಿಲ್ಲ, ಅವರ ಆರೋಗ್ಯ ಅಷ್ಟು ಚೆನ್ನಾಗಿಲ್ಲ, ಇದು ನಲ್ಲೂರ್‌ಗೆ ಸಮಸ್ಯೆಯಾದರೂ ಶಿವಶಂಕರ್, ಹಂಪನಾಗಳೆಲ್ಲಾ ನಲ್ಲೂರು ಹಿಂದೆ ಇದ್ದಾರೆ.

ಅತಿ ಅಪಾಯಕಾರಿ ಬೆಳವಣಿಗೆ ಏನೆಂದರೆ ಕರ್ನಾಟಕ ರಕ್ಷಣಾ ವೇದಿಕೆಯ ನಾರಾಯಣಗೌಡ, ನಲ್ಲೂರು ಪ್ರಸಾದ್ ಒಕ್ಕಲಿಗರೆಂಬ ಒಂದೇ ಕಾರಣದಿಂದ ಗೆಲ್ಲಿಸಲು ಹೊರಟಿರುವುದು. ಕರವೇಯ ಕೆಲವು ಜಿಲ್ಲಾ ಘಟಕಗಳು ಈ ಒಕ್ಕಲಿಗ ಸಾಹಿತ್ಯ ರಾಜಕೀಯ ಮಾಡಲು ಹೊರಟಿದ್ದಾವೆ.


ನಲ್ಲೂರು ಪ್ರಸಾದ್

ಪಂಚೆ ಬಿಚ್ಚಿದವರು, ಬಿಚ್ಚಿಸಿಕೊಂಡವರೆಲ್ಲ ಒಂದೇ ಬಣ


ಕಸಾಪ ಚುನಾವಣೆಗೆ ಸಂಬಂಧಿಸಿದಂತೆ ಇದೊಂದು ಹೊಸ ಬೆಳವಣಿಗೆ. ಬಹುಶಃ 2004ರ ಅಕ್ಟೋಬರ್‌ನಲ್ಲೆಂದು ಕಾಣುತ್ತದೆ. ಆಗಿನ ಕಸಾಪ ಅಧ್ಯಕ್ಷ ಹರಿಕೃಷ್ಣ ಪುನರೂರು, ಕುವೆಂಪು ಬಗ್ಗೆ ಅವಹೇಳನಕಾರಿಯಾಗಿ ಮಾತಾಡಿದರೆಂದು ಒಂದು ವಿವಾದವೆದ್ದಿತ್ತು. ಆಗ ಕರವೇ ಕಾರ್ಯಕರ್ತರ ಗುಂಪೊಂದು ಸಭೆಯೊಂದರಲ್ಲಿ ಭಾಗವಹಿಸಿದ್ದ ಪುನರೂರು ಪಂಚೆ ಕಿತ್ತು ಬರೀ ಚೆಡ್ಡಿಯಲ್ಲಿ ನಿಲ್ಲಿಸಿದ್ದರು. ಆ ಪಂಚೆ ಪ್ರಕರಣ ಗಲಾಟೆಯ ಹಿಂದೆ ಕರವೇ, ರಾಮಣ್ಣ ಕೋಡಿಹೊಸಹಳ್ಳಿ ಎಲ್ಲರೂ ಇದ್ದರು. ಅಂದರೆ ಆಗ ಪಂಚೆ ಬಿಚ್ಚಿಸಿಕೊಂಡಿದ್ದ ಪುನರೂರು ಹಾಗೂ ಬಿಚ್ಚಿಸಿದ್ದ ನಾರಾಯಣಗೌಡ, ರಾಮಣ್ಣ ಎಲ್ಲರೂ ಈಗ ಒಂದೇ ಗುಂಪಾಗಿ ನಲ್ಲೂರು ಪ್ರಸಾದ ಹಿಂದೆ ನಿಂತಿದ್ದಾರೆ.


ಸಿ. ವೀರಣ್ಣ

ಕಸಾಪಗೆ ರಾಜ್ಯಾದ್ಯಂತ 60 ಸಾವಿರಕ್ಕೂ ಜಾಸ್ತಿ ಮತದಾರರಿದ್ದಾರೆ. ಇವರಲ್ಲಿ ಅರ್ಧಕ್ಕರ್ಧ ಲಿಂಗಾಯತರ ಓಟುಗಳಿವೆ. ಶೇ. 30ರಷ್ಟು ಒಕ್ಕಲಿಗರಿದ್ದಾರೆ. ಉಳಿದದ್ದು ಜೈನರು ಹಿಂದುಳಿದವರ, ಹೋಟೆಲ್ ಕಾರ್ಮಿಕರ ಪೇರು.

ನಲ್ಲೂರು ಪ್ರಸಾದ್‌ಗೆ ಬೆಂಗಳೂರುನಗರ, ಗ್ರಾಮಾಂತರ, ರಾಮನಗರ, ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಗಟ್ಟಿಯಾದ ಬೆಂಬಲ ಸಿಗುತ್ತಿದೆ. ಇನ್ನೂ ವೀರಣ್ಣನವರಿಗೆ ಹಳೇ ಮೈಸೂರಿನ ಪ್ರದೇಶವೂ ಸೇರಿದಂತೆ ಉತ್ತರ ಕರ್ನಾಟಕ ಪೂರಾ ಬೆಂಬಲ ಸಿಗುತ್ತಿದೆ. ಪಾರ್ಶ್ವನಾಥ, ಚಿಮೂ, ಶೇಷಗಿರಿರಾವ್ ಬೆಂಬಲವೂ ಸಿಕ್ಕಿದೆ. ಇವರಿಬ್ಬರಲ್ಲಿ ಯಾರೇ ಗೆದ್ದರೂ ಆ ಗೆಲುವಿಗೆ 'ಜಾತಿ'ಯ ಸೋಂಕು ಇರುತ್ತದೆ. ಕನ್ನಡ ಸಾಹಿತ್ಯ-ಸಾಂಸ್ಕೃತಿಕ ಜಗತ್ತಿನ ದುರಂತ ಇದು.

– ಪಾರ್ವತೀಶ




ಚಂಪಾ ಎಲ್ಲಿ?

ಈ ಬಾರಿಯ ಎಲೆಕ್ಷನ್‌ನಲ್ಲಿ ಎದ್ದು ಕಾಣುತ್ತಿರುವ ಗೈರು ಹಾಜರಿ ಚಂಪಾರದ್ದು. ಚಾಮರಾಜಪೇಟೆಯಿಂದ ವಿಧಾನಸಭಾ ಚುನಾವಣೆಗೆ ಕನ್ನಡದ ಹೆಸರಲ್ಲಿ ಚಂಪಾ ನಿಂತಿದ್ದರೂ ಬೇರೆ ಯಾರೂ ಸಪೋರ್ಟ್ ಮಾಡಲಿಲ್ಲವೆಂದು, ಅದರಿಂದಾಗಿ ತನಗೆ ಸೋಲಾಯಿತೆಂದು ಚಂಪಾ ಬೇಸರಪಟ್ಟುಕೊಂಡಿದ್ದಾರಂತೆ. ಅದಕ್ಕೆ ಅವರು ಕಸಾಪ ರಾಜಕೀಯದಿಂದ ದೂರ ಉಳಿದಿದ್ದಾರೆ. ಮಾತುಗಾರ ಚಂಪಾ ಗೈರುಹಾಜರಿಯಿಂದ ಅಷ್ಟರಮಟ್ಟಿಗೆ ಕಸಾಪ ಚುನಾವಣೆ ಈ ಬಾರಿ ನೀರಸ.

ಬೆಳಗಾವಿ ಕಸಾಪ: ತ್ರಿಕೋನ ಸ್ಪರ್ಧೆ

ಬೆಳಗಾವಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಚುನಾವಣೆಯ ನಿರೀಕ್ಷೆಗಳೆಲ್ಲ ಹುಸಿಯಾಗಿ ಹೋಗಿವೆ. ಬಸವರಾಜ ಜಗಜಂಪಿ ಅವಿರೋಧವಾಗಿ ಆಯ್ಕೆಯಾಗುವುದು ಖಚಿತ ಎಂಬ ಮಾತುಗಳು ಕೇಳಿಬರುತ್ತಿದ್ದವಾದರೂ, ಈಗ ಇಲ್ಲಿನ ಚುನಾವಣಾ ಅಖಾಡ ತ್ರಿಕೋನ ಸ್ಪರ್ಧೆಯ ಸ್ವರೂಪ ಪಡೆದುಕೊಂಡಿದೆ.

ಲಿಂಗರಾಜ ಮಹಾವಿದ್ಯಾಲಯದ ಪ್ರಾಚಾರ್ಯ ಹುದ್ದೆಯಿಂದ ಈಗಷ್ಟೇ ನಿವೃತ್ತರಾಗಿರುವ ಬಸವರಾಜ ಜಗಜಂಪಿ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಬೇಕು ಎಂಬುದು ಜಿಲ್ಲೆಯ ಬಹುತೇಕ ಸಾಹಿತಿಗಳ ಹಾಗೂ ಕಸಾಪ ಸದಸ್ಯರ ಗಟ್ಟಿ ನಿಲುವಾಗಿತ್ತು, ಆದರೆ ಕಳೆದ ಚುನಾವಣೆಯಲ್ಲಿ ಕೇವಲ ಕಡಿಮೆ ಮತಗಳಿಂದ ಪರಾಭವಗೊಂಡ ಅಥಣಿಯ ಅಪ್ಪಾಸಾಹೇಬ ಅಲಾಬದಿ ಅವರು ಯಾವಾಗ ನಾಮಪತ್ರ ಸಲ್ಲಿಸಿದರೋ ಆವಾಗಿನಿಂದ ಜಗಜಂಪಿ ಅವಿರೋಧ ಆಯ್ಕೆ ಜಡವಾಗಿ ಹೋಯಿತು.


ಜಗಜಂಪಿ

ಜಗಜಂಪಿ ಆಯ್ಕೆಗಾಗಿ ಸಭೆಗಳ ಮೇಲೆ ಸಭೆಗಳು ನಡೆದರೂ ಸಹ ಏನೂ ಪ್ರಯೋಜನವಾಗಲಿಲ್ಲ, ಒಮ್ಮತದ ಅಭ್ಯರ್ಥಿಯನ್ನು ಆಯ್ಕೆ ಮಾಡುವುದಕ್ಕಾಗಿ ರಾಜ್ಯಸಭಾ ಸದಸ್ಯ ಪ್ರಭಾಕರ ಕೋರೆ ಹಾಗೂ ಕೆಲ ಸ್ವಾಮೀಜಿಗಳ ನೇತೃತ್ವದ ಒಂದು ಸಮಿತಿ ರಚಿಸಿ ಅಲಾಬದಿ ಮನವೊಲಿಸುವ ಪ್ರಯತ್ನಗಳೆಲ್ಲ ವಿಫಲವಾಗಿವೆ.

ಹಾಗಾಗಿ ಈಗ ಕಸಾಪ ಕಣದಲ್ಲಿ ಬಸವರಾಜ ಜಗಜಂಪಿ ಹಾಗೂ ಅಪ್ಪಾಸಾಹೇಬ ಅಲಾಬದಿ ಪ್ರಮುಖ ಸ್ಪರ್ಧಿಗಳಾಗಿದ್ದು, ಇವರಿಬ್ಬರ ಮಧ್ಯೆ ಇನ್ನೋರ್ವ ದಿಗ್ಗಜ ಪ್ರೊ. ಸಿ.ವಿ. ಜ್ಯೋತಿ ಅವರು ಸ್ಪರ್ಧೆಯಲ್ಲಿರುವುದರಿಂದ ಬೆಳಗಾವಿ ಕಸಾಪ ಚುನಾವಣಾ ಕಣವೀಗ ತ್ರಿಕೋನ ಸ್ಪರ್ಧೆಯ ಸ್ವರೂಪ ಪಡೆದುಕೊಂಡಿದೆ. ಉಳಿದಂತೆ ಶಿವಾನಂದ ಕುಡಸೋಮಣ್ಣವರ ಹಾಗೂ ಬಿ.ಎಸ್. ಫಕೀರಸ್ವಾಮಿಮಠ ಕಣದಲ್ಲಿದ್ದರೂ ಹೆಚ್ಚಿನ ಗಮನ ಸೆಳೆಯುವುದಿಲ್ಲ.

ಕಳೆದ ಅವಧಿಯಲ್ಲಿ ಅಧ್ಯಕ್ಷರಾಗಿದ್ದ ಮೋಹನ ಪಾಟೀಲನ ನಿರ್ಲಕ್ಷ್ಯದಿಂದ ಬೆಳಗಾವಿಯಲ್ಲಿ ಕಸಾಪ ಸಂಪೂರ್ಣವಾಗಿ ನೆಲಕಚ್ಚಿದೆ. ಈತ ಕಸಾಪಕ್ಕಿಂತ ಬೆಂಗಳೂರು ಮೂಲದ ಬಸವ ಸಮಿತಿಯ ಪ್ರತಿನಿಧಿಯಾಗಿ ಕೆಲಸ ಮಾಡಿದ್ದೆ ಹೆಚ್ಚು, ಯಾರಾದರೂ ಕಸಾಪ ಸದಸ್ಯರಾಗಲು ಬಂದರೆ ಅವರ ತಲೆ ಕೆಡಿಸಿ ಬಸವಪಥ ಎನ್ನುವ ಪತ್ರಿಕೆಯೊಂದರ ಚಂದಾ ಮಾಡಿಸಿದ್ದೇ ಈತನ ದೊಡ್ಡ ಸಾಹಸ. ಮೂಲತ ಬೈಲಹೊಂಗಲದವನಾದ ಈತ ಕೆಲವೊಂದು ಕವಿಗೋಷ್ಠಿ ಬಿಟ್ಟರೆ ಮತ್ತೊಂದು ಕೆಲಸ ಮಾಡಿದ ಉದಾಹರಣೆಯಿಲ್ಲ.

ಈತ ಕಸಾಪ ಅಧ್ಯಕ್ಷನಾಗಿ ಕೆಲ ಕಚಾಡ ಕೆಲಸಗಳನ್ನು ಮಾಡಿದ್ದಾನೆ. ಜಿಲ್ಲೆಯಲ್ಲಿನ ಲೇಖಕರ ಪರಿಚಯ ಪುಸ್ತಕ ಹೊರತರುವುದಾಗಿ ಹೇಳಿ ನಾಲ್ಕು ಅಕ್ಷರ ಬರೆದವರನ್ನೆಲ್ಲ ಈ ಪುಸ್ತಕದಲ್ಲಿ ಸೇರಿಸುವುದಕ್ಕಾಗಿ ಕೆಲವರಿಂದ ಹಣವನ್ನು ಪಡೆದುಕೊಂಡಿದ್ದಾನೆ. ಆದರೆ ಆ ಪುಸ್ತಕ ಇನ್ನು ಪ್ರಕಟಗೊಂಡಿಲ್ಲ, ಅಲ್ಲದೇ ಕವಿಗೋಷ್ಠಿಗೆ ಕವನ ಕಳುಹಿಸುತ್ತಿದ್ದ ಉದಯೋನ್ಮುಖರ ಹೆಸರುಗಳನ್ನು ದೊಡ್ಡದೊಂದು ಪ್ರತಿ ಮುದ್ರಿಸಿ ಅವುಗಳನ್ನು ಹಂಚಿ ಕವನ ಓದಲು ಬಂದವರಿಂದ ಹಣ ಪಡೆದುಕೊಂಡ ಮಹಾಭೂಪ ಈ ಮೋಹನ ಪಾಟೀಲ. ತಾನು ಚಂದ್ರಶೇಖರ ಪಾಟೀಲರ ಸಂಬಂಧಿ ಎಂದು ಹೇಳಿಕೊಳ್ಳುವ ಈತ ಚಂಪಾರಂತೆ ನಾನು ಮೋಪಾ ಎಂದು ಬಂಬಡಾ ಕೊಚ್ಚಿಕೊಳ್ಳುತ್ತಾನೆ. ಅಲ್ಲದೇ ಕಸಾಪ ಸಂಘಟನೆಗಿಂತ ಬಿಜೆಪಿ ಸಂಘಟನೆ ಮಾಡಿದ್ದೂ, ಈತನ ಸಾಧನೆಗಳಲ್ಲಿ ಒಂದು.

ಒಟ್ಟಿನಲ್ಲಿ ಯಡ್ಡಿ ಸರ್ಕಾರವೀಗ ಬೆಳಗಾವಿಯಲ್ಲಿ ಡಿಸೆಂಬರ ಮಾಸಾಂತ್ಯದಲ್ಲಿ ವಿಶ್ವ ಕನ್ನಡ ಸಮ್ಮೇಳನ ನಡೆಸಲು ಚಿಂತನೆ ನಡೆಸಿದೆ. ಈ ಹಿನ್ನೆಲೆಯಲ್ಲಿ ಕಸಾಪವನ್ನು ಖಡಕ್ಕಾಗಿ ನಿರ್ವಹಿಸಬಲ್ಲ ಉತ್ಸಾಹಿ ಅಧ್ಯಕ್ಷರ ಅವಶ್ಯಕತೆ ಬೆಳಗಾವಿ ಜಿಲ್ಲೆಗಿದೆ. ಬಾಲ್ಯದಲ್ಲಿ ಮರಾಠಿಗರ ವಲಯದಲ್ಲಿ (ಬೆಳಗಾವಿಯ ಬಾಂಧೂರಗಲ್ಲಿ) ಮರಾಠಿಗರ ದೌರ್ಜನ್ಯಗಳಿಗೆ ಎದೆಯೊಡ್ಡಿ ಬೆಳೆದವರು ಡಾ. ಬಸವರಾಜ ಜಗಜಂಪಿ. ಬೆಳಗಾವಿಯಲ್ಲಿ ಅಟ್ಟಹಾಸ ಗೈಯುವ ಮರಾಠಿಗರಿಗೆ ತಕ್ಕ ಉತ್ತರ ಹೇಳಲು ಜಗಜಂಪಿ ಸಮರ್ಥ ಅಭ್ಯರ್ಥಿಯಾಗಿದ್ದಾರೆ. ಆದರೆ ಬಹುತೇಕ ಕಸಾಪ ಸದಸ್ಯರಲ್ಲಿ ಅಲಾಬದಿಯವರ ಬಗ್ಗೆ ಉತ್ತಮ ಪ್ರತಿಕ್ರಿಯೆ ಇದೆ. ಬೈಲಹೊಂಗಲ ತಾಲೂಕಿನಲ್ಲಿ ಅತೀ ಹೆಚ್ಚು ಕಸಾಪ ಸದಸ್ಯರಿದ್ದು, ಇದೇ ತಾಲೂಕಿನವರಾದ ಸಿ.ವಿ. ಜ್ಯೋತಿ ಅವರಿಗೆ ಇದು ಪ್ಲಸ್ ಪಾಯಿಂಟ್ ಆಗಬಹುದು. ಹಾಗಾಗಿ ಮೂವರಲ್ಲಿ ಗೆಲುವು ಯಾರಿಗೆ ಎಂಬುದು ಮಾತ್ರ ಚಿದಂಬರ ರಹಸ್ಯವಾಗಿ ಉಳಿದಿದೆ.

■ ಮಧುಬಾಲಾ

ಬೆಂಗಳೂರು: ನಂಜಪ್ಪನ ವಿರುದ್ಧ ಗುಂಜಪ್ಪ


ಕನ್ನಡ ಸಾಹಿತ್ಯವಿರಲಿ ಅಸಲಿಗೆ ಕನ್ನಡವೇ ಸರಿಯಾಗಿ ಗೊತ್ತಿರದ ರಾಮೇಗೌಡ ಬೆಂಗಳೂರು ಕಸಾಪ ಅಧ್ಯಕ್ಷ ಸ್ಥಾನಕ್ಕೆ ಈಗ ಸ್ಪರ್ಧಿ. ಇನ್ನೊಬ್ಬರು ನಂ. ನಂಜಪ್ಪ ಎಂಬುವರೂ ಸ್ಪರ್ಧಿಸಿದ್ದು ನಗರದ ಬಹುತೇಕ ಸಜ್ಜನ ಸದಸ್ಯರು ಇವರ ಬೆಂಬಲಕ್ಕಿದ್ದಾರೆ.

ಒಂದು ವಿಷಾದದ ಬೆಳವಣಿಗೆ ಏನೆಂದರೆ ಈ ನಗರ ಕಸಾಪ ಅಧ್ಯಕ್ಷ ಸ್ಥಾನದ ವಿಚಾರದಲ್ಲಿ ಪ್ರಮುಖ ಕನ್ನಡಪರ ಸಂಘಟನೆಯಾಗಿದ್ದ ಕನ್ನಡ ಸಂಘರ್ಷ ಸಮಿತಿಯೊಳಗೆ ಭಿನ್ನಾಭಿಪ್ರಾಯಗಳು ಬೆಳೆದು ಅದರ ಸಕ್ರಿಯ ಸದಸ್ಯರೇ ಈಗ ಎರಡು ಗುಂಪಾಗಿ ಬಿಟ್ಟಿದ್ದಾರೆ.


ರಾಮೇಗೌಡ


ಸಮೀವುಲ್ಲಾ


ರವೀಂದ್ರಕಾಂತ್


ಗೋಪಾಲಕೃಷ್ಣ

ಕನ್ನಡ ಭಾಷೆ, ಸಾಹಿತ್ಯಗಳ ಹಿತಾಸಕ್ತಿ ವಿಚಾರ ಬಂದಾಗೆಲ್ಲಾ ಮುಂಚೂಣಿಯಲ್ಲಿ ನಿಂತು ದನಿ ಎತ್ತುತ್ತಿದ್ದ ಸಂಘರ್ಷ ಸಮಿತಿಗೆ ಪ್ರಗತಿಪರ ಹಾಗೂ ಸ್ವಲ್ಪ ಸಮಾಜವಾದಿ ಆಶಯಗಳ ಪ್ರಭಾವವಿದೆ. ಅದರ ನಾಯಕ ರಾಮಣ್ಣ ಕೋಡಿ ಹೊಸಳ್ಳಿಯವರ ಬಗ್ಗೆ ಈಗಲೂ ಬಹುತೇಕರಿಗೆ ಗೌರವದ ಭಾವನೆಯಿದೆ. ಆದರೆ ಈ ಬಾರಿ ರಾಮೇಗೌಡನೆಂಬ ಆವರೇಜ್ ಲೆವೆಲ್‌ನ ವ್ಯಕ್ತಿಯನ್ನು ರಾಮಣ್ಣ ಬೆಂಬಲಿಸುತ್ತಿದ್ದಾರೆಂಬ ಕಾರಣಕ್ಕೆ ಅವರ ಬಳಗ ಅಸಮಾಧಾನಗೊಂಡಿದೆ. ಅದಕ್ಕೆ ಜಾತಿ ಪ್ರೇಮ ಕಾರಣವಾ ಅಂತ ಕೆಲವರಿಗೆ ಡೌಟು. ವಾಸ್ತವವಾಗಿ ಕಮಿಟೆಡ್ ಕಾರ್ಯಕರ್ತ ಸಮೀಉಲ್ಲಾ ಈ ಬಾರಿ ಅಭ್ಯರ್ಥಿಯಾಗಲಿ ಎಂದು ಬಹುತೇಕರ ಬಯಕೆಯಾಗಿತ್ತು.


ಆದರೆ ಅದೇನೇನು ಒಳರಾಜಕೀಯ ನಡೆಯಿತೋ ಸಂಘರ್ಷ ಸಮಿತಿ ನಂಜಪ್ಪನವರನ್ನು ಅಭ್ಯರ್ಥಿಯಾಗಿ ಮುಂದೆ ಮಾಡಿತು. ಜೊತೆಗೆ ನಾರಾಯಣಮ್ಮ ಎಂಬುವರೂ ಈಗ ಅಭ್ಯರ್ಥಿ. ಬಹಳ ಮುಖ್ಯವಾಗಿ ನಂಜಪ್ಪನವರ ಎದಿರು ರಾಮೇಗೌಡನೆಂಬ ಗುಂಜಪ್ಪನೇ ಪ್ರಬಲ ಎದುರಾಳಿ.

ನಲ್ಲೂರು ಪ್ರಸಾದ್‌ರ ಕ್ಯಾಂಪಿನ ರಾಮೇಗೌಡ ಕಳೆದ ಬಾರಿ ಪಾರ್ಶ್ವನಾಥ್‌ರೆದುರು ಸ್ಪರ್ಧಿಸಿ ಸೋತಿದ್ದ. ಹಾಗಾಗಿ ಈ ಬಾರಿ ಗೆಲ್ಲುತ್ತೇನೆಂಬ ನಂಬಿಕೆ ಆತನಿಗೆ.

ಪುಂಡಲಿಕ ಹಾಲಂಬಿ, ಹರಿಕೃಷ್ಣ ಪುನರೂರು, ರಕ್ಷಣಾ ವೇದಿಕೆಯ ನಾರಾಯಣ ಗೌಡ, ಕೋಡಿಹೊಸಳ್ಳಿ ರಾಮಣ್ಣ ಮುಂತಾದವರ ಬೆಂಬಲ ಇದೆಯೆಂಬ ಧೈರ್ಯ ಆತನಿಗೆ. ಈ ಬೆಂಬಲದ ಹಿಂದೆ ಬಹುತೇಕ ಜಾತಿ ವಾಸನೆಯಿದೆ.

ಆದರೆ ನಂಜಪ್ಪನವರಿಗೆ ದಿಢೀರನೆ ಯಾವ್ಯಾವುದೋ ಮೂಲೆಗಳಿಂದ ಬೆಂಬಲ ಸಿಗತೊಡಗಿದೆ. ಉದಾಹರಣೆಗೆ ರವೀಂದ್ರಕಾಂತ್ ಎಂಬ ಬ್ಯಾಂಕ್ ಆಫೀಸರ್ ಒಬ್ಬರ ಕೈಲೇ ಐನೂರಕ್ಕೂ ಹೆಚ್ಚು ಓಟುಗಳಿವೆ. ಇವರಿಗೆ ರಾಮೇಗೌಡನ ತಲೆ ಕಂಡರಾಗುವುದಿಲ್ಲ, ಹಾಗಾಗಿ ಅವರ ಬೆಂಬಲ ನಂಜಪ್ಪನವರಿಗೆ ಸಿಗುತ್ತಿದೆ. ಜೊತೆಗೆ ಮಾಜಿ ಕಸಾಪ ಅಧ್ಯಕ್ಷ ಜಿ. ನಾರಾಯಣರ ಮಗ ಗೋಪಾಲಕೃಷ್ಣರಿಗೆ ಬೆಂಗಳೂರು ಕಸಾಪ ಸದಸ್ಯರ ಜೊತೆ ಒಡನಾಟವಿದ್ದು ಅವರೂ ನಂಜಪ್ಪನವರ ಜೊತೆ ಸೇರಿದ್ದಾರೆ.

ಮಜಾ ಏನೆಂದರೆ ರಕ್ಷಣಾ ವೇದಿಕೆಯ ಒಕ್ಕಲಿಗ ನಾಯಕರು ರಾಜ್ಯ ಮಟ್ಟದಲ್ಲಿ ಒಕ್ಕಲಿಗ ನಲ್ಲೂರು ಪ್ರಸಾದ್‌ರನ್ನು ಬೆಂಗಳೂರಿನಲ್ಲಿ ರಾಮೇಗೌಡರನ್ನು ಬೆಂಬಲಿಸಬೇಕೆಂದು ಲಾಬಿ ಮಾಡುತ್ತಿದ್ದರೂ ಕೂಡ ಬೆಂಗಳೂರು ಮಟ್ಟಿಗೆ ಅದು ಈಡೇರುತ್ತಿಲ್ಲ, ಯಾಕೆಂದರೆ ಅದೇ ರಕ್ಷಣಾ ವೇದಿಕೆಯ ರಾಮಲಿಂಗ ಶೆಟ್ಟಿ ಮತ್ತಿತರರು ನಂಜಪ್ಪನವರ ಪರ ನಿಂತಿದ್ದಾರೆ. ಇದಿಷ್ಟೇ ಅಲ್ಲದೇ ವಿಧಾನಸಭಾ ಕ್ಷೇತ್ರವಾರು ಇರುವ ಕಸಾಪ ಘಟಕಗಳ ಅಧ್ಯಕ್ಷರುಗಳ ಪೈಕಿ ಬಸವನಗುಡಿಯ ಸಾವಿತ್ರಿ ವಿಜಯೇಂದ್ರ,


ನಂಜಪ್ಪ

ಚಾಮರಾಜಪೇಟೆಯ ನಟರಾಜ್, ಗಾಂಧಿನಗರದ ವೆ. ಶ್ರೀನಿವಾಸ್, ಬನ್ನಿಪೇಟೆಯ ಪಿನಾಕಪಾಣಿ, ಜಯನಗರದ ಹರಿದಾಸ್, ಉತ್ತರಹಳ್ಳಿಯ ಸಾಯಿರಾಂ ಪ್ರಸಾದ್, ರಾಜಾಜಿನಗರದ ರಾಜ್, ಚಿಕ್ಕಪೇಟೆಯ ನಾಗರಾಜ್, ಭಾರತಿನಗರದ ಕನ್ನಡ ಸೋಮು ಮುಂತಾದವರೆಲ್ಲಾ ನಮಗೆ 'ಗುಂಜಪ್ಪ ಬೇಡ-ನಂಜಪ್ಪ ಇರಲಿ' ಎನ್ನುತ್ತಿದ್ದಾರೆ. ಕಸಾಪ ವಲಯದಲ್ಲಿ ಸಕ್ರಿಯವಾಗಿರುವ ಪಾರ್ಶ್ವನಾಥ್, ಸಮೀಉಲ್ಲಾ, ತಿಮ್ಮೇಶರ ಬೆಂಬಲ ನಂಜಪ್ಪನವರಿಗೆ ಸಿಕ್ಕಿದೆ. ರಾಮೇಗೌಡ ಪರ ಜಯಮಹಲ್ ಶಾಖೆಯ ಹಂಸ ಎಂಬುವರೊಬ್ಬರದ್ದೇ ಬೆಂಬಲ ಖಾತ್ರಿ ಎಂಬಂತಿದೆ.

ಈ ರಾಮೇಗೌಡ ಮೊದಲು ರಾಜ್ ಅಭಿಮಾನಿ ಸಂಘ ಎಂದೆಲ್ಲಾ ಓಡಾಡಿಕೊಂಡಿದ್ದಾತ. ಆಮೇಲೆ ಪಿಇಎಸ್ ಸಂಸ್ಥೆಯ ತೆಲುಗ ದೊರೆಸ್ವಾಮಿ ನಾಯ್ಡು ಬೆನ್ನಿಗೆ ನಿಂತು 'ಕನ್ನಡೋದ್ಧಾರ' ಮಾಡಲು ಪಾಪ ಹಗಲು ರಾತ್ರಿ ಕಷ್ಟಪಟ್ಟಿದ್ದಾರೆ! ರಾಮೇಗೌಡರಿಗೆ ತಾನು ಈಗಾಗಲೇ ಗೆದ್ದೇ ಬಿಟ್ಟಿರುವೆನೆಂತಲೂ ಪ್ರತಿಸ್ಪರ್ಧಿಗಳು ಠೇವಣಿಗೂ ಉಳಿಯುವುದಿಲ್ಲವೆಂಬ ಭ್ರಮೆ ಆವರಿಸಿಕೊಂಡಿದೆ. ಭಾಷೆ-ಸಾಹಿತ್ಯದ ಸೇವೆಗೆ ನಿಲ್ಲುವೆ ಎನ್ನುವವರಿಗೆ ಸ್ವಲ್ಪ ಸಹನೆ, ಗಾಂಭೀರ್ಯವಿದ್ದರೆ ಉತ್ತಮ. ನಂಜಪ್ಪನವರಲ್ಲಿ ಅದಿದೆ ಎಂಬುದೇ ಬಹುತೇಕರ ಅನಿಸಿಕೆ. ಮುಂದೇನಾಗುವುದೋ ನೋಡಬೇಕು. ■




ಗಣಿ ಹಗರಣ
ಸಂತೋಷ್ ಹೆಗ್ಡೆ ಸ್ಪೀಡ್‌ಗೆ ಗಣಿಧಣಿಗಳ ಬ್ರೇಕ್!

ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಬೆಚ್ಚಿ ಬಿದ್ದಿದ್ದಾರೆ. ಕೇವಲ ರಾಜ್ಯ ರಾಜಕಾರಣದಲ್ಲಿ, ಸರ್ಕಾರದ ಆಡಳಿತದಲ್ಲಿ ಕೈ ಯಾಡಿಸುತ್ತಿರುವ ಬಳ್ಳಾರಿ ಗಣಿ ಧಣಿಗಳ ಕಬಂಧ ಬಾಹು ತಮ್ಮವರೆಗೂ ಚಾಚಲಿದೆ ಎಂದು ಪ್ರಾಯಶಃ ಅವರು ನಿರೀಕ್ಷಿಸಿರಲಿಲ್ಲವೇನೋ? ಆದರೆ ಅದು ಈಗ ಅವರ ಅನುಭವಕ್ಕೆ ಬರುತ್ತಿದೆ. ತಮ್ಮ ಅಧಿಕಾರದ ಬುಡಕ್ಕೆ ಕೊಡಲಿ ಹಾಕುವ ಕೆಲಸಕ್ಕೆ ಕೈಯಿಟ್ಟಿರುವ ಗಣಿಧಣಿಗಳ ಅಟ್ಟಹಾಸವನ್ನು ಹೇಗೆ ಮಟ್ಟ ಹಾಕುವುದೆಂದು ಗೊತ್ತಾಗದೆ ಅಸಹಾಯಕರಂತೆ ತಲೆಮೇಲೆ ಕೈ ಹೊತ್ತು ಕುಳಿತಿದ್ದಾರೆ. ಈಗ ಒಂದು ಸಾರಿ ಹೆಗ್ಡೆಯವರನ್ನು ಮಾತನಾಡಿಸಿದರೆ ಅವರನ್ನಾವರಿಸಿರುವ ಹತಾಶೆ ಗೊತ್ತಾಗುತ್ತದೆ.

ಈ ಹಗರಣದ ತನಿಖೆ ನಡೆಸಲು ಆಗಿನ ಮುಖ್ಯಮಂತ್ರಿ ಕುಮಾರಸ್ವಾಮಿ ನ್ಯಾಯಮೂರ್ತಿ ಯು.ಎಲ್. ಭಟ್ ನೇತೃತ್ವದಲ್ಲಿ ಆಯೋಗವೊಂದನ್ನು ರಚಿಸಿದ್ದರು. ಈ ಆಯೋಗಕ್ಕೆ ಸರಿಯಾದ ದಾಖಲೆಗಳೇ ದೊರೆಯದಂತೆ ನೋಡಿಕೊಂಡಿದ್ದ ಗಣಿಧಣಿಗಳು, ಯು.ಎಲ್. ಭಟ್ ತನಿಖೆ ಕೈಬಿಟ್ಟು, ರಾಜೀನಾಮೆ ನೀಡುವಂತೆ ಮಾಡಿದ್ದರು. ನಂತರ ತನಿಖೆಯ ಜವಾಬ್ದಾರಿ ಲೋಕಾಯುಕ್ತರ ಹೆಗಲಿಗೇರಿತು. ರಾಜ್ಯದ ಜನತೆಯ ಕುತೂಹಲ ಕೆರಳಿಸಿದ್ದ ಈ ಹಗರಣದ ತನಿಖೆಯನ್ನು ಆದಷ್ಟು ಪ್ರಾಮಾಣಿಕವಾಗಿ ನಡೆಸಿ, ಸರ್ಕಾರಕ್ಕಾಗುತ್ತಿರುವ ನಷ್ಟದ ಬಗ್ಗೆ ಸರಿಯಾದ ಮಾಹಿತಿ ನೀಡಿ, ತಪ್ಪಿತಸ್ಥರ ಪಟ್ಟಿಯನ್ನು ಒಪ್ಪಿಸಬೇಕೆಂದು ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಮತ್ತು ಅವರ ತಂಡ ಹಗಲಿರುಳು ಶ್ರಮಿಸುತ್ತಿರುವುದೇನೋ ನಿಜ. ಆದರೆ ಅದಕ್ಕೆ ಗಣಿಧಣಿಗಳು ಅವಕಾಶ ಕೊಡಬೇಕಲ್ಲ?


ಮೂರು ಬಾರಿ ವರ್ಗಾವಣೆ

ಸದ್ದಿಲ್ಲದೆ ಲೋಕಾಯುಕ್ತರು ಮಾಹಿತಿ ಸಂಗ್ರಹಿಸುತ್ತಿರುವುದನ್ನು ಅರಿತ ಧಣಿಗಳು ಅಧಿಕಾರಿಗಳನ್ನು ಛೂ ಬಿಟ್ಟರು. ಮಾಹಿತಿ ನೀಡಲು ವಿಳಂಬವಾಗುವಂತೆ ಮಾಡಿ, ಲೋಕಾಯುಕ್ತರ ಸಹನೆ ಪರೀಕ್ಷಿಸಿದರು. ಆದರೂ ಪಟ್ಟುಬಿಡದೆ ಲೋಕಾಯುಕ್ತರು ಅಧಿಕಾರಿಗಳ ಬೆನ್ನು ಹತ್ತಿದರು. ಆದರೆ, ಈ ಗಣಿರೆಡ್ಡಿಗಳ ದರ್ಬಾರು ಹೇಗಿದೆಯೆಂದರೆ ಮಾಹಿತಿ ನೀಡುವ ಅಧಿಕಾರಿಗಳನ್ನೇ ಎತ್ತಂಗಡಿ ಮಾಡಿಸಿಬಿಟ್ಟರು!




ಜನಾರ್ದನಾ ರೆಡ್ಡಿ

ಗಣಿ ಅವ್ಯವಹಾರಗಳ ತನಿಖೆಗಾಗಿ ಲೋಕಾಯುಕ್ತರು ಅರಣ್ಯ ಸಂರಕ್ಷಣಾಧಿಕಾರಿ ಡಾ. ಯು.ವಿ.ಸಿಂಗ್ ನೇತೃತ್ವದಲ್ಲಿ ರಾಜ್ಯ ಮಟ್ಟದ ಸಮಿತಿಯೊಂದನ್ನು ರಚಿಸಿದ್ದಾರೆ. ಈ ಸಮಿತಿ ನೀಡುವ ವರದಿಯನ್ನಾಧರಿಸಿ ಮುಂದಿನ ತನಿಖೆ ನಡೆಸಲು ಅವರು ನಿರ್ಧರಿಸಿದ್ದರು. ಹಗರಣದಲ್ಲಿನ ರಾಜಕಾರಣಿಗಳ, ಅಧಿಕಾರಿಗಳ ಪಾತ್ರದ ಕುರಿತು ಲೋಕಾಯುಕ್ತರೇ ತನಿಖೆ ನಡೆಸಿ, ಮಾಹಿತಿ ಸಂಗ್ರಹಿಸಿದ್ದರು. ಎಲ್ಲ ಮಾಹಿತಿಯನ್ನು ಸಮಗ್ರವಾಗಿ ಸಂಗ್ರಹಿಸಿ ವರದಿ ನೀಡುವುದು ಲೋಕಾಯುಕ್ತರ ಉದ್ದೇಶವಾಗಿತ್ತು.



ಕರುಣಾಕರ ರೆಡ್ಡಿ

ಆದರೆ ಗಣಿಧಣಿಗಳು ಸುಮ್ಮನಿದ್ದಾರೆಯೇ? ಈ ತನಿಖೆಯಲ್ಲಿ ಮುಖ್ಯಪಾತ್ರ ವಹಿಸುತ್ತಿರುವ ಡಾ.ಯು.ವಿ.ಸಿಂಗ್ ಅವರನ್ನು ಮೂರು ಬಾರಿ ವರ್ಗಾವಣೆ ಮಾಡಿಸಿ, ತನಿಖೆಗೆ ಅಡ್ಡಿಪಡಿಸಿದರು. ವಿಶೇಷವೆಂದರೆ ರಾಜ್ಯಪಾಲರ ಆಡಳಿತಾವಧಿಯಲ್ಲಿಯೂ ಸಿಂಗ್ ಎರಡು ಬಾರಿ ವರ್ಗಾವಣೆಗೊಂಡಿದ್ದರು! ಆದರೆ ಆದೇಶ ಜಾರಿಗೆ ಬರಲು ಲೋಕಾಯುಕ್ತರು ಬಿಟ್ಟಿರಲಿಲ್ಲ. ಗಣಿಧಣಿಗಳ ತಾಳಕ್ಕೆ ತಕ್ಕಂತೆ ಕುಣಿಯುವ ಮುಖ್ಯಮಂತ್ರಿ ಯಡ್ಡಿ ಸಿಂಗ್‌ರನ್ನು ಮೊನ್ನೆ ಮೊನ್ನೆ ಉ.ಕ.ದ ಜಿಲ್ಲಾ ಪಂಚಾಯಿತಿಗೆ ಎತ್ತಿಹಾಕಿದ್ದಾರೆ. ಕೊನೆಗೆ ಸಂತೋಷ್ ಹೆಗ್ಡೆ ನೇರವಾಗಿ ಸರ್ಕಾರಕ್ಕೆ ಪತ್ರ ಬರೆದ ನಂತರ ವರ್ಗಾವಣೆ ರದ್ದು ಪಡಿಸಬೇಕಾಯಿತು.



ಶ್ರೀರಾಮುಲು

ಗಣಿದುಡ್ಡಿನಿಂದ ಬುದ್ಧಿಭ್ರಮಣೆಗೊಳಗಾದ ಸಿ.ಎಸ್.ವೇದಾಂತ!

ಇನ್ನೇನು ಅಡ್ಡಿ ಇಲ್ಲ, ತನಿಖೆ ಮುಂದುವರೆಯುತ್ತದೆ ಎಂದು ಸಂತೋಷ್ ಹೆಗ್ಡೆ ನಿಟ್ಟುಸಿರು ಬಿಡುತ್ತಿದ್ದಂತೆಯೇ ಮತ್ತೊಂದು ಆಘಾತ ಕಾದಿತ್ತು. ತನಿಖೆ ನಡೆಸಲು ರಾಜ್ಯದ ವಿವಿಧ ಜಿಲ್ಲೆಗಳಿಗೆ ಅದರಲ್ಲೂ ಮುಖ್ಯವಾಗಿ ಬಳ್ಳಾರಿಗೆ ಭೇಟಿ ನೀಡಬೇಕಾಗಿದ್ದ ಸಿಂಗ್‌ಗೆ ಬೆಂಗಳೂರು ಬಿಟ್ಟು ತೆರಳದಂತೆ ಆದೇಶ ಬಂದಿತ್ತು. ಏಕೆಂದರೆ, ಸಿಂಗ್ ಬಳ್ಳಾರಿಗೆ ಬಂದರೆ ರೆಡ್ಡಿಗಳ ಬಣ್ಣ ಕಳಚುವುದು ಖಚಿತ. ಬಳ್ಳಾರಿಯಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿರುವುದನ್ನು ಸಿಂಗ್ ಈಗಾಗಲೇ ಪತ್ತೆಹಚ್ಚಿದ್ದರು. ಈ ಬಗ್ಗೆ ಪ್ರಾಥಮಿಕ ವರದಿಯನ್ನೂ ಲೋಕಾಯುಕ್ತಕ್ಕೆ ನೀಡಿದ್ದರು. ಪರಿಣಾಮ ಲೋಕಾಯುಕ್ತ ಕಚೇರಿಯಿಂದ ಅಕ್ರಮವನ್ನು ತಡೆಯುವಂತೆ ಆದೇಶ ಹೊರ ಬಿದ್ದಿದ್ದೂ ಅಲ್ಲದೇ, ಮೇ.31 ರಂದು ಬಳ್ಳಾರಿಯ ಅರಣ್ಯ ಇಲಾಖೆಯ ಅಧಿಕಾರಿಗಳು ಅನಿವಾರ್ಯವಾಗಿ ದಾಳಿ ನಡೆಸಿ ನೂರಾರು ಟನ್ ಅದಿರನ್ನು ಮುಟ್ಟುಗೋಲು ಹಾಕಿಕೊಂಡಿದ್ದರು. ಸುಮಾರು 110 ಕೋಟಿ ರೂ. ಮೌಲ್ಯದ ಯಂತ್ರೋಪಕರಣಗಳನ್ನು ವಶಕ್ಕೆ ತೆಗೆದುಕೊಂಡಿದ್ದರು. ಇದೆಲ್ಲಾ ಆಗಿದ್ದು ಸಿಂಗ್ ಅವರಿಂದಲೇ ಎಂಬುದು ರೆಡ್ಡಿಗಳಿಗೆ ಚೆನ್ನಾಗಿ ಗೊತ್ತು. ಆ ಕಾರಣಕ್ಕಾಗಿಯೇ ಈಗ ಸಿಂಗ್ ಅವರಿಗೆ ಸಮಗ್ರವಾಗಿ ತನಿಖೆ ನಡೆಸಲು ಅವಕಾಶ ಮಾಡಿಕೊಟ್ಟರೆ ತಮ್ಮ ಹುಳುಕೆಲ್ಲಾ ಬಯಲಿಗೆ ಬರುತ್ತದೆ ಎಂದು ಹೆದರಿದ ಗಣಿಧಣಿಗಳು ಕೂಡಲೇ ಅವರನ್ನು ಬೆಂಗಳೂರು ಬಿಟ್ಟು ಬಳ್ಳಾರಿಗೆ ಬರದಂತೆ ಕಟ್ಟಿ ಹಾಕಿದ್ದಾರೆ.

ಸದ್ದಿಲ್ಲದೆ ಲೋಕಾಯುಕ್ತರು ಮಾಹಿತಿ ಸಂಗ್ರಹಿಸುತ್ತಿರುವುದನ್ನು ಅರಿತ ಧಣಿಗಳು ಅಧಿಕಾರಿಗಳನ್ನು ಛೂ ಬಿಟ್ಟರು. ಮಾಹಿತಿ ನೀಡಲು ವಿಳಂಬವಾಗುವಂತೆ ಮಾಡಿ, ಲೋಕಾಯುಕ್ತರ ಸಹನೆ ಪರೀಕ್ಷಿಸಿದರು. ಆದರೂ ಪಟ್ಟುಬಿಡದೆ ಲೋಕಾಯುಕ್ತರು ಅಧಿಕಾರಿಗಳ ಬೆನ್ನು ಹತ್ತಿದರು. ಆದರೆ, ಈ ಗಣಿರೆಡ್ಡಿಗಳ ದರ್ಬಾರು ಹೇಗಿದೆಯೆಂದರೆ ಮಾಹಿತಿ ನೀಡುವ ಅಧಿಕಾರಿಗಳನ್ನೇ ಎತ್ತಂಗಡಿ ಮಾಡಿಸಿಬಿಟ್ಟರು!


ಸದ್ಯ ಕಾರ್ಯಕ್ಕೆ ಬಾರದ ಕೆರೆ ಅಭಿವೃದ್ಧಿ ಪ್ರಾಧಿಕಾರದಲ್ಲಿರುವ ಸಿಂಗ್‌ಗೆ ಬೆಂಗಳೂರು ಬಿಟ್ಟು ಕದಲದಂತೆ ಆದೇಶ ನೀಡಿದವರು ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯೂ ಆಗಿರುವ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸಿ.ಎಸ್. ವೇದಾಂತ್. ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಸೆಕ್ಷನ್ 15ರ ಅಡಿಯಲ್ಲಿ ಕಾನೂನುಬದ್ಧವಾಗಿಯೇ ಸಿಂಗ್ ಅವರ ಸೇವೆಯನ್ನು ಲೋಕಾಯುಕ್ತ ಪಡೆಯುತ್ತಿತ್ತು, ಇದಕ್ಕೆ ಅಡ್ಡಿ ಪಡಿಸುವ ಅಧಿಕಾರ ಯಾರಿಗೂ ಇಲ್ಲ, ಆದರೂ ತಲೆಕೆಟ್ಟಂತೆ ವರ್ತಿಸುತ್ತಾ ಸುದ್ದಿ ಮಾಡುತ್ತಲೇ ಇರುವ ವೇದಾಂತ್ ಗಣಿಧಣಿಗಳ ಅಣತಿಯಂತೆ ಸಿಂಗ್‌ರನ್ನು ಕಟ್ಟಿಹಾಕಿದ್ದಾರೆ. ಅದು ಹೇಗೋ ವಿಷಯ ತಿಳಿದ ಲೋಕಾಯುಕ್ತರು ಮತ್ತೆ ಸರ್ಕಾರಕ್ಕೆ ಪತ್ರ ಬರೆದು, ತನಿಖೆ ನಡೆಸಲು ಸಿಂಗ್‌ಗೆ ಅವಕಾಶ ಮಾಡಿಕೊಡುವಂತೆ ಗೋಗರೆದಿದ್ದಾರೆ!

ಬಳ್ಳಾರಿ ರೆಡ್ಡಿಗಳ ಕಾಟದಿಂದ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಸಂಪೂರ್ಣವಾಗಿ ಹತಾಶರಾಗಿದ್ದಂತೂ ಸತ್ಯ. ತಮ್ಮ ಮುಂದೆ ಗಣಿಹಗರಣಕ್ಕೆ ಸಂಬಂಧಿಸಿದ ಲೋಡುಗಟ್ಟಲೆ ಕಡತಗಳು ಬಿದ್ದಿದ್ದರೂ ಏನೂ ಮಾಡಲಾರದ ಸ್ಥಿತಿಯಲ್ಲಿ ಅವರು ಗೋಣುಹಾಕಿ ಕೂತಿದ್ದಾರೆ.

ಹಿಟ್‌ಲಿಸ್ಟ್‌ನಲ್ಲಿ ಹತ್ತು ರಾಜಕಾರಣಿಗಳು!

ಈ ಗಣಿ ಹಗರಣದಲ್ಲಿ ಕೇವಲ ಬಳ್ಳಾರಿ ಗಣಿಧಣಿಗಳು ಮಾತ್ರ ಭಾಗಿಯಾಗಿಲ್ಲ, ರಾಜ್ಯದ ಪ್ರಮುಖ ಹತ್ತು ಮಂದಿ ರಾಜಕಾರಣಿಗಳೂ ಭಾಗಿಯಾಗಿರುವುದು ತನಿಖೆಯಿಂದ ಲೋಕಾಯುಕ್ತರಿಗೆ ಗೊತ್ತಾಗಿದೆ. ಅವರೆಲ್ಲರಿಗೂ ಈಗಾಗಲೇ ನೋಟೀಸ್ ನೀಡಿರುವ ಲೋಕಾಯುಕ್ತರು ವಿಚಾರಣೆ ಮುಂದುವರೆಸಿದ್ದಾರೆ. ಗಣಿಗೆ ಪರವಾನಗಿ ನೀಡಲು ಶಿಫಾರಸು ಮಾಡಿದ ರಾಜಕಾರಣಿಗಳನ್ನೂ ವಿಚಾರಣೆಗೊಳಪಡಿಸಲಾಗಿದೆ.

ಮುಖ್ಯಮಂತ್ರಿ ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿ ಧರ್ಮಸಿಂಗ್, ಕಾಂಗ್ರೆಸ್ ಮುಖಂಡ ಡಿ.ಕೆ. ಶಿವಕುಮಾರ್, ಯೋಜನಾ ಆಯೋಗದ ಉಪಾಧ್ಯಕ್ಷ ಡಿ.ಎಚ್. ಶಂಕರಮೂರ್ತಿ, ವಿಧಾನಸಭಾಧ್ಯಕ್ಷ ಜಗದೀಶ್ ಶೆಟ್ಟರ್ ಮತ್ತಿತರರಿಗೆ ಈಗಾಗಲೇ ಲೋಕಾಯುಕ್ತರ ನೋಟೀಸ್ ಜಾರಿಯಾಗಿದೆ. ಅಕ್ರಮ ಗಣಿಗಾರಿಕೆಯಲ್ಲಿ ರಾಜಕಾರಣಿಗಳ ಪಾತ್ರದ ಕುರಿತು ಸಮಗ್ರ ತನಿಖೆ ನಡೆಸಿರುವ ಲೋಕಾಯುಕ್ತರು ಪ್ರಮುಖವಾಗಿರುವ ಹತ್ತು ರಾಜಕಾಣಿಗಳ ಶಾರ್ಟ್‌ಲಿಸ್ಟ್ ಸಿದ್ಧಪಡಿಸಿದ್ದಾರೆ. ತನಿಖಾ ವರದಿ ಬಹಿರಂಗವಾಗುತ್ತಿದ್ದಂತೆಯೇ ಈ ರಾಜಕಾರಣಿಗಳ ಮುಖವಾಡ ಕಳಚಿ ಬೀಳಲಿದೆ. ಕೆಲ ಹಿರಿಯ ಅಧಿಕಾರಿಗಳೂ ಕೂಡ ಈ ಲೂಟಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಎಂಬುದನ್ನು ಲೋಕಾಯುಕ್ತರು ಪತ್ತೆ ಹಚ್ಚಿದ್ದು, ಈಗ ಅವರ ಬೆನ್ನು ಬಿದ್ದಿದ್ದಾರೆ.



ತನಿಖೆ ತೀವ್ರಗೊಳ್ಳುತ್ತಿದ್ದಂತೆಯೇ ಬೆದರಿದ ಅಧಿಕಾರಿಗಳು, ರಾಜಕಾರಣಿಗಳು ಲೋಕಾಯುಕ್ತರ ಮೇಲೆ ಒತ್ತಡ ಹೇರಲಾರಂಭಿಸಿದ್ದು, ತನಿಖೆಯನ್ನು ಮೊಟಕುಗೊಳಿಸಲು ಹರ ಸಾಹಸ ನಡೆಸುತ್ತಿದ್ದಾರೆ.

ಬಿಜೆಪಿಗೆ ಬಿಗಿಯುತ್ತಿರುವ ರೆಡ್ಡಿ ಉರುಳು!

ಇತ್ತ ಲೋಕಾಯುಕ್ತ ತನಿಖೆ, ಬಲಗೊಳ್ಳುತ್ತಿರುವ ಗಣಿಗಾರಿಕೆಯನ್ನು ರಾಷ್ಟ್ರೀಕರಣಗೊಳಿಸಬೇಕೆಂಬ ಕೂಗು, ಎತ್ತ ಸಚಿವರೂ ಆಗಿರುವ ಮುಖ್ಯಮಂತ್ರಿ ಯಡ್ಡಿ ಉಪಾಯದಿಂದ ತಮ್ಮ ಮೇಲೆ ಹೇರಿರುವ ತೆರಿಗೆ ಇದೆಲ್ಲ ರೆಡ್ಡಿಪಡೆಯನ್ನು ಬೆಚ್ಚಿ ಬೀಳಿಸಿದೆ.

ಹೀಗಾಗಿ ತಮ್ಮ ಬಿಸಿನೆಸ್‌ಗಿಂತ ಹೆಚ್ಚಾಗಿ ರಾಜಕಾರಣದ ಮೇಲೆ ಅವರು ಗಮನ ನೀಡುತ್ತಿದ್ದಾರೆ. ತಲೆಕೆಟ್ಟವರಂತೆ ವರ್ತಿಸುತ್ತಿರುವ ಬಿಜೆಪಿ ನಾಯಕರನ್ನು ಮೂಲೆಗುಂಪು ಮಾಡಿ ತಾವು ಅಧಿಕಾರ ಹಿಡಿದರೆ ಮಾತ್ರ ಈ ಎಲ್ಲ ಸಮಸ್ಯೆಗಳನ್ನು ಬಗೆಹರಿಸಿ, ಹಗಲು ಲೂಟಿಯನ್ನು ಮುಂದುವರೆಸಬಹುದು ಎಂಬ ತೀರ್ಮಾನಕ್ಕೆ ರೆಡ್ಡಿ ಸಹೋದರರು ಬಂದಿದ್ದು ರಾಜ್ಯ ಬಿಜೆಪಿ ಮೇಲಿನ ಹಿಡಿತವನ್ನು ಬಿಗಿಗೊಳಿಸುತ್ತಿದ್ದಾರೆ.

ಈಗಾಗಲೇ ಶಾಸಕರನ್ನು ಖರೀದಿಸಿ, ಪಕ್ಷದ ಮೇಲೆ ಮತ್ತಷ್ಟು ಹಿಡಿತ ಸಾಧಿಸಿರುವ ಗಣಿಧಣಿಗಳ ಕಣ್ಣು ಈಗ ಉಪಮುಖ್ಯಮಂತ್ರಿ ಹುದ್ದೆಯ ಮೇಲಿದೆ. ತಮ್ಮ ಮಾತು ಕೇಳುವವರನ್ನೇ ರಾಜ್ಯ ಬಿಜೆಪಿ ಅಧ್ಯಕ್ಷರನ್ನಾಗಿ ಮಾಡಿ ಯಡ್ಡಿಯ ಮೇಲೆ ಮತ್ತಷ್ಟು ಹಿಡಿತ ಸಾಧಿಸಲು ಅವರು ಹೊರಟಿದ್ದಾರೆ. ಈಗಾಗಲೇ 'ಎಲ್ಲೂ ಸಲ್ಲದವನಾಗಿರುವ' ಸದಾನಂಗ ಗೌಡರಿಗೆ ಒಂದು ಗತಿ ಕಾಣಿಸಲು ರೆಡ್ಡಿ ತಂತ್ರ ಸಿದ್ಧಗೊಳ್ಳುತ್ತಿದೆ. ಒಟ್ಟಾರೆಯಾಗಿ ಪಕ್ಷದ ಮೇಲಿನ ತಮ್ಮ ಹಿಡಿತ ಹೆಚ್ಚಿದಂತೆ ಅಧಿಕಾರ ಹೆಚ್ಚಲಿದೆ ಹಾಗೂ ಅಧಿಕಾರ ಹೆಚ್ಚಿದಂತೆ ತಮ್ಮ ಬಿಸಿನೆಸ್ ಹೆಚ್ಚಲಿದೆ ಎಂಬ ಸತ್ಯ ರೆಡ್ಡಿಪಡೆಗೆ ಮನದಟ್ಟಾಗಿದೆ.

ಸರ್ಕಾರಕ್ಕೆ ಮೂರು ಕಾಸು!

ರಾಜ್ಯದಲ್ಲಿ ಗಣಿಧಣಿಗಳು ಕೋಟಿ ಕೋಟಿ ಗಳಿಸುತ್ತಾ ಲೂಟಿ ಮಾಡುತ್ತಿದ್ದರೆ, ಅದಕ್ಕೆ ಅವಕಾಶ ಕೊಟ್ಟಿರುವ ರಾಜ್ಯ ಸರ್ಕಾರಕ್ಕೆ ಬರುತ್ತಿರುವ ಆದಾಯ ಮಾತ್ರ ಮೂರುಕಾಸಿನದು. ವಿಧಾನಸಭೆಯಲ್ಲಿಯೇ ಮುಖ್ಯಮಂತ್ರಿ ಯಡ್ಡಿ ಈ ನಾಚಿಕೆಗೇಡಿನ ವಿಷಯವನ್ನು ಹೆಮ್ಮೆಯಿಂದ ಪ್ರಕಟಿಸಿದ್ದಾರೆ. ಗುರುವಾರ ಸದನದಲ್ಲಿ ಹೇಳಿಕೆಯೊಂದನ್ನು ನೀಡಿರುವ ಯಡ್ಡಿ 2007-08 ನೇ ಸಾಲಿನಲ್ಲಿ ಗಣಿಗಾರಿಕೆಯಿಂದ ಸರ್ಕಾರಕ್ಕೆ ಬಂದಿರುವ ಆದಾಯ 47,552.22 ಲಕ್ಷ ರೂ. ಎಂದು ಹೇಳಿದ್ದಾರೆ. (ಆದರೆ ಇದರಿಂದ ಗಣಿಧಣಿಗಳಿಗೆಷ್ಟು ಲಾಭ ಆಯಿತು ಎಂದು ಕೆದಕುವ ಗೊಡವೆಗೆ ಹೋಗಿಲ್ಲ). ಆದರೂ ಸರ್ಕಾರ ಗಣಿಗಾರಿಕೆಯನ್ನು ರಾಷ್ಟ್ರೀಯಕರಣಗೊಳಿಸಬೇಕೆಂದು ಒತ್ತಾಯಿಸುವುದಿಲ್ಲ ಎಂದು ಪ್ರಕಟಿಸಿದ್ದಾರೆ.

2005ರಲ್ಲಿ ಗಣಿಗಾರಿಕೆಯಿಂದ ನಮಗೆ ಬಂದಿರುವ ಆದಾಯ 3500 ಕೋಟಿಗೂ ಹೆಚ್ಚು ಎಂದು ಗಣಿಧಣಿಗಳು ಪ್ರಕಟಿಸಿದ್ದರು. 2007ರಲ್ಲಿ ಈ ಆದಾಯ ಖಂಡಿತವಾಗಿಯೂ ಹೆಚ್ಚಾಗಿದೆ. ಆದರೆ ಸರ್ಕಾರಕ್ಕೆ ಬಂದ ಆದಾಯ ಮಾತ್ರ ಜಾಸ್ತಿಯಾಗಿಲ್ಲ. ಗಣಿಧಣಿಗಳಿಗೂ ಇದರ ಹತ್ತುಪಟ್ಟು ಲಾಭವಾಗಿದೆ. ಹಾಗಾಗಿಯೇ ಅವರು ರಾಜಕಾರಣಿಗಳನ್ನೇ ಕೊಳ್ಳುವಷ್ಟು ಬಲಿಷ್ಠರಾಗಿರುವುದು.

ಈಗ ರಾಜ್ಯವನ್ನಾಳುತ್ತಿರುವವರು ಯಡ್ಡಿಯಲ್ಲ, ಬಳ್ಳಾರಿಯ ರೆಡ್ಡಿಗಳು ಅನ್ನೋದಕ್ಕೆ ಇದೊಂದು ನಿದರ್ಶನವಷ್ಟೆ. ಹೆಸರಿಗೊಂದು ಬಿಜೆಪಿ ಸರ್ಕಾರ, ಅದಕ್ಕೊಬ್ಬ ಕೋಲುಬಸವನಂತೆ ತಲೆಯಲ್ಲಾಡಿಸುವ ಡುಂಬ ಮುಖ್ಯಮಂತ್ರಿಯನ್ನಿಟ್ಟುಕೊಂಡು ಆಟವಾಡುತ್ತಿರುವ ಈ ಹಗಲು ದರೋಡೆಕೋರರಿಗೆ ಈ ರಾಜ್ಯದ ಯಾವ ರಾಜಕಾರಣಿಯೂ, ಅಧಿಕಾರಿಯೂ ಪಾಠಕಲಿಸುವುದಿಲ್ಲ, ಜನರೇ ಈ ದಗಾಕೋರರಿಗೆ ಪಾಠ ಕಲಿಸಬೇಕಷ್ಟೆ.

■ ವರದಿಗಾರ

ಸರ್ಕಾರಿ ಭೂಮಿ ಮಾರಿಕೊಂಡರೆ ಹೆಣ ಹೂಳುವುದಕ್ಕಾದರೂ...!




ಗುಲ್ಬರ್ಗಾ ಕನ್ನಡಿಗರೂ ರಿಯಲ್ ಎಸ್ಟೇಟ್ ಸರ್ಕಾರವೂ

ಅಳಿದುಳಿದ ಸರ್ಕಾರಿ ಭೂಮಿಯನ್ನು ಹರಾಜಿಗಿಟ್ಟರೆ ಸರ್ಕಾರಿ ಬೊಕ್ಕಸಕ್ಕೆ ಮೂರು ಸಾವಿರ ಕೋಟಿ ರೂಪಾಯಿ ಆದಾಯ ಬರುತ್ತದೆ ಎನ್ನುವ ಮುಖ್ಯಮಂತ್ರಿ ಲೆಕ್ಕಾಚಾರವೇ ಶುದ್ಧ ವಂಚನೆ. ಈಗಿರುವ ಬೆಂಗಳೂರು ಸುತ್ತಮುತ್ತಲ ಒಟ್ಟು ಸರ್ಕಾರಿ ಭೂಮಿಯ ರಿಯಲ್ ಎಸ್ಟೇಟ್ ಮೌಲ್ಯ ಕಮ್ಮಿಯೆಂದರೂ 60 ಸಹಸ್ರ ಕೋಟಿ!


ಈ ಪೈಕಿ ಮೂರು ಸಾವಿರ ಕೋಟಿ ಮೊತ್ತದ ಭೂಮಿಯನ್ನಷ್ಟೇ ಮಾರಲು ಹೊರಟರೆ ಅದೂ ಮತ್ತೊಂದು ಹಗಲುದರೋಡೆಯಾಗುತ್ತದೆ. ಹರಾಜು ಕೂಗುವವನು ಜಿಲ್ಲಾಧಿಕಾರಿ. ಬಿಡ್ ಮಾಡುವವರೆಲ್ಲ ಆಂಧ್ರದ ಬಿಲ್ಡರುಗಳು. ಅವರೊಳಗೇ ಒಪ್ಪಂದವಾಗಿ ನೂರು ಕೋಟಿಯ ಆಸ್ತಿಯನ್ನು ಇಪ್ಪತ್ತೈದು ಕೋಟಿಗೆ ಕೂಗಿಬಿಟ್ಟರೆ ಮಾರಲೇಬೇಕು. ಹಿಂದೆ ಬೆಂಗಳೂರು ನಗರ ಜಿಲ್ಲಾಧಿಕಾರಿಯಾಗಿದ್ದ ಸಾಧಿಕ್ ಬಿಲ್ಡರುಗಳ ಜೊತೆ ಕೈಜೋಡಿಸಿ ಕಮ್ಮಿ ರೇಟಿಗೆ ಹರಾಜು ಹಾಕಿ ನೂರು ಕೋಟಿ ದೋಚಿದ. ಈತನಿಗೆ ಕ್ಲರ್ಕ್ ಆಗಿದ್ದ ನಯಾಜ್ ಇವತ್ತು ಹತ್ತು ಕೋಟಿಯ ಆಸ್ತಿವಂತ. ಯಾವುದೇ ಸರ್ಕಾರ ತನ್ನ ಪಾಲಿನ ಭೂಮಿಯನ್ನು ಬಡಬಗ್ಗರಿಗೆ ಮನೆ ಕಟ್ಟಲು ಮತ್ತು ಸಾಮಾಜಿಕ ಬಳಕೆಗಷ್ಟೇ ಮೀಸಲಿಡಬೇಕೆ ಹೊರತು ಬಿಲ್ಡರುಗಳಿಗೆ ಮಾರಿಕೊಂಡರೆ ಅದೊಂದು ಸರ್ಕಾರ ಅನ್ನಿಸಿಕೊಳ್ಳುವುದಿಲ್ಲ. ಗುಲ್ಬರ್ಗಾ, ರಾಯಚೂರು, ಬಿಜಾಪುರಗಳಿಂದ ಕೂಲಿಗೆಂದು ಬೆಂಗ ಳೂರಿಗೆ ಬಂದ ಬಡಕನ್ನಡಿಗರು ಇವತ್ತಿಗೂ ಬೀದಿಯಲ್ಲಿ ಮಲಗುತ್ತಿದ್ದಾರೆ. ಗುಲ್ಬರ್ಗಾ ಕನ್ನಡಿಗರ ಮೇಲೆ ಬಿಡಿಎ ಮತ್ತು ಬಿಹಾರಿಗಳು ಸೇರಿಯೇ ದೌರ್ಜನ್ಯವೆಸಗುತ್ತಿದ್ದರೆ ಅಂಥ ನಿರ್ಗತಿಕರಿಗೆ ಮನೆ ಕಟ್ಟಿಸಿಕೊಡುವುದನ್ನು ಬಿಟ್ಟು ಭೂಕಂಟಕರಿಗೆ ಸರ್ಕಾರಿ ಭೂಮಿ ಮಾರಲು ಹೊರಟ ಬಿಜೆಪಿಯದ್ದು ಸರ್ಕಾರವೇ ಅಥವಾ ರಿಯಲ್ ಎಸ್ಟೇಟ್ ಏಜೆನ್ಸಿಯೇ?

ಬೆಂಗಳೂರು ಸುತ್ತಮುತ್ತ ಎಲ್ಲೆಲ್ಲಿ ಸರ್ಕಾರಿ ಭೂಮಿಯಿದೆಯೋ ಅದನ್ನೆಲ್ಲ ಮಾರುಕಟ್ಟೆ ರೇಟಿಗೆ ಮಾರಿ ಆ ಮೂಲಕ ಮೂರು ಸಾವಿರ ಕೋಟಿ ರೂಪಾಯಿಗಳನ್ನು ಸಂಗ್ರಹಿಸಿ ಆ ದುಡ್ಡಲ್ಲಿ ಬೆಂಗಳೂರಿನ ಸಂಚಾರ ಸುಧಾರಣೆ ಮಾಡುತ್ತಾರಂತೆ. ಅದಕ್ಕೆಂದೇ 'ಕರ್ನಾಟಕ ಸರ್ಕಾರಿ ಜಮೀನುಗಳ ನಿಗಮ'ವೊಂದನ್ನು ಸ್ಥಾಪಿಸುತ್ತಾರಂತೆ. ಈ ಹಿಂದೆ ಕೆರೆಗಳನ್ನು ಉಳಿಸಲೆಂದು ಸ್ಥಾಪಿಸಿದ ಕೆರೆ ಅಭಿವೃದ್ಧಿ ಪ್ರಾಧಿಕಾರವೇ ಕಾಲಕ್ರಮೇಣ ಕೆರೆಗಳ ವಿನಾಶಕ್ಕೆ ಕಾರಣವಾದಂತೆ ಅಳಿದುಳಿದ ಸರ್ಕಾರಿ ಭೂಮಿಯನ್ನೂ ಮಾರಿಹಾಕುವುದಕ್ಕೆಂದು ಈಗೊಂದು ಭೂಕಂಟಕ ನಿಗಮ!



ದೇಶವೊಂದು ತನ್ನ ಭೂಮಿಯನ್ನೇ ಮಾರಿಕೊಂಡು ಮಾಡುವ ಅಭಿವೃದ್ಧಿಯಾದರೂ ಏನು?

ಇದ್ದಮನೆ ಮಾರಿಕೊಂಡು ಕಡುಬು ತಿನ್ನುವುದಕ್ಕೂ, ಹೊಲ ಮಾರಿ ಬೀಜ ಕೊಳ್ಳುವುದಕ್ಕೂ ಮತ್ತು ಸರ್ಕಾರವೊಂದು ಅಳಿದುಳಿದ ಭೂಮಿಯನ್ನೇ ಮಾರಿಹಾಕಿ ಊರಿನ ಉದ್ಧಾರಕ್ಕೆ ಹೊರಡುವುದಕ್ಕೂ ಯಾವುದೇ ವ್ಯತ್ಯಾಸವಿಲ್ಲ.



ಯಡಿಯೂರಪ್ಪ ಸರ್ಕಾರದ ದುರ್ಬುದ್ಧಿ ಮತ್ತು ಆತ್ಮವಂಚನೆ ಹೇಗಿದೆ ಯೆಂದರೆ; ಬೆಂಗಳೂರು ಸುತ್ತಮುತ್ತ ಎಲ್ಲೆಲ್ಲಿ ಸರ್ಕಾರಿ ಭೂಮಿಯಿದೆಯೋ ಅದನ್ನೆಲ್ಲ ಮಾರುಕಟ್ಟೆ ರೇಟಿಗೆ ಮಾರಿ ಆ ಮೂಲಕ ಮೂರು ಸಾವಿರ ಕೋಟಿ ರೂಪಾಯಿಗಳನ್ನು ಸಂಗ್ರಹಿಸಿ ಆ ದುಡ್ಡಲ್ಲಿ ಬೆಂಗಳೂರಿನ ಸಂಚಾರ ಸುಧಾರಣೆ ಮಾಡುತ್ತಾರಂತೆ. ಅದಕ್ಕೆಂದೇ 'ಕರ್ನಾಟಕ ಸರ್ಕಾರಿ ಜಮೀನುಗಳ ನಿಗಮ'ವೊಂದನ್ನು ಸ್ಥಾಪಿಸುತ್ತಾರಂತೆ. ಈ ಹಿಂದೆ ಕೆರೆಗಳನ್ನು ಉಳಿಸಲೆಂದು ಸ್ಥಾಪಿಸಿದ ಕೆರೆ ಅಭಿವೃದ್ಧಿ ಪ್ರಾಧಿಕಾರವೇ ಕಾಲಕ್ರಮೇಣ ಕೆರೆಗಳ ವಿನಾಶಕ್ಕೆ ಕಾರಣವಾದಂತೆ ಅಳಿದುಳಿದ ಸರ್ಕಾರಿ ಭೂಮಿಯನ್ನೂ ಮಾರಿಹಾಕುವುದಕ್ಕೆಂದು ಈಗೊಂದು ಭೂಕಂಟಕ ನಿಗಮ!

ಇದೆಂಥ ಮನೆಹಾಳು ಯೋಜನೆ ಯೆಂಬುದಕ್ಕೆ ಸಣ್ಣ ಉದಾಹರಣೆಯಾಗಿ ಇಲ್ಲಿಗೆ ಹತ್ತು ವರ್ಷಗಳ ಹಿಂದೆ ಮೆಯೋಹಾಲ್ ಎದುರಿನ ಪ್ರಿಮ್ ರೋಸ್ ರಸ್ತೆಯಲ್ಲಿದ್ದ ಹದಿನೆಂಟೆಕರೆಯ ಪಾಲಿಕೆ ಕಸದ ಲಾರಿಗಳ ಗ್ಯಾರೇಜನ್ನೇ ತೆಗೆದುಕೊಳ್ಳೋಣ. ಅಲ್ಲೀಗ ಗರುಡಾಮಾಲ್ ತಲೆ ಎತ್ತಿದೆ. ಇದರಿಂದ ಪಾಲಿಕೆಗಾದ ಆದಾಯ ಕೇವಲ ಆರು ಕೋಟಿ ರೂಪಾಯಿ ಮಾತ್ರ. ಆದರೆ ಕೈತಪ್ಪಿದ ಭೂಮಿಯ ಬೆಲೆ ನೂರೈವತ್ತು ಕೋಟಿಗೂ ಅಧಿಕ. ಅದನ್ನು ಅರವತ್ತು ವರ್ಷಗಳ ಗುತ್ತಿಗೆಗೆಂದು ಖದೀಮ ಉದಯ್ ಗರುಡಾಚಾರ್‌ಗೆ ವಹಿಸಿಕೊಟ್ಟ ಮೇಲೆ ಪ್ರತಿನಿತ್ಯ ಅಲ್ಲಿ ನಿಲ್ಲುತ್ತಿದ್ದ ನೂರಕ್ಕೂ ಹೆಚ್ಚು ಕಸದ ಲಾರಿಗಳಿಗೆ ರಸ್ತೆಯ ಹೊರತಾಗಿ ಬೇರೆ ಗತಿಯಿರಲಿಲ್ಲ.

ಇವತ್ತು ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ರೆಸಿಡೆನ್ಸಿ ರಸ್ತೆ, ಸೆಂಟ್ ಮಾರ್ಕ್ಸ್ ರಸ್ತೆ, ರಿಚಮಂಡ್ ರಸ್ತೆ, ಸೂಲೆ ಸರ್ಕಲ್‌ಗಳಲ್ಲಿ ಕಾರುಗಳನ್ನು ಪಾರ್ಕ್ ಮಾಡುವುದು ಹಾಳಾಗಲಿ ಒಂದು ಫರ್ಲಾಂಗ್ ದಾಟಬೇಕೆಂದರೇನೇ ಅರ್ಧ ಗಂಟೆ ಕಾಯಬೇಕು!

ಇದ್ದಬದ್ದ ಪಾಲಿಕೆ ಭೂಮಿಯನ್ನು ಬಿಲ್ಡರುಗಳಿಗೆ

ಸಾವಯವ ಕೃಷಿ ಎಂಬ ಮೋಸ



ಮುಖ್ಯಮಂತ್ರಿ ಯಡಿಯೂರಪ್ಪ ಬಜೆಟ್ ಮಂಡನೆಯಲ್ಲಿ ರಾಜ್ಯದ ರೈತರಿಗೆ ಸಾಲುಸಾಲು ಭರವಸೆಗಳನ್ನು ನೀಡಿದ್ದಾರೆ. ಉಚಿತ ವಿದ್ಯುತ್, ಕರ್ನಾಟಕ ಕೃಷಿ ಮಿಷನ್ ಸ್ಥಾಪನೆ- ಶೇ. 3ರ ದರದಲ್ಲಿ ಸಾಲಸೌಲಭ್ಯ ಹೀಗೆ ಮುಂದುವರೆಯುತ್ತದೆ. ಈ ಭರವಸೆಗಳಲ್ಲಿ ಸಾವಯವ ಕೃಷಿ ಪ್ರೋತ್ಸಾಹಿಸುವ ನಿಟ್ಟನಲ್ಲಿ ಒಂದು ಸಾವಿರ ಗ್ರಾಮಗಳಲ್ಲಿ ಸಾವಯವ ಕೃಷಿ ಅವಲಂಬಿಸಿರುವ ಪ್ರತೀ ಕುಟುಂಬಕ್ಕೂ ಸಾವಯವ ಗೊಬ್ಬರ ಗುಂಡಿಗಳನ್ನು ನಿರ್ಮಿಸಲು ತಲಾ 2 ಸಾವಿರ ಸಹಾಯಧನ ನೀಡುವುದೂ ಒಂದು ಹಾಗೆಯೆ ಸಾವಯವ ಕೃಷಿ ಆಂದೋಲನ ಯೋಜನೆಗೆ 100 ಕೋಟಿ ಹಂಚಿಕೆ ಮಾಡಲಾಗುವುದು ಎಂದು ಪ್ರಕಟಿಸಲಾಗಿದೆ.

ಮೇಲ್ನೋಟಕ್ಕೆ ರಾಜ್ಯವ್ಯಾಪಿ ದೃಷ್ಟಿಯಿಂದ ಇದು ಸಣ್ಣ ಮೊತ್ತ ಅನಿಸಿದರೂ ಸಾವಯವ ಕೃಷಿ ಎಂಬ ಪಟ್ಟಭದ್ರ ಲಾಬಿಯ ಹಿತಾಸಕ್ತಿಯ ದೃಷ್ಟಿಯಿಂದ ನೋಡಿದಾಗ ಇದೊಂದು ದಗಾಕೋರ ಯೋಜನೆಯೇ ಸರಿ.

ಕಳೆದ ಒಂದೂವರೆ ದಶಕದಿಂದ ಈ ಸಾವಯವ ಕೃಷಿ ಎಂಬ ಹಣೆಪಟ್ಟಿಯಡಿಯಲ್ಲಿ ಸರ್ಕಾರ ನೀಡಿದ ಪ್ರೋತ್ಸಾಹಧನವೆಷ್ಟು, ಅದನ್ನು ಮುಂಡಾಮೋಚಿದವರ ವಿಷವರ್ತುಲವೆಂಥದ್ದು ಎಂಬುದನ್ನು ಅವಲೋಕಿಸಿದರೆ ಇದರ ಅಧ್ವಾನಗಳು ಬಯಲಾಗುತ್ತದೆ. ಬಹಳ ಮುಖ್ಯವಾಗಿ ಇಂತಹ ಯೋಜನೆಗಳನ್ನು ಜಾರಿಗೊಳಿಸುವ ವಿಷಯದಲ್ಲಿ ಅಧಿಕಾರಿಗಳ ಧೋರಣೆ ಎಂತಹದ್ದು ಎಂಬುದನ್ನು ತಿಳಿಯಬೇಕಿದೆ.

ರಾಜ್ಯಾದ್ಯಂತ ಸಾವಯವ ಹೆಸರಿನಲ್ಲಿ ತರಹೇವಾರಿ ಪ್ರಯೋಗಗಳು ನಡೆಯುತ್ತಿವೆ. ಈ ಸಾವಯವ ಕೃಷಿಯ ಪರಿಚಯ ಮಾಡಿಕೊಳ್ಳಲು ಮುಂದಾಗುವ ಪ್ರತಿಯೊಬ್ಬ ರೈತನಿಗೂ ಇದು ದುಬಾರಿ ಅನಿಸುತ್ತದೆ: ಸಾಮಾನ್ಯ ಮಧ್ಯಮ ವರ್ಗದ ರೈತರಂತೂ ಈ ಸಾವಯವ ಕೃಷಿಯತ್ತ ತಿರುಗಿಯೂ ನೋಡುವಂತಿಲ್ಲ, ಅದೇನಿದ್ದರೂ ಸರ್ಕಾರಿ ಸಬ್ಸಿಡಿಗಳ ರುಚಿ ನೋಡಿರುವ ಸ್ಥಿತಿವಂತ ರೈತರಿಗಷ್ಟೇ.

ರಾಜ್ಯದಲ್ಲಿ 2004 ರಲ್ಲಿ ಕೃಷಿ ಇಲಾಖೆಯ ವತಿಯಿಂದ ಜಿಲ್ಲೆಗೊಂದರಂತೆ ಸಾವಯವ ಗ್ರಾಮಗಳನ್ನು ಗುರುತಿಸಿ, ಅಭಿವೃದ್ಧಿಪಡಿಸುವ ಯೋಜನೆಗೆ ಚಾಲನೆ ನೀಡಲಾಯಿತು. ಇಂಥ ಸ್ಕೀಮುಗಳನ್ನು ನುಂಗಿ ನೀರು ಕುಡಿಯಲು ಸದಾ ಸಜ್ಜಾಗಿ ನಿಂತಿರುವ ಎನ್‌ಜಿಓಗಳೇ ಎಲ್ಲಾ ಕಡೆ ಈ ಸಾವಯವ ಗ್ರಾಮ ಯೋಜನೆ ಅನುಷ್ಠಾನದ ಜವಾಬ್ದಾರಿ ವಹಿಸಿಕೊಂಡವು.

ಈ ಯೋಜನೆಯಲ್ಲಿ ವರ್ಷಕ್ಕೆ 3 ರಿಂದ 4 ಲಕ್ಷ ಅನುದಾನದ ಜೊತೆಗೆ, ಪ್ರತೀ ತಿಂಗಳು 16 ಸಾವಿರ ಕ್ಷೇತ್ರವೆಚ್ಚವನ್ನು ಇಲಾಖೆಯ ವತಿಯಿಂದ ನೀಡಲಾಗಿದೆ. ಈ ಯೋಜನೆಯನ್ನು ಕೈಗೆತ್ತಿಕೊಂಡ ಎನ್‌ಜಿಓಗಳಲ್ಲಿ ಚಿತ್ರದುರ್ಗದ ಸ್ಪರ್ಧಾ ಎನ್‌ಜಿಓ ಹೊರತುಪಡಿಸಿದರೆ ಮಿಕ್ಕ ಎಲ್ಲಾ ಎನ್‌ಜಿಓಗಳಿಗೂ ಸಹಾಯಧನ ವೆಚ್ಚವನ್ನು ಪ್ರತೀ ವರ್ಷ ಸಂದಾಯ ಮಾಡಲಾಗಿದೆ ವಿಪರ್ಯಾಸವೆಂದರೆ, ಚಿತ್ರದುರ್ಗದ ಸ್ಪರ್ಧಾ ಮತ್ತು ಮಂಡ್ಯ ಜಿಲ್ಲೆಯ ಶ್ರೀ ಕಾಮಧೇನು ನೈಸರ್ಗಿಕ ಸಾವಯವ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ಹೊರತುಪಡಿಸಿದರೆ, ಉಳಿದೆಲ್ಲಾ ಎನ್‌ಜಿಓಗಳೂ ಸಹಾಯಧನ ವೆಚ್ಚವನ್ನು ಮಾತ್ರ ತಪ್ಪದೆ ಪಡೆದುಕೊಂಡಿವೆ.

ಸರ್ಕಾರಿ ಅಧಿಕಾರಿಗಳೊಂದಿಗೆ ಗಳಸ್ಯಕಂಠಸ್ಯ ಸಂಬಂಧವನ್ನಿರಿಸಿಕೊಂಡಿರುವ ಎನ್‌ಜಿಓಗಳು ಅಧಿಕಾರಿಗಳಿಗೆ ಕೊಡಬೇಕಾದುದನ್ನು ಕೊಟ್ಟು ಈ ಅನುದಾನವನ್ನು ಪಡೆದುಕೊಂಡಿವೆ. ಇದರಿಂದ ರೈತರಿಗೆ ವಿಶೇಷ ಲಾಭವೇನೂ ಇಲ್ಲ, ಹೆಚ್ಚೆಂದರೆ ರೈತರಿಗೊಂದು ಎರೆಹುಳು ತೊಟ್ಟಿ, ಕಾಂಪೋಸ್ಟ್ ಪಿಟ್ ಮಾಡಿ ರೈತರಿಗೆ ತರಬೇತಿ ನೀಡಿರುವುದು. ಈ ಸಾವಯವ ಪದ್ಧತಿಯ ಬಗ್ಗೆ ರೈತರು ಆರಂಭದಲ್ಲಿ ಆಸಕ್ತಿ ತೋರಿಸಿದರೂ ಆರ್ಥಿಕವಾಗಿ ಅಷ್ಟೇನೂ ಲಾಭದಾಯಕವಲ್ಲದ, ಇಳುವರಿಯ ದೃಷ್ಟಿಯಿಂದಲೂ ಉಪಯೋಗವಿಲ್ಲದ ಈ ಪದ್ಧತಿಯನ್ನು ಕೈಬಿಟ್ಟು ರಾಸಾಯನಿಕ ಕೃಷಿ ಪದ್ಧತಿಯೆಡೆಗೆ ಮರಳಿದ್ದಾರೆ. ಎನ್‌ಜಿಓ ದಾಖಲೆಗಳಲ್ಲಿ ಮಾತ್ರ ಇವಿನ್ನೂ ಸಾವಯವ ಗ್ರಾಮಗಳಾಗಿಯೇ ಉಳಿದುಕೊಂಡಿವೆ.

ಹೀಗೆ ಆರಂಭದಲ್ಲೇ ಈ ಸಾವಯವ ಗ್ರಾಮ ಯೋಜನೆ ನೆಲಕಚ್ಚಿದ್ದರೂ ನಮ್ಮ ತಥಾಕಥಿತ ಕೃಷಿ ತಜ್ಞರು, ಎನ್‌ಜಿಓಗಳು ಅಧಿಕಾರಿಗಳ ಚಿತಾವಣೆಯಿಂದಾಗಿ ಮೊದಲು ಜಿಲ್ಲೆಗೊಂದರಂತಿದ್ದ ಸಾವಯವ ಗ್ರಾಮ ಯೋಜನೆಯನ್ನು 2006-07 ರಲ್ಲಿ ತಾಲ್ಲೂಕಿಗೊಂದರಂತೆ ವಿಸ್ತರಿಸಲಾಯಿತು.

ಮೊದಲ ಯಾದಿಯಲ್ಲಿ ಫಲಾನುಭವಿಗಳಾಗಿದ್ದ ಈ ಯೋಜನೆಯ ಜಾರಿಯ ಕಾರ್ಯತಂತ್ರ ಹಾಗೂ ಅನುದಾನ ಪಡೆಯುವ ಕಲೆಯನ್ನು ಕರಗತ ಮಾಡಿಕೊಂಡಿದ್ದ ಎನ್‌ಜಿಓಗಳೇ ನಾಲ್ಕೈದು ತಾಲ್ಲೂಕುಗಳಲ್ಲಿ ಯೋಜನೆ ಅನುಷ್ಠಾನ ಜಾರಿ ಮಾಡುವ ಜವಾಬ್ದಾರಿ ತೆಗೆದುಕೊಂಡು ನುಂಗಲಿಕ್ಕೆ ಆರಂಭಿಸಿದ್ದವು. ರೈತರನ್ನು 'ಉದ್ಧಾರ' ಮಾಡಲು ಸಾವಯವ ಕೃಷಿ ಹೆಸರಿನಲ್ಲಿ ನಡೆಯುತ್ತಿರುವ ಈ ನುಂಗಾಯಣ ಅಧಿಕಾರದ ಚುಕ್ಕಾಣಿ ಹಿಡಿದವರ ಗಮನಕ್ಕೆ ಬಾರದಿರುವುದು ದುರಂತ. ಸರ್ಕಾರಿ ಅಭಿವೃದ್ಧಿ ಮಾನದಂಡಗಳ ಪ್ರಕಾರ ಇಂತಹ ಗೊತ್ತುಪಡಿಸಿದ ಯೋಜನೆಗೆ ನಿಗದಿಪಡಿಸಿದ ಮೊತ್ತ ಖರ್ಚಾದರೆ ಆ ಯೋಜನೆ ಶೇ.100ರಷ್ಟು ಅನುಷ್ಠಾನಗೊಂಡಂತೆಯೇ. ಇಲ್ಲಿ ನಡೆಯುವುದೂ ಅದೇ.

ರಾಜ್ಯದ ಒಂದು ಸಾವಿರ ಗ್ರಾಮಗಳಲ್ಲಿ 100 ಕೋಟಿ ವೆಚ್ಚದಲ್ಲಿ ಸಾವಯವ ಆಂದೋಲನ ಮಾಡಲು ಹೊರಟಿರುವ ಸರ್ಕಾರದ ಪ್ರಯತ್ನ ಕೂಡ ಈ ವಂಚನೆಯ ಮುಂದುವರಿದ ವಿಸ್ತೃತ ಭಾಗವಷ್ಟೇ. ಹಾವೇರಿ ಗೋಲಿಬಾರ್ ಪ್ರಕರಣದಿಂದ ತಮ್ಮ ಸರ್ಕಾರಕ್ಕೆ ಅಂಟಿಕೊಂಡಿರುವ ರಕ್ತದ ಕಲೆಯನ್ನು ತೊಳೆದುಕೊಳ್ಳುವ ಹಾಗೂ ರಾಜ್ಯಾದ್ಯಂತ ಸರ್ಕಾರದ ವಿರುದ್ಧ ಭುಗಿಲೇಳುತ್ತಿರುವ ಅಸಮಾಧಾನವನ್ನು ಶಮನಗೊಳಿಸುವ ಭರದಲ್ಲಿ ಯಡ್ಡಿ ಸರ್ಕಾರ ಇಂತಹ ಅನಾಹುತಕಾರಿ ಪ್ರಯೋಗಕ್ಕೆ ಮುಂದಾಗಿರುವುದು ಶೋಚನೀಯ.

ಕನಿಷ್ಠ ಈವರೆಗೆ ಈ ಯೋಜನೆಯ ಜಾರಿಯಲ್ಲಾಗಿರುವ ಸಾಧಕ ಬಾಧಕಗಳನ್ನು ಅವಲೋಕಿಸದೇ, ಅದರ ಕಾರ್ಯಸಾಧ್ಯತೆಯನ್ನು ಪರಿಶೀಲಿಸದೇ ಈ ಯೋಜನೆಯನ್ನು ವಿಸ್ತರಿಸುವುದರ ಮೂಲಕ ಯಡ್ಡಿ ನೇತೃತ್ವದ ಬಿಜೆಪಿ ಸರ್ಕಾರ ಎನ್‌ಜಿಓ ಹಾಗೂ ಕೃಷಿ ಅಧಿಕಾರಿಗಳಿಗೆ ಮೃಷ್ಟಾನ್ನ ಭೋಜನ ವ್ಯವಸ್ಥೆ ಮಾಡಿದೆ. ಈ ಯೋಜನೆಯ ನೈಜ ಫಲಾನುಭವಿಗಳ ಹೆಸರುಗಳು ಮಾತ್ರ ಎನ್‌ಜಿಓಗಳು ಹಾಗೂ ಕೃಷಿ ಅಧಿಕಾರಿಗಳ ದಾಖಲೆಗಳಲ್ಲಿ ರಾರಾಜಿಸುತ್ತವೆ. 'ರೈತನಾಯಕ' ಯಡಿಯೂರಪ್ಪನಿಗೆ ಜನತೆಯ ಮುಂದೆ ಓದಲು ಈ ದಾಖಲೆಗಳು ಸಾಕಲ್ಲವೇ? ಅದಿರಲಿ ತಾನು ರೈತಪರ...ಪರ ಎಂದು ಬಾಯಿಬಡಿದುಕೊಳ್ಳುವ ಯಡ್ಡಿಗೆ ನಾಡಿನಾದ್ಯಂತ ಸಹಸ್ರಾರು ರೈತರಿಗೆ ಸರಳವಾದ ನೈಸರ್ಗಿಕ ಕೃಷಿಯ ಪಾಠ ಹೇಳಿದ ಮತ್ತು ಅದನ್ನು ಆಚರಣೆಯಲ್ಲಿ ತರಲು ಪ್ರೇರಣೆ ನೀಡಿದ ಸುಭಾಷ್ ಪಾಳೇಕಾರ್ ಏಕೆ ನೆನಪಾಗಲಿಲ್ಲ? ■

ಆಗದೇ ಕನಿಷ್ಠ ದರಕ್ಕೆ ಮಾರಿಹಾಕಿದ ಪಾಲಿಕೆಯು ...ಲ್ಲಿ ಇವತ್ತು ತನ್ನ ವಾರ್ಡ್ ಆಫೀಸ್ ತೆರೆಯುವುದಕ್ಕೂ, ...ದಿ ಲೆಕ್ಕದ ಕೈಟಲ್ಲು, ಕಸ ಹೊತ್ತೊಯ್ಯುವ ತಳ್ಳುಗಾಡಿ ...ಗಳನ್ನು ಇಡುವುದಕ್ಕೂ ರಸ್ತೆಯನ್ನೇ ಆಕ್ರಮಿಸಬೇಕು. ...ಬೆಂಗಳೂರಿನ ಅತೀದೊಡ್ಡ ಸಮಸ್ಯೆಗಳ ಪೈಕಿ ಒಂದು ...ಲದಾದರೆ ಮತ್ತೊಂದು ಭೂಮಿ. ಅಂದರೆ ಇಕ್ಕಟ್ಟು. ...ಂದೆ ಎಲ್ಲೆಂದರಲ್ಲಿ ಸಾರ್ವಜನಿಕ ಮೂತ್ರಿಗಳಿದ್ದವು. ...ಸದ ತೊಟ್ಟಿಗಳಿಗೂ ಜಾಗವಿತ್ತು. ಇವತ್ತು ವಾಹನ ...ಗಳನ್ನು ಪಾರ್ಕ್ ಮಾಡುವುದಿರಲಿ ರಸ್ತೆಗಳಲ್ಲಿ ಓಡಾಡು ...ವುದಕ್ಕೇ ಜಾಗವಿಲ್ಲ.

ಹಿಂದಿದ್ದ ಬೆಂಗಳೂರೇನೋ ಎಕ್ಕುಟ್ಟಿ ಹೋಯಿತು. ...ನಿಷ್ಠ ಹೊರವಲಯದಲ್ಲಾದರೂ ನೆಮ್ಮದಿಯಾಗಿರಬ ...ಹುದೆಂದು ಅನೇಕ ಹಿರಿಯ ನಾಗರಿಕರು ತಮ್ಮ ಮನೆ ...ಮಾರಿಕೊಂಡು ದೂರದೂರದ ಬಡಾವಣೆಗಳಿಗೆ ವಲಸೆ ...ಹೋಗುತ್ತಿದ್ದರು.. ಈಗ ಯಡಿಯೂರಪ್ಪನವರ ಕಣ್ಣು ...ಹೊರವಲಯದ ಅಳಿದುಳಿದ ಸರ್ಕಾರಿ ಭೂಮಿಯ ...ಮೇಲೆ ಬಿದ್ದಿದೆ. ಅದನ್ನು ಮಾರಿದರೆ ದುಡ್ಡು ಬರುತ್ತದೆ ...ಜ. ಬಂದ ದುಡ್ಡಲ್ಲಿ ಅಂಡರ್‌ಪಾಸ್, ಓವರ್ ಬ್ರಿಡ್ಜ್ ...ಫ್ಲೈಓವರ್ ಇತ್ಯಾದಿ ಏನೇ ಮಾಡಿದರೂ ಸಂಚಾರ ...ಸುಧಾರಣೆಯಾಗುತ್ತಾ?

ಕೆಂಗೇರಿ, ನಾಗರಬಾವಿ ಅಥವಾ ಹೆಣ್ಣೂರು ಇತ್ಯಾದಿ ...ಬಡಾವಣೆಗಳ ಸುತ್ತ ಸರ್ಕಾರಿ ಜಮೀನಿದೆ ನಿಜ. ಅಂಥ ...ಜಮೀನನ್ನು ಹರಾಜಿಗಿಟ್ಟರೆ ಕೊಳ್ಳುವವರಾದರೂ ...ಯಾರು? ಆಂಧ್ರದ ಬಿಲ್ಡರುಗಳು, ಮಂತ್ರಿ, ಪೂರ್ವಂಕರ, ...ಎಂಬೆಸ್ಸೀ, ಬ್ರಿಗೇಡ್, ಪ್ರೆಸ್ಟೀಜ್, ರಹೇಜಾ, ರಂಕಾ, ...ಸುಲೇಖಾ ಥರದ ಮಾರ್ವಾಡಿ ಡೆವಲಪರುಗಳೇ ತಾನೆ?

ಕೊಂಡ ಜಮೀನಿನಲ್ಲಿ ಹತ್ತೋ ಇಪ್ಪತ್ತೋ ಅಂತಸ್ತಿನ ...ಅಪಾರ್ಟ್‌ಮೆಂಟ್ ಬರುತ್ತದೆ. ಹೆಚ್ಚೆಂದರೆ ಶಾಪಿಂಗ್ ...ಮಾಲ್, ಕಾಂಪ್ಲೆಕ್ಸ್ ಅಥವಾ ಐಷಾರಾಮಿ ಫ್ಲಾಟುಗಳನ್ನು ...ಕಟ್ಟಿಸಬಹುದು. ಒಂದೊಂದು ಫ್ಲಾಟಿಗೂ ಒಂದೊಂದು ...ಕಾರೆಂದು ಲೆಕ್ಕವಿಟ್ಟರೆ ಆಜೂಬಾಜಿನ ರಸ್ತೆಗಳೆಲ್ಲ ...ಕಾರುಗಳಿಂದಲೇ ತುಂಬಿ ಹೋಗುತ್ತದೆ. ಇದರಿಂದಾಗಿ ...ಅಕ್ಕಪಕ್ಕದ ವಸತಿ ಪ್ರದೇಶದ ಜನ ಅನಗತ್ಯವಾಗಿ ಇಕ್ಕಟ್ಟಿಗೆ ...ಸಿಲುಕುತ್ತಾರೆ. ಇಡೀ ಬಡಾವಣೆಯ ಜನರ ಬಳಕೆಯ ನೀರೆಲ್ಲ ಇಂಥ ಅಪಾರ್ಟ್ ಒಂದಕ್ಕೇ ಸರಿಹೋಗುತ್ತದೆ. ವಿನಾಕಾರಣದ ಗಿಜಿಗಿಜಿ, ಟ್ರಾಫಿಕ್ ಜಾಮ್, ವಾಯು ಮಾಲಿನ್ಯ, ನೀರಿನ ಬರಕ್ಕೆ ನೆಮ್ಮದಿವಂತ ಜನ ತಲೆಕೊಡ ಬೇಕು.

ಈಗಿರುವ ಕಬ್ಬನ್‌ಪಾರ್ಕ್ ಮತ್ತು ಲಾಲ್‌ಭಾಗ್‌ನಂಥ ಎರಡೂ ಉದ್ಯಾನವನಗಳನ್ನು ನಿರ್ಮಿಸಿದ್ದು ಬ್ರಿಟಿಷರು. ಆ ಕಾಲದ ಬೆಂಗಳೂರನ್ನು ಲೆಕ್ಕ ಹಾಕಿಯೇ ಪರಿಸರದ ಸಮತೋಲನಕ್ಕೆಂದು ನಿರ್ಮಿಸಲ್ಪಟ್ಟ ಶ್ವಾಸಕೋಶಗಳಿವು. ಇವತ್ತು ಬೆಂಗಳೂರು ಅದರ ನೂರು ಪಟ್ಟು ಬೆಳೆದಿದೆ. ಆ ಕಾಲದ ಒಂದೇ ಒಂದು ಗ್ಲಾಸ್ ಕಾಲೇಜ್ ಆಟದ ಮೈದಾನ, ನ್ಯಾಷನಲ್ ಕಾಲೇಜ್ ಗ್ರೌಂಡಿನಂಥದ್ದನ್ನು ಜನ ಮತ್ತಾವತ್ತೂ ಕಾಣಲಿಲ್ಲ.


ಎ.ಟಿ.ರಾಮಸ್ವಾಮಿ

ಬ್ರಿಟಿಷರೇ ಸ್ಥಾಪಿಸಿದ ವಿಕ್ಟೋರಿಯಾ ಆಸ್ಪತ್ರೆ, ಬೋರಿಂಗ್ ಆಸ್ಪತ್ರೆಯಂಥ ಇನ್ನೊಂದು ಆಸ್ಪತ್ರೆಯನ್ನು ಸ್ವಾತಂತ್ರ್ಯಾನಂತರದ ಸರ್ಕಾರಗಳು ಸ್ಥಾಪಿಸಲಿಲ್ಲ. ಪ್ರತಿ ಪ್ರೌಢಶಾಲೆಗೂ, ಸರ್ಕಾರಿ ಪ್ರಾಥಮಿಕ ಶಾಲೆಗೂ ಇರಬೇಕಿದ್ದ ಆಟದ ಮೈದಾನಗಳಿಲ್ಲ. ಪ್ರತಿ ಬಡಾವಣೆಗೂ ಸಣ್ಣಪುಟ್ಟ ಪಾರ್ಕುಗಳಿವೆ ನಿಜ. ಅದ್ಯಾವುದೂ ಬೆಳಗ್ಗಿನ ವಾಕಿಂಗ್‌ಗೂ ಯೋಗ್ಯವಾಗಿಲ್ಲ.

ಸರ್ಕಾರವೊಂದು ತನ್ನ ಒಡೆತನದ ಭೂಮಿಯನ್ನು ಭವಿಷ್ಯದ ದೃಷ್ಟಿಯಿಂದ ಕಾಯ್ದಿರಿಸಬೇಕೇ ಹೊರತು ಮಾರಿಕೊಂಡರೆ ಅದಕ್ಕಿಂತ ಆತ್ಮಹತ್ಯೆ ಮತ್ತೊಂದಿಲ್ಲ.

ಈಗಿರುವ ಅಷ್ಟೂ ಸರ್ಕಾರಿ ಭೂಮಿಯನ್ನೇನಾದರೂ ಸರ್ಕಾರ ಮಾರಿಕೊಂಡರೆ ಮುಂದೊಮ್ಮೆ ಬಸ್ ನಿಲ್ದಾಣ, ತರಕಾರಿ ಮಾರುಕಟ್ಟೆ, ಆಟದ ಮೈದಾನ, ಪಾರ್ಕು, ಅಂಚೆ ಕಚೇರಿ, ಪೊಲೀಸ್ ಠಾಣೆ, ಸರ್ಕಾರಿ ಕಚೇರಿ, ಪಾಲಿಕೆ ವಾರ್ಡ್ ಕಚೇರಿ, ಸಾರ್ವಜನಿಕ ಮೂತ್ರಿ, ಪಶು ಚಿಕಿತ್ಸಾಲಯಗಳಿಗೆಂದು ಎಲ್ಲಿಂದ ಜಮೀನು ಹೊಂಚಬೇಕು? ಇವತ್ತಿನ ಬೆಂಗಳೂರಿನ ಲೆಕ್ಕಕ್ಕೆ ಕಮ್ಮಿಯೆಂದರೂ ಇಪ್ಪತ್ತು ಕಬ್ಬನ್ ಪಾರ್ಕ್‌ಗಳು ಬೇಕು. ವಿಕ್ಟೋರಿಯಾ, ಬೋರಿಂಗ್‌ನಂಥ ಇಪ್ಪತ್ತು ಆಸ್ಪತ್ರೆಗಳಿದ್ದರೂ ಕಮ್ಮಿಯೇ. ಕನಿಷ್ಠ ಪೊಲೀಸ್ ಠಾಣೆಗಳಿಗಾದರೂ ಜಾಗ ಬೇಡವೆ?

ಈಗಿರುವ ಸರ್ಕಾರಿ ಭೂಮಿಯನ್ನೆಲ್ಲ ಮಾರಿ ಹಾಕಿ ಅದರಿಂದ ಬಂದ ಮೂರು ಸಾವಿರ ಕೋಟಿಯಿಂದ ಎಷ್ಟೇ ರಸ್ತೆ, ಫ್ಲೈಓವರ್ ನಿರ್ಮಿಸಿದರೂ ಪಾರ್ಕಿಂಗ್‌ಗೆ ಜಾಗ ಇಲ್ಲವೆಂದರೆ ರಸ್ತೆ ನಿರ್ಮಿಸಿ ಏನು ಫಲ?

ಎಂಥ ಬೆಂಗಳೂರನ್ನು ನಿರ್ಮಿಸಲು ಯಡ್ಡಿ ಹೊರಟಿದ್ದಾರೆ?

ಯಾವ ಸರ್ಕಾರಿ ಜಮೀನನ್ನು ಯಡ್ಡಿ ಮಾರಲು ಹೊರಟಿದ್ದಾರೋ ಅದ್ಯಾವುದೂ ಎ.ಟಿ. ರಾಮಸ್ವಾಮಿ ಸಮಿತಿ ಗುರುತಿಸಿದ ಜಮೀನಲ್ಲ. ಏಕೆಂದರೆ ಎ.ಟಿ. ರಾಮಸ್ವಾಮಿ ವರದಿಯ ಪ್ರಕಾರ ಯಲಹಂಕದ ಬಿಜೆಪಿ ಶಾಸಕ ವಿಶ್ವನಾಥ ರೆಡ್ಡಿ ಒಬ್ಬನೇ ನೂರಿಪ್ಪತ್ತು ಎಕರೆ ಸರ್ಕಾರಿ ಭೂಮಿ ನುಂಗಿದ್ದಾನೆ. ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮತ್ತು ಆತನ ಮಗ ಜಗ್ಗ ಸೇರಿ ಕಬಳಿಸಿದ ಭೂಮಿಯೇ ನೂರೈವತ್ತು ಎಕರೆಗೂ ಅಧಿಕ. ಕೆ.ಆರ್. ಪುರದ ಬಿಜೆಪಿ ಶಾಸಕ ನಂದೀಶ್ ರೆಡ್ಡಿ ಅರವತ್ತು ಎಕರೆಗೂ ಮೀರಿ ಸರ್ಕಾರಿ ಜಮೀನು ದೋಚಿದ್ದಾನೆ. ರಾಜರಾಜೇಶ್ವರಿ ನಗರದ ಬಿಜೆಪಿ ಶಾಸಕ ಶ್ರೀನಿವಾಸ್, ಆತನ ತಮ್ಮ ಬೆಂಗಳೂರು ದಕ್ಷಿಣದ ಎಮ್ಮೆಲ್ಲೇ ಕೃಷ್ಣಪ್ಪ, ದಾಸರಹಳ್ಳಿಯ ಬಿಜೆಪಿ ಶಾಸಕ ಮುನಿರಾಜು, ಇವರೆಲ್ಲರ ಪಿತಾಮಹ ಆರ್. ಅಶೋಕ್ ಕಬಳಿಸಿದ ಸರ್ಕಾರಿ ಭೂಮಿಯ ಅಷ್ಟೂ ವಿವರಗಳನ್ನು ಎ.ಟಿ. ರಾಮಸ್ವಾಮಿ ತಮ್ಮ ವರದಿಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಯಡ್ಡಿಗೆ ನಿಜಕ್ಕೂ ಕಾಳಜಿಯಿದ್ದಿದ್ದರೆ ಎ.ಟಿ. ರಾಮಸ್ವಾಮಿ ಕಮಿಟಿಯ ವರದಿ ಪ್ರಕಾರ ಕಬಳಿಸಿದ ಸರ್ಕಾರಿ ಭೂಮಿಯನ್ನು ಮೊದಲು ವಶಪಡಿಸಿಕೊಳ್ಳಲಿ. ಅದೇ ನಾಲ್ಕೂವರೆ ಸಾವಿರ ಎಕರೆಯಷ್ಟಾಗುತ್ತದೆ. ಆದರೆ ಯಡಿಯೂರಪ್ಪ ಪದಾರೂಢರಾಗುವುದು ಇನ್ನಷ್ಟು ಕಬಳಿಕೆಯಾಗದೇ, ಸರ್ಕಾರದ ವಶದಲ್ಲಿರುವ ಕೆರೆಭೂಮಿ, ಗೋಮಾಳ, ಪಾರ್ಕ್, ಆಟದ ಮೈದಾನಗಳ ಭೂಮಿಯನ್ನು, ಇದರಿಂದ ಬೆಂಗಳೂರು ಮತ್ತೊಂದು ಮುಂಬಯಿಯಾದೀತೇ ಹೊರತು ನೆಮ್ಮದಿವಂತರಾಗಿ ಬದುಕುವಂತಿಲ್ಲ.

ತಮಾಷೆಗೆಂದೇ ಲೆಕ್ಕ ಹಾಕಿದರೂ ಬೆಂಗಳೂರಿನ ಅಷ್ಟೂ ಜನ ಮುಂದೊಮ್ಮೆ ಸಾಯಲೇಬೇಕಲ್ಲ, ಈಗಿರುವ ಹನ್ನೆರಡು ಸ್ಮಶಾನಗಳೆಲ್ಲಾ ಈಗಲೇ ಹೌಸ್‌ಫುಲ್ ಆಗಿಬಿಟ್ಟಿವೆ. ಬೆಂಗಳೂರಿನ ಈಗಿನ ಜನಸಂಖ್ಯೆಗೆ ಹೋಲಿಸಿದರೆ ಹತ್ತೆಕರೆ ವಿಸ್ತಾರದ ಕನಿಷ್ಠ ಐವತ್ತು ಸ್ಮಶಾನಗಳು ಬೇಕೇಬೇಕು. ಸ್ವಲ್ಪದೊಂದು ಧರಣಿ ಕೂರುವುದಕ್ಕೂ ಬೆಂಗಳೂರಿನಲ್ಲಿ ಜಾಗವಿಲ್ಲ, ಉಚ್ಚೆ ಹೊಯ್ಯುವುದಕ್ಕೋ, ಸೈಕಲ್ ನಿಲ್ಲಿಸುವುದಕ್ಕೋ, ವಾಯು ದನಗಳು ಮಲಗುವುದಕ್ಕೋ, ಫುಟ್‌ಪಾತಿನಲ್ಲಿ ನಡೆದಾಡುವುದಕ್ಕೋ ಅಥವಾ ಮುಂದೊಮ್ಮೆ ಯಡ್ಡಿಯ ಮೊಮ್ಮಕ್ಕಳು ಆಡುವುದಕ್ಕಾದರೂ ಜಾಗ ಬೇಡವೆಂದೇ ಇಟ್ಟುಕೊಳ್ಳೋಣ.

ಆದರೆ ರಾಜಕೀಯ ಪಕ್ಷಗಳಿಗೆ ಸಾವಿರಾರು ಜನರನ್ನು ಸೇರಿಸಿ ಭಾಷಣ ಬಿಗಿಯುವುದಕ್ಕಾದರೂ ನ್ಯಾಷನಲ್ ಕಾಲೇಜಿನಂಥ ಮತ್ತೊಂದು ಮೈದಾನ ಬೇಡವೆ? ಈಗಿರುವ ಪ್ಯಾಲೇಸ್ ಗ್ರೌಂಡ್ ಅಥವಾ ಮಲ್ಲೇಶ್ವರಂ ಗ್ರೌಂಡುಗಳಿಗೆ ಜನರನ್ನ ಕರೆ ತರಬೇಕೆಂದರೆ ರಸ್ತೆಗಳೇ ಇಲ್ಲ. ಸಭೆಗೆ ಬಂದ ಲಾರಿಗಳಿಗೂ ಜಾಗವಿಲ್ಲ. ಸಭೆ ಮುಗಿಸಿ ಹೋಗುವುದೂ ಸಾಧ್ಯವಿಲ್ಲ. ಇರುವ ಸರ್ಕಾರಿ ಜಮೀನನ್ನೆಲ್ಲ ಮಾರಿಕೊಂಡರೆ ಮುಂದೊಮ್ಮೆ ಯಡ್ಡಿ ಮಗನೋ ಮೊಮ್ಮಗನೋ ಸಭೆ ನಡೆಸುವುದೆಲ್ಲಿ?

ಯಡಿಯೂರಪ್ಪ ನೂರೈವತ್ತು ವರ್ಷ ಬಾಳಲಿ. ಆದರೆ ಕೊನೆಗೂ ಅವರ ಹೆಣ ಹೂಳುವುದಕ್ಕಾದರೂ ಸ್ಮಶಾನಕ್ಕೆ ಜಾಗ ಬೇಕಲ್ಲವೆ? ಬೆಂಗಳೂರಿಗೆ ನೆಮ್ಮದಿ ತರುತ್ತೇನೆಂಬ ಬಿಜೆಪಿಯ ಪ್ರಣಾಳಿಕೆಯೆಂದರೆ ಇದೇನಾ?

■ ರಾ. ಸೋಮನಾಥ್


...ಇದೆಂಥ ವಿಪರ್ಯಾಸ ನೋಡಿ!

2004 ರಲ್ಲಿ ಆರಂಭವಾದ ಸಾವಯವ ಗ್ರಾಮದ ...ಅನುಷ್ಠಾನದ ಜವಾಬ್ದಾರಿಯನ್ನು ಚಿತ್ರದುರ್ಗ ಜಿಲ್ಲೆಯಲ್ಲಿ ...ಸ್ಪಂದನ ಎಂಬ ಎನ್‌ಜಿಓ ವಹಿಸಿಕೊಂಡಿತ್ತು. ಹಿರಿಯೂರು ...ತಾಲ್ಲೂಕಿನಲ್ಲಿ ತನ್ನ ಚಟುವಟಿಕೆ ಆರಂಭಿಸಿದ್ದ ...ಈ ಸಂಸ್ಥೆ 8-10 ತಿಂಗಳಿಗೆ ಸುಸ್ತಾಗಿ ಕೈಚೆಲ್ಲಿತು. ...ಆಗ ಅಧಿಕಾರಿಗಳಿಗೆ ಈ ಯೋಜನೆಯನ್ನು ...ಅನುಷ್ಠಾನಗೊಳಿಸಬೇಕಾದ ತುರ್ತು(ರೈತರ ...ಅನುಕೂಲಕ್ಕಾಗಿ ಅಲ್ಲದಿದ್ದರೂ ತಮ್ಮ ದಾಖಲೆ ...ಗಳಲ್ಲಿನ ಪ್ರಗತಿಗಾಗಿ, ಆ ಮೂಲಕ ...ಬಹುದಾದ ಆಮದನಿಗಾಗಿ) ಇತ್ತು.


ಡಾ.ಮಧುಕುಮಾರ್

...ಆಗ ಸ್ಪರ್ಧಾ ಎಂಬ ಸಂಸ್ಥೆ ನಡೆಸುತ್ತಿದ್ದ ...ಡಾ. ಜಿ.ಎಸ್. ಮಧುಕುಮಾರ್‌ಗೆ ಗಂಟುಬಿದ್ದ ...ಕೃಷಿ ಇಲಾಖೆಯ ಅಧಿಕಾರಿಗಳು ಈ ಸಾವಯವ ಗ್ರಾಮ ...ಯೋಜನೆ ಅನುಷ್ಠಾನದ ಜವಾಬ್ದಾರಿ ವಹಿಸಿಕೊಳ್ಳುವಂತೆ ...ದುಂಬಾಲು ಬಿದ್ದರು. ಅಷ್ಟೊತ್ತಿಗಾಗಲೇ ಪಾಳೇಕಾರರ ...ತರಬೇತಿ ಶಿಬಿರದಲ್ಲಿ ಭಾಗವಹಿಸಿದ್ದ ಡಾ. ಮಧುಕುಮಾರ್ ...ಸ್ವತಃ ತಾವೇ ನೈಸರ್ಗಿಕ ಕೃಷಿ ಪದ್ಧತಿಯಲ್ಲಿ ಕೃಷಿ ಮಾಡುವ ...ಪ್ರಯತ್ನದಲ್ಲಿ ಸಕ್ರಿಯರಾಗಿದ್ದರು.

ಕೃಷಿ ಅಧಿಕಾರಿಗಳ ಈ ಪ್ರಸ್ತಾವನೆಯನ್ನು ಡಾ. ...ಮಧುಕುಮಾರ್ ಆರಂಭದಲ್ಲಿಯೇ ತಿರಸ್ಕರಿಸಿದರು. ...ಅಧಿಕಾರಿಗಳ ಒತ್ತಡ ಜಾಸ್ತಿಯಾದಾಗ ''ನಾವು ಪಾಳೇಕರರ ...ಕೃಷಿ ಪದ್ಧತಿಯನ್ನು ರೈತರಿಗೆ ಪರಿಚಯಿಸಿ, ರೈತರಲ್ಲಿ ...ಜಾಗೃತಿ ಮೂಡಿಸುವ ಕೆಲಸ ಬೇಕಾದರೆ ಮಾಡು ...ತ್ತೇವೆ'' ಎಂದರು. ಇದರಿಂದ ರೈತರಿಗೂ ಎಲ್ಲಾ ...ರೀತಿಯಲ್ಲೂ ಅನುಕೂಲವಾಗುತ್ತದೆ. ಸಾವಯವ ...ಕೃಷಿಗಿಂತಲೂ ಇದು ಹೆಚ್ಚು ರೈತಸ್ನೇಹಿ ಮತ್ತು ...ಕಾರ್ಯಸಾಧು ಪದ್ಧತಿ ಎಂದು ಹೇಳಿದರು.


ಡಾ.ಶಂಕರ್

ಆಗ ಕೃಷಿ ಅಧಿಕಾರಿಗಳು ''ನೀವೇನಾದರೂ ...ಮಾಡಿ ಈ ಪ್ರಾಜೆಕ್ಟ್ ಕೈಗೆತ್ತಿಕೊಳ್ಳಿ'' ಎಂದರು. ...ಆಗ ಚಿತ್ರದುರ್ಗ ತಾಲ್ಲೂಕಿನ ಚಿಕ್ಕಪ್ಪನಹಳ್ಳಿ ...ಮತ್ತು ಸುಲ್ತಾನ್‌ಪುರ ಗ್ರಾಮಗಳನ್ನು ಆಯ್ಕೆ ...ಮಾಡಿ ಸುಮಾರು 33 ರೈತರ ಮನವೊಲಿಸಿ ...ಸುಭಾಷ್ ಪಾಳೇಕಾರರ ತರಬೇತಿ ಶಿಬಿರಗಳಿಗೆ ...ಕರೆದೊಯ್ದಲ್ಲದೆ ರೈತರು ನೈಸರ್ಗಿಕ ಕೃಷಿ ಮಾಡಲು ...ಅಗತ್ಯವಾದ ಪ್ರೇರಣೆಯನ್ನು ನೀಡಿದರು. ಬಹುತೇಕ ರೈತರು ...ತೆಂಗು, ಅಡಿಕೆ, ಮೆಕ್ಕೆಜೋಳ, ತೆಂಗು, ಹೂವು ಬೆಳೆದರು. ...ಇವರ ಯಶೋಗಾಥೆಗಳು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ, ಚಿತ್ರದುರ್ಗ ಆಕಾಶವಾಣಿಯಲ್ಲಿ ಪ್ರಸಾರ ಕೂಡ ಆಗಿವೆ. ಯಾವುದೇ ರೈತರಿಗೂ ಸ್ಫೂರ್ತಿ ಕೊಡಬಲ್ಲ ಸಾಧನೆಯನ್ನು ಈ ರೈತರು ಮಾಡಿದ್ದಾರೆ.

ಈ ನಡುವೆ ಕೃಷಿ ಇಲಾಖೆಯ ವತಿಯಿಂದ ನಾಲ್ಕೈದು ತಿಂಗಳಾದ ನಂತರ ಎರಡು ಲಕ್ಷ ಪ್ರೋತ್ಸಾಹಧನ ಮತ್ತು ಒಂದು ತಿಂಗಳ ವೆಚ್ಚ 16 ಸಾವಿರ ಸೇರಿ ಒಟ್ಟು 2.16 ಲಕ್ಷ ಸ್ಪರ್ಧಾ ಸಂಸ್ಥೆ ಹೆಸರಿನಲ್ಲಿ ಬಂತು.

ರೈತರು ಸ್ವಾವಲಂಬಿಗಳಾಗಬೇಕೆಂಬ ಪಾಳೇಕರರ ಕರೆಯಿಂದ ಸ್ಫೂರ್ತಿ ಪಡೆದಿದ್ದ ಈ ರೈತರು 2 ಲಕ್ಷ ಪ್ರೋತ್ಸಾಹಧನ ತಿರಸ್ಕರಿಸುವ ತೀರ್ಮಾನ ಕೈಗೊಂಡರು. ಆದರೆ ಯೋಜನಾ ವೆಚ್ಚಕ್ಕಾಗಿ ನೀಡಲಾಗುವ 16 ಸಾವಿರ ರೂ.ಗಳನ್ನು ಮಾತ್ರ ಪಡೆಯಲು ಸಿದ್ಧರಿರುವುದಾಗಿ ಅಧಿಕಾರಿಗಳಿಗೆ ತಿಳಿಸಿದರು.

ಆಗ ಜಂಟಿ ಕೃಷಿ ನಿರ್ದೇಶಕ ಡಾ. ಶಂಕರ್ 2 ಲಕ್ಷ ಪ್ರೋತ್ಸಾಹಧನ ಪಡೆಯದೇ ಯೋಜನಾ ವೆಚ್ಚ ನೀಡಲಾಗುವುದಿಲ್ಲ. ನೀವು ಏನಾದರೂ ಮಾಡಿ ಯುಟಿಲೈಸೇಶನ್ ಸರ್ಟಿಫಿಕೇಟ್ ಕೊಟ್ಟು ಈ ಅನುದಾನ ತೆಗೆದುಕೊಳ್ಳಿ ಎಂದರು. ರೈತರು ಮಾತ್ರ ಜಪ್ಪಯ್ಯ ಅನ್ನಲಿಲ್ಲ. ಕೃಷಿ ಅಧಿಕಾರಿಗಳ ತಂಡ ಎರಡು ಮೂರು ಬಾರಿ ರೈತರ ಬಳಿಗೆ ಹೋಗಿ ಮನವರಿಕೆ ಮಾಡಿದರೂ ಅವರ ಅಚಲ ನಿಲುವು ಬದಲಾಗಲಿಲ್ಲ.


ಕೊನೆಗೆ 'ಸ್ಪರ್ಧಾ' ಸಂಸ್ಥೆಯ ಡಾ. ಮಧುಕುಮಾರ್‌ರನ್ನು ಭೇಟಿ ಮಾಡಿದ ಇಲಾಖೆಯ ಅಧಿಕಾರಿಗಳು ಆ ಹಣವನ್ನು ರೈತರಿಗೇನೂ ಕೊಡಬೇಡಿ. ನಮಗೆ ಶೇ.35 ರಷ್ಟು ಕೊಟ್ಟು ಉಳಿದ ಹಣ ನೀವೇ ಇಟ್ಟುಕೊಳ್ಳಿ ಎಂದು ಹೇಳಿದ್ದಾರೆ. ಸದಾ ಅಧಿಕಾರಿಗಳ ಅನ್ಯಾಯ ಅಕ್ರಮಗಳನ್ನು ಪ್ರಶ್ನಿಸುವ ಡಾ. ಮಧುಕುಮಾರ್ ಇದಕ್ಕೆ ಸೊಪ್ಪು ಹಾಕದೆ ನಮ್ಮ ಯೋಜನಾ ಅನುಷ್ಠಾನ ವೆಚ್ಚ ಮಾತ್ರ ಕೊಡಿ ಎಂದು ಪಟ್ಟು ಹಿಡಿದಿದ್ದಾರೆ. ಎಲ್ಲದರಲ್ಲೂ ಪರ್ಸೆಂಟೇಜ್ ನುಂಗುವುದನ್ನೇ ಕಾರ್ಯ ಮಾಡಿಕೊಂಡಿರುವ ಜಂಟಿ ನಿರ್ದೇಶಕ ಡಾ. ಶಂಕರ್ ಜಪ್ಪಯ್ಯ ಅನ್ನುತ್ತಿಲ್ಲ.

ಸಾವಯವ ಕೃಷಿ ಆಂದೋಲನಕ್ಕೆ 100 ಕೋಟಿ ಪ್ರಕಟಿಸಿರುವ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಕೃಷಿ ಮಂತ್ರಿ ರವೀಂದ್ರನಾಥ್ ಚಾರ್ ಸೌಬೀಸ್ ಆಟ ವಾಡುವ ಇಂತಹ ಅಧಿಕಾರಿಗಳನ್ನು ಇಟ್ಟುಕೊಂಡು ಎಂತಹ ಕೃಷಿ ಸುಧಾರಣೆ ಮಾಡುತ್ತಾರೋ

ಗುಲ್ಬರ್ಗಾದಲ್ಲೂ ವಂಚನೆ

ರೈತರ ಉದ್ಧಾರಕ್ಕೆಂದು ಇದುವರೆಗಿನ ಸರಕಾರಗಳು ಆತನ ಹೆಸರಿನ ಮೇಲೆ ಮಾಡುವ-ಮಾಡಿರುವ ಬಾರಾ ಬಾನಗಡಿಗಳಿಗೆ ಲೆಕ್ಕಪತ್ರವಿಲ್ಲ. ಬಹುಶಃ ಇದುವರೆಗೆ ಆಳ್ವಿಕೆ ಮಾಡಿದ ಸರಕಾರಗಳು ರೈತರಿಗೆಂದೆ ರೂಪಿಸಿದ ಸೌಲತ್ತುಗಳು ನಿಜವಾದ ರೈತನಿಗೆ ಸಿಕ್ಕಿದ್ದರೆ ಆತನ ಬದುಕು ಇಂದು ಕೆಟ್ಟು ಕೆಸರೆದ್ದು ಹೋದಂತೆ ಹೋಗುತ್ತಿರಲಿಲ್ಲ.

ಉತ್ತರ ಕರ್ನಾಟಕ - ಅದರಲ್ಲೂ ಹೈದ್ರಾಬಾದ ಕರ್ನಾಟಕ - ದ ಜಿಲ್ಲೆಗಳ ಫಲಾನುಭವಿ ರೈತರಿಗೆ ತಲುಪಬೇಕಾದ ಸರಕಾರದ ಹಲವಾರು ಯೋಜನೆಗಳೆಲ್ಲ ನೇರ ರಾಜಕೀಯ ಘಟಿಂಗರ ಜೇಬು ಸೇರುತ್ತಿರುವುದು ದುರಾದೃಷ್ಟಕರ ಸಂಗತಿಯಾಗಿದೆ.



ಇದಕ್ಕೆ ಉದಾಹರಣೆಯಾಗಿ ಸಾವಯವ ಕೃಷಿಗೆ ಉತ್ತೇಜನ ನೀಡುವ ಉದ್ದೇಶದಿಂದ ಸ್ಥಾಪಿಸಲಾಗಿರುವ ಯೋಜನೆಗೆ ಏನಾಗಿದೆ ಎಂದು ನೋಡಬಹುದು. ಈ ಯೋಜನೆಯ ಅನ್ವಯದಂತೆ ಸಾವಯವ ಕೃಷಿಯ ಬಗ್ಗೆ ರೈತರ ಪ್ರಾತ್ಯಕ್ಷಿಕೆ ಕರೆದು, ಎರೆಹುಳುಗಳ ಸಾಕಾಣಿಕೆ ಹಾಗೂ ಅವುಗಳಿಂದ ತಯಾರಿಸಲ್ಪಟ್ಟ ಗೊಬ್ಬರದ ಮಹತ್ವವನ್ನು ಮನಗಾಣಿಸುವುದು. ರೈತರನ್ನು ಹಲವಾರು ಕೃಷಿ ಸಮ್ಮೇಳನಗಳಿಗೆ ಕರೆದುಕೊಂಡು ಹೋಗಿ ಆ ಸಮ್ಮೇಳನದಲ್ಲಿ ಭಾಗವಹಿಸಿದ ಕೃಷಿ ತಜ್ಞರ ಮೂಲಕ ರೈತರಿಗೆ ಬೇಸಾಯದ ಬಗ್ಗೆ ತಿಳುವಳಿಕೆ ನೀಡುವುದೇ ಆಗಿದೆ. ಆದರೆ ವಸ್ತುಸ್ಥಿತಿಯಲ್ಲಿ ಕೃಷಿ ಇಲಾಖೆಯ ಘಟಿಂಗ ಅಧಿಕಾರಿಗಳು ಹಾಗೂ ಎನ್‌ಜಿಓಗಳು ಸುಳ್ಳು ಸೃಷ್ಟಿಗಳನ್ನು ತಯಾರಿಸಿ ಎಲ್ಲವನ್ನು ಮುಂದಾಮೋಚುವ ಕೆಲಸ ಗುಲಬರ್ಗಾ ಕೃಷಿ ಇಲಾಖೆಯಲ್ಲಿ ನಡೆದಿದೆ.

ಮಾಜಿ ಸಚಿವ ಶರಣಬಸವಪ್ಪ ದರ್ಶನಾಪುರ ಅವರ ರಕ್ತಸಂಬಂಧಿಯಾದ ನಿವೃತ್ತ ಇಂಜಿನಿಯರ್ ಅವರ ಮಗ ಬಸವರಾಜ ಭೈರಡ್ಡಿ ಇಂಥೆಲ್ಲ ಬನಾತಿ ಕೆಲಸಗಳಿಗೆ ಹೇಳಿಮಾಡಿಸಿದ ಆಸಾಮಿ. ಉತ್ತರ ಕರ್ನಾಟಕ ಅಭಿವೃದ್ಧಿ ಸಂಸ್ಥೆ ಎಂಬ ಕಾಗದದಲ್ಲಿ ಮಾತ್ರವೇ ಇರುವ ಎನ್‌ಜಿಓ ಸಂಸ್ಥೆಯ ಮೂಲಕ ಈತ ಈಗಾಗಲೇ ತಿಂದು ಹಾಕಿರುವ ಅಮೇಧ್ಯ ಬಹಳಷ್ಟು. ಗುಲಬರ್ಗಾದ ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕ ಜೆ.ಎಂ.ತಿಪ್ಪೇಸೋಮಯ್ಯನನ್ನು ಹಿಡಕೊಂಡು ಈ ಬಸವರಾಜ ಭೈರಡ್ಡಿ ತಿಪ್ಪೇಸಾರಿಸಿದ್ದು ಈಗ ಗಬ್ಬು ನಾರುತ್ತಿದೆ. ಕಳೆದ ವರ್ಷ ಸಾವಯವ ಕೃಷಿ ಯೋಜನೆಯ ಅಡಿ ಶಹಾಪುರಕ್ಕೆ ಸಮೀಪದ ಹತ್ತಿಗೂಡೂರ ಎಂಬ ಊರಲ್ಲಿ ನಾಲ್ಕಾರು ಕಲ್ಲಿನ ಕಂಬ ನೆಟ್ಟು ಅವಕ್ಕೆ ಪೊರಕೆ ಹೊದಿಸಿ, ಅದರ ಕೆಳಗಡೆ ಒಂದು ಅರೆಬರೆಯಾದ ಗುಂಡಿ ಮಾತ್ರ ತೋಡಲಾಗಿದೆ. ಆದರೆ ಅಲ್ಲಿ ಎರೆಹುಳು ತಯಾರಿಕೆಗೆ ಬೇಕಾದ ಕಚ್ಚಾ ಸಾಮಗ್ರಿಗಳು, ಮುಂತಾದವು ಯಾವುವೂ ಇಲ್ಲ.

ಆದರೆ ಈ ಸಾವಯವ ಕೃಷಿ ತರಬೇತಿಯ ಕುರಿತು ಮಾಹಿತಿ ಸಂಗ್ರಹಿಸಿ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಮೂಲಕ ಜೆ.ಡಿ. ತನ್ಮೂಲಕ ಜಿ.ಪಂಚಾಯಿತಿಯ ಸಿ.ಎಸ್.ಅವರಿಗೆ ವರದಿ ಮಾಡಬೇಕಾದ ಷಣ್ಮುಖಪ್ಪ ಜೇವರ್ಗಿ ಎಂಬ ಅಧಿಕಾರಿಯನ್ನು ಯಾಮಾರಿಸಿ, ಬಸವರಾಜ ಭೈರಡ್ಡಿ ಮಣ್ಣುಮುಕ್ಕಿಸಿದ್ದಾನೆ. ದರ್ಶನಾಪುರನ ರಕ್ತ ಸಂಬಂಧಿ ಎಂಬ ಪೊಗರಿನೊಂದಿಗೆ ನೇರ ಶಹಾಪುರ ಕೃಷಿ ಇಲಾಖೆಯ ಎ.ಡಿ.ಸಿ. ರಮೇಶ ಹರವಾಳ ಎಂಬ ಹರಾಮಿಯ ಮೂಲಕ ವರದಿಯನ್ನು ಸಿದ್ಧಪಡಿಸಿ, ಕನಿಷ್ಠ 1.92 ಲಕ್ಷ ರೂ.ಗಳನ್ನು ಎತ್ತಿಹಾಕಿರುವುದು ಮೇಲುನೋಟಕ್ಕೆ ಕಂಡುಬರುತ್ತದೆ. ಇದಿಷ್ಟೇ ಅಲ್ಲದೆ ಇದೇ ಹರಾಮಿ ಬಸವರಾಜ ಭೈರಡ್ಡಿಗೆ ಮುಂದೆಯೂ ಸಾವಯವ ಕೃಷಿಯ ಬಗ್ಗೆ ರೈತರಿಗೆ ತರಬೇತಿ ನೀಡಲು ಕೃಷಿ ಇಲಾಖೆ ಪರವಾನಗಿ ನೀಡಿದೆ. ಕೃಷಿ ಅಂದರೆ ಏನು ಎಂಬುದೆ ಗೊತ್ತಿಲ್ಲದ, ಸರಕಾರದ ಸ್ಕೀಮ್‌ಗಳನ್ನು ಬಳಸಿಕೊಂಡು ಕಬಳಿಸುವುದನ್ನು ಮಾತ್ರ ಕಲಿತಿರುವ ಉತ್ತರ ಕರ್ನಾಟಕ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯನ್ನು ಮೊದಲು ಪರಿಶೀಲನೆ ಒಳಪಡಿಸುವುದು ಉತ್ತಮ.

ಆದರೆ ಜಿಲ್ಲೆಯ ಪ್ರಭಾವಿ ರಾಜಕಾರಣಿಗಳಲ್ಲೊಬ್ಬನಾದ ದರ್ಶನಾಪುರ ಇದಕ್ಕೆ ಅಸ್ತದ ನೀಡಿ ತನ್ನ ಪಾರದರ್ಶಕ ನಿಲುವನ್ನು ಪ್ರಕಟಿಸುವರೆ ಎಂಬುದು ಕಾದುನೋಡೋಣ ಅಲ್ಲವೆ?

■









ಗುಜರಾತ್ ಮಾದರಿಗೆ ಎಚ್ಚರಿಕೆ?

ಬೆಂಗಳೂರಿನ ಬ್ಲಾಕ್ ಫ್ರೈಡೆ

ಎಲ್ಲೋ ಮುಂಬೈ, ದೆಹಲಿ, ಗುಜರಾತ್‌ಗಳಲ್ಲಿನ ಸರಣಿ ಸ್ಫೋಟಗಳನ್ನು ಸುದ್ದಿಯಾಗಿ ಮಾತ್ರ ನೋಡುತ್ತಿದ್ದ ಬೆಂಗಳೂರಿಗರಿಗೆ ಈಗ ತಮ್ಮ ಮನೆಯಂಗಳದಲ್ಲೇ ಬಾಂಬ್ ಸ್ಫೋಟಗಳನ್ನು ಕಂಡರಿಯುವ ದೌರ್ಭಾಗ್ಯ ಒದಗಿಬಂದಿದೆ.

ಜುಲೈ 26 ರ ಶುಕ್ರವಾರದ ಮಧ್ಯಾಹ್ನ ಕೇವಲ ಒಂದು ಗಂಟೆಯ ಅಂತರದಲ್ಲಿ ನಗರದ ವಿವಿಧೆಡೆ ಸಿಡಿದ ಒಟ್ಟೂ ಒಂಭತ್ತು ಬಾಂಬ್‌ಗಳು ಓರ್ವ ಮಹಿಳೆಯನ್ನು ಬಲಿತೆಗೆದುಕೊಂಡು ಹನ್ನೆರಡು ಮಂದಿಯನ್ನು ಗಾಯಗೊಳಿಸಿರುವುದು ಬೆಂಗಳೂರಿಗೆ ಬಾಂಬ್ ಕಲ್ಚರ್ ಕಾಲಿಟ್ಟಿರುವುದರ ಸ್ಪಷ್ಟ ಸೂಚನೆಯಷ್ಟೇ. ಉಗ್ರರು ಕಾಶ್ಮೀರದಿಂದಲೇ ಬರಬೇಕಿಲ್ಲ, ಒಸಾಮಾ ಬಿನ್ ಲಾಡೆನ್ ಅಥವಾ ಲಷ್ಕರೇ ತೋಯ್ಬಾ ಮಾತ್ರವೇ ಟೆರರಿಸ್ಟುಗಳಲ್ಲ, ನಮ್ಮ ಮನೆ ಪಕ್ಕದಲ್ಲೇ ಸಿಡಿದ ಬಾಂಬು ಪಾಕಿಸ್ತಾನದಿಂದಲೋ ಅಫಘಾನಿಸ್ತಾನದಿಂದಲೋ ಬಂದಿದ್ದಲ್ಲ.

ಇಲ್ಲೇ ದೊರಕುವ ಕಚ್ಚಾವಸ್ತುಗಳನ್ನು ಸಮೀಕರಿಸಿ ರಸ್ತೆಬದಿಯಲ್ಲೋ ಖಾಲಿ ಸೈಟಿನಲ್ಲೋ ಇಟ್ಟು ಸ್ಫೋಟಿಸಿ ಮಜಾಕು ನೋಡಲೆಂದೇ ಸರಣಿ ಸ್ಫೋಟದ ರಿಹರ್ಸಲ್ ಒಂದನ್ನು ನಡೆಸಿದಂತಿಲ್ಲವೆ?

ಯಾವುದೇ ದಾಳಿ ನಡೆದಾಗ ಸಹಜವಾಗೇ ಒಂದಲ್ಲಾ ಒಂದು ದುಷ್ಟಕೂಟ ಅದರ ಹೊಣೆ ಹೊತ್ತುಕೊಳ್ಳುತ್ತದೆ. ಈಗ ಅಹ್ಮದಾಬಾದ್‌ನಲ್ಲಿ ನಡೆದ ಸರಣಿ ಸ್ಫೋಟವನ್ನು 'ಇಂಡಿಯನ್ ಮುಜಾಹಿದ್ದೀನ್' ಎಂಬ ಗುಂಪು ತನ್ನದೇ ಕೆಲಸ ಎಂದಿಲ್ಲವೆ? ಹಾಗೆ ಬೆಂಗಳೂರಿನ ಸ್ಫೋಟದ ಹೊಣೆಯನ್ನು ಯಾರಾದರೂ ಹೊರಬೇಕಿತ್ತು.

ಕಟ್ಟರ್ ಭಯೋತ್ಪಾದಕರ್‍ಯಾರೂ ಈ ರೀತಿ ಮೋರಿಗಳಲ್ಲಿ, ಖಾಲಿ ಸೈಟುಗಳಲ್ಲಿ ಬಾಂಬಿಟ್ಟು ತಮಾಷೆ ಮಾಡುವುದಿಲ್ಲ. ಸಿಟಿ ಮಾರ್ಕೆಟ್, ಅವೆನ್ಯೂ ರಸ್ತೆ, ಫೋರಂ, ದೂರದರ್ಶನ ಕೇಂದ್ರ, ಬಸ್ ನಿಲ್ದಾಣ, ರೈಲ್ವೇ ನಿಲ್ದಾಣ, ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಎಲ್ಲವನ್ನೂ ಬಿಟ್ಟು ನಿರ್ಜನ ಪ್ರದೇಶಗಳನ್ನೇ ಆಯ್ದು ಸ್ಫೋಟಿಸಿದ್ದಾರೆಂದರೆ ಇದು ಯಾರೋ ಲೋಕಲ್ ಪುಂಡರ ಕೃತ್ಯವಿರಬಹುದೇ?

ಲೋಕಲ್ಲಾಗಿ ದೊರಕುವ ನೆಟ್ಟು-ಬೋಲ್ಟು ಟಿಫಿನ್ ಕ್ಯಾರಿಯರ್, ಬ್ಯಾಟರಿ ಮತ್ತು ಅಮೋನಿಯಂ ನೈಟ್ರೇಟ್ ಬಳಸಿ ತಯಾರಿಸಲಾಗಿರುವ ದುರ್ಬಲ ಸ್ಫೋಟಕಗಳು ಇದರಲ್ಲಿ ಕಟ್ಟರ್ ಉಗ್ರರ ಕೈವಾಡವಿಲ್ಲ ಎಂಬುದನ್ನು ಎತ್ತಿ ತೋರುತ್ತಿಲ್ಲವೆ?

ಬಹುಶಃ ಗುಜರಾತ್‌ನ ಅಹ್ಮದಾಬಾದ್ ಸ್ಫೋಟದ ಹಿಂದಿನ ದಿನ ನಡೆದಿರದೇ ಹೋಗಿದ್ದರೆ ಇದನ್ನು ಇಸ್ಲಾಮಿ ಉಗ್ರರ ಕೃತ್ಯವೆನ್ನಲು ಕಾರಣವಿರುತ್ತಿರಲಿಲ್ಲ. ಸ್ಫೋಟ ನಡೆದ ಎರಡೂ ರಾಜ್ಯಗಳಲ್ಲೂ ಬಿಜೆಪಿ ಸರ್ಕಾರವಿದೆ. ಗುಜರಾತ್ ಈಗಾಗಲೇ ಅಲ್ಪಸಂಖ್ಯಾತರ ರಕ್ತ ಕುಡಿದ ರಾಜ್ಯವಾದರೆ ಕರ್ನಾಟಕದ ಮುಖ್ಯಮಂತ್ರಿ ಯಡ್ಡಿ ಕಂಡಕಂಡಲ್ಲಿ ಗುಜರಾತ್ ಮಾದರಿಯ ಗುಣಗಾನ ಮಾಡುತ್ತಾರೆ.

ಇದಕ್ಕೆ ಪೂರಕವೆಂಬಂತೆ ಈಗಾಗಲೇ ಕರಾವಳಿಯಲ್ಲಿ ಅಲ್ಪಸಂಖ್ಯಾತರ ಮೇಲೆ ಸಂಘ ಪರಿವಾರದ ದೌರ್ಜನ್ಯ ಶುರುವಾಗಿದೆ. ಕೋಮುವಾದಿ ಸರ್ಕಾರವೊಂದರ ವಿರುದ್ಧದ ಅಲ್ಪಸಂಖ್ಯಾತರ ಆಕ್ರೋಶ ಈ ರೂಪದಲ್ಲಿ ವ್ಯಕ್ತವಾಗುತ್ತಿದೆಯೇ? ಗುಜರಾತ್ ಸ್ಫೋಟದ ಹಿಂದಿರುವ ಉಗ್ರರ ಸಂಪರ್ಕವಿರುವ ಲೋಕಲ್ ಗುಂಪೊಂದು ಈ ಮೂಲಕ ಯಡ್ಡಿಯ ಗುಜರಾತ್ ಮಾದರಿಗೆ ಎಚ್ಚರಿಕೆ ನೀಡುತ್ತಿದೆಯೇ?

ಇಂಥದೊಂದು ಸಾಧ್ಯತೆಯನ್ನೂ ತಳ್ಳಿ ಹಾಕುವಂತಿಲ್ಲ. ಇಷ್ಟೆಲ್ಲಕ್ಕೂ ಬಿಜೆಪಿ ಆಳ್ವಿಕೆಯಿರುವುದು ಮತ್ತು ಅಹ್ಮದಾಬಾದ್ ಸ್ಫೋಟದ ಮುನ್ನಾದಿನ ನಡೆದಿರುವುದನ್ನು ಬಿಟ್ಟರೆ ಬೇರೆ ಆಧಾರವಿಲ್ಲ. ಬಹುಶಃ ಬೆಂಗಳೂರು ಸ್ಫೋಟ ಮತ್ತು ಗುಜರಾತ್ ಸ್ಫೋಟಗಳೆರಡೂ ಕಾಕತಾಳೀಯವಾಗಿರಲೂಬಹುದು.

ಏಕೆಂದರೆ ಈ ಥರದ ಹುಡುಗಾಟಿಕೆ ಸ್ಫೋಟಗಳೆಲ್ಲವೂ ಸಂಘ ಪರಿವಾರದ ಕೃತ್ಯಗಳೆಂದು ಈಗಾಗಲೇ ಜಗಜ್ಜಾಹಿರಾಗಿದೆ. ಮೇ 10 ರಂದು ಅಂದರೆ ಕಳೆದ ವಿಧಾನಸಭಾ ಚುನಾವಣೆಗಿನ್ನೂ ವಾರವಿರುವಾಗಲೇ ಹುಬ್ಬಳ್ಳಿಯ ಕೋರ್ಟ್ ಆವರಣದಲ್ಲಿ ಸ್ಫೋಟ ಸಂಭವಿಸಿತ್ತು. ಇದು ಮುಸ್ಲಿಂ ಉಗ್ರರ ಕೃತ್ಯವೆಂದೇ ಸಂಘ ಪರಿವಾರ ಚುನಾವಣೆಯಲ್ಲಿ ಅದರ ಲಾಭ ಪಡೆಯಿತು. ಬಿಜೆಪಿ ಸರ್ಕಾರವೂ ಬಂತು. ಈಗ ಯಡ್ಡಿ ಮುಖ್ಯಮಂತ್ರಿಯಾದ ಮೇಲೆ ಬೆಂಗಳೂರು ಕಾರ್ಪೋರೇಷನ್ ಚುನಾವಣೆ ಸಮೀಪಿಸುತ್ತಿದೆ. ಶತಗತಾಯ ಬೆಂಗಳೂರು ಪಾಲಿಕೆ ಹಿಡಿಯುವುದು ಬಿಜೆಪಿಯ ಹುನ್ನಾರ. ಈ ಹಿನ್ನೆಲೆಯಲ್ಲಿ ಸರಣಿ ಸ್ಫೋಟ ಸಂಭವಿಸಿತೆಂದರೆ ಕಳೆದ ವಿಧಾನಸಭಾ ಚುನಾವಣೆಯಲ್ಲಾದಂತೆ ಬೆಂಗಳೂರಿನ ಮಧ್ಯಮ ವರ್ಗದ ಮತದಾರನ ಮುಸ್ಲಿಂ ವಿರೋಧಿ ಆಕ್ರೋಶವೇ ಓಟ್‌ಬ್ಯಾಂಕಾಗಿ ರೂಪುಗೊಳ್ಳುತ್ತದೆ.

ನೀರಿನ ಬರ, ವಿದ್ಯುತ್ ಅಭಾವ, ಪೆಟ್ರೋಲ್- ಡಿಸೇಲ್ ಕೊರತೆ, ಗೊಬ್ಬರದ ಗೋಲಿಬಾರ್ ಇತ್ಯಾದಿ ಜ್ವಲಂತ ಸಮಸ್ಯೆಗಳಿಂದ ಜನರ ಮನಸ್ಸನ್ನು ಮುಸ್ಲಿಂ ವಿರೋಧದತ್ತ



ಏನಿದು ಇಂಡಿಯನ್ ಮುಜಾಹಿದ್ದೀನ್?

ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಭಾರತದ ಹಿಂದೂ ಕೋಮುವಾದಿಗಳ ಹಾಗೂ ಪುರೋಹಿತಶಾಹಿ ದುಷ್ಟಶಕ್ತಿಗಳ ಪ್ರಚೋದನೆಯಿಂದ ಜನ್ಮ ತಾಳಿರುವ ಮುಸ್ಲಿಂ ಉಗ್ರಗಾಮಿಗಳೇ ಈ ಇಂಡಿಯನ್ ಮುಜಾಹಿದ್ದೀನ್‌ಗಳೆಂದರೆ ತಪ್ಪಾಗುವುದಿಲ್ಲ.

ಬೆಂಗಳೂರು ಸ್ಫೋಟಗಳಿಗೆ ಯಾರು ಹೊಣೆ ಎಂಬುದಿನ್ನು ಪತ್ತೆಯಾಗಿಲ್ಲ. ಆದರೆ ಅದರ ಮಾರನೇ ದಿನವೇ ದೂರದ ಕೋಮುದ್ವೇಷದ ನಾಡು ಗುಜರಾತಿನ ಅಹಮದಾಬಾದಿನಲ್ಲಿ ನಡೆದ 17 ಸರಣಿ ಸ್ಫೋಟಕ್ಕೆ ನಾವೇ ಹೊಣೆ ಎಂದು ಅನೌನ್ಸ್ ಮಾಡಿಕೊಂಡಿರುವವರೇ ಈ ಇಂಡಿಯನ್ ಮುಜಾಹಿದ್ದೀನ್‌ಗಳು.

ಈ ಗುಂಪು ತನ್ನನ್ನು 'ಇಂಡಿಯನ್ ಮುಜಾಹಿದ್ದೀನ್' ಎಂದು ಕರೆದುಕೊಂಡಿದೆ. ಆದರೆ ಪೊಲೀಸರು ಈಗಲೂ ಇದನ್ನು ನಂಬುತ್ತಿಲ್ಲ. ಅವರ ಅನುಮಾನ ಏನೆಂದರೆ ಲಷ್ಕರ್-ಎ-ತೋಯ್ಬಾ, ಬಾಂಗ್ಲಾದ ಹುಜಿ ಹಾಗೂ ಭಾರತ ನಿಷೇಧಿಸಿರುವ ಸಿಮಿ ಸಂಘಟನೆಗಳು ಮತ್ತು ಬಿಡಿ ವ್ಯಕ್ತಿಗಳು ಸೇರಿಕೊಂಡೇ ಒಂದು ಸಡಿಲ ರೂಪದ 'ಇಂಡಿಯನ್ ಮುಜಾಹಿದ್ದೀನ್' ಶೇಲಿ ಬಿಟ್ಟಿರಬಹುದು ಎಂಬುದಾಗಿದೆ. ತನಿಖೆಯ ದಾರಿ ತಪ್ಪಿಸಲು ಉಗ್ರರು ಈ ನಾಟಕ ಆಡಿರಬಹುದೆಂಬ ಅನುಮಾನಗಳೂ ಇವೆ. ಬಹುಶಃ [illegible]



ಅದು ಮುಂದಿನ ತನಿಖೆಗಳಲ್ಲಿ ಖಾತರಿಯಾಗಬೇಕಾದ ವಿಚಾರ. ಆದರೆ ನಾವಿಲ್ಲಿ ಅಷ್ಟೇ ಮಹತ್ವದ ಇನ್ನು ಹಲವು ಸಂಗತಿಗಳತ್ತ ಗಮನಹರಿಸಬೇಕಿದೆ.

ಜುಲೈ 26 ರ ಅಹಮದಾಬಾದ್ ಸ್ಫೋಟಗಳಿಗೆ ಕೆಲವೇ ನಿಮಿಷ ಮುನ್ನ ಈ ಉಗ್ರರು ದೇಶ-ವಿದೇಶಗಳ 20 ಕ್ಕೂ ಹೆಚ್ಚು ಸುದ್ದಿ ಸಂಸ್ಥೆಗಳಿಗೆ 14 ಪುಟಗಳ ಒಂದು ಇ-ಮೇಲ್ ಕಳುಹಿಸಿ ಬಾಂಬ್ ಸ್ಫೋಟಗಳ ಬಗ್ಗೆ ಸೂಚನೆ ನೀಡಿದ್ದಾರೆ. ಜೊತೆಗೆ ತಾವು ಯಾವ ಕಾರಣಕ್ಕಾಗಿ ಈ ಕೃತ್ಯ ನಡೆಸಲು ಹೊರಟಿದ್ದೇವೆಂಬುದನ್ನು ಭಿಡೆ ಇಲ್ಲದೆ ಹೇಳಿಕೊಂಡಿದ್ದಾರೆ..

The Rise of Jihad

`2002 ರಲ್ಲಿ ಗುಜರಾತ್‌ನಲ್ಲಿ ನಡೆಸಿದ ಮುಸ್ಲಿಮರ ಹತ್ಯಾಕಾಂಡಕ್ಕೆ ಇದು ಸೇಡು'-ಅಹಮದಾಬಾದ್ ಸ್ಫೋಟಗಳಿಗೆ ಮುಜಾಹಿದ್ದೀನ್‌ಗಳು ನೀಡಿರುವ ಮೊದಲ ಕಾರಣವೇ ಇದು. ಆ ನರಮೇಧದ ರೂವಾರಿ ಬಿಜೆಪಿ ಮುಖ್ಯಮಂತ್ರಿ ನರೇಂದ್ರ ಮೋದಿ ಎಂಬುದು ಎಲ್ಲರಿಗೂ ಗೊತ್ತು. ನಾವು ಈ ಮೋದಿ ಬಗ್ಗೆ ಮಾತನಾಡುವಾಗ ಕೇವಲ 2002 ರ ಕೊಲೆಗಳ ಮಾಹಿತಿ ಆಧರಿಸಿ ಮಾತ್ರ ಯೋಚಿಸುತ್ತಿರುತ್ತೇವೆ. ಆದರೆ ವಾಸ್ತವ ಸಂಗತಿಗಳು ಅದಕ್ಕಿಂತ ಭಯಾನಕವಾಗಿವೆ.

1971 ರ ವೇಳೆಗೆ ಗುಜರಾತಿನ ಸಂಘ ಪರಿವಾರದ ಕೋಮುವಾದಿ ಕೆಲಸಗಳಲ್ಲಿ ಇದ್ದ ಮೋದಿಗೆ ಲಕ್ಷ್ಮಣರಾವ್ ಇನಾಂದಾರ್ ಅಲಿಯಾಸ್ '[illegible] ಸಾಹೇಬ್' ಎಂಬಾತನ ನಾಯಕತ್ವವಿತ್ತು.

ಈತ ಗುಜರಾತಿನ ಕುಖ್ಯಾತ ಸಂಘ ಪರಿವಾರಿ ನಾಯಕ. 1985 ರಲ್ಲಿ ಈ ವಕೀಲ್ ಸಾಹೇಬ್ ತೀರಿಕೊಳ್ಳುವಷ್ಟರಲ್ಲಿ ಅಸಂಖ್ಯಾತ ಕೋಮು ಗಲಭೆ ನಡೆಸಲಾಗಿತ್ತು. 1964 ರ ಗಲಭೆಯೊಂದರಲ್ಲಿ ಎರಡು ಸಾವಿರ ಸಾವು ಸಂಭವಿದ್ದವು. ವಕೀಲ್ ಸಾಬ್ ತೊಲಗಿದ ನಂತರ 1985 ರಲ್ಲಿ ಆತನ ಸ್ಥಾನಕ್ಕೆ ಮೋದಿ ಬಂದು ಕುಳಿತ. ಅದರ ಬೆನ್ನಹಿಂದೆಯೇ ಮುಸ್ಲಿಮರ ಶಿಕಾರಿಯೂ ಶುರುವಾಯಿತು. 1985 ರಲ್ಲೇ ಒಂದು ಗಲಭೆ ನಡೆದು 210 ಜನ ಸತ್ತರು. ನಂತರ 1986 ರಲ್ಲಿ 120 ಮಂದಿ, 1987 ರಲ್ಲಿ 67 ಜನ, 1990 ರಲ್ಲಿ 219 ಜನರ ಹತ್ಯೆ ನಡೆಯಿತು. 1992 ರ ಗಲಭೆ 441 ಬಲಿ ತೆಗೆದುಕೊಂಡರೆ 1993 ರಲ್ಲಿ 116 ಮಂದಿ ಕೊಲ್ಲಲ್ಪಟ್ಟಿದ್ದರು. ಒಟ್ಟಾರೆ ಹೇಳಬೇಕೆಂದರೆ ಗುಜರಾತ್ ಒಂದರಲ್ಲೇ 1970 ರಿಂದೀಚೆಗೆ 440 ಕೋಮು ಗಲಭೆಗಳು ನಡೆದಿವೆ.

2002 ರ ಮುಸ್ಲಿಮರ ಹತ್ಯಾಕಾಂಡ ಇದರ ಪರಾಕಾಷ್ಠೆ ಅಷ್ಟೆ. ಈ ಪ್ರತಿ ಗಲಭೆಗಳ ಹಿಂದೆಯೂ ನರೇಂದ್ರ ಮೋದಿ ತರಹದ ರಕ್ತಪಿಪಾಸುಗಳ ಅಧಿಕಾರದಾಹ, ಕೋಮುದ್ವೇಷ ಸ್ವಾರ್ಥಗಳಿದ್ದವು. ಆದರೆ ಮೇಲುನೋಟಕ್ಕೆ ಇವರೆಲ್ಲಾ ಹಿಂದೂ ದೇಶ, ಭಾರತ ಮಾತೆ, ದೇಶಭಕ್ತಿಯ ಮುಖವಾಡ ಹಾಕಿಕೊಂಡಿದ್ದರು.

ಈಗ ಇದರ ಸೇಡು ತೀರಿಸುವುದಾಗಿ ಇಂಡಿಯನ್ ಮುಜಾಹಿದ್ದೀನ್‌ಗಳು ಅಬ್ಬರಿಸುತ್ತಿದ್ದಾರೆ. ಈ ಹಿಂದೂ ಕೋಮುವಾದಿಗಳು ಹಾಗೂ ಮುಜಾಹಿದ್ದೀನ್ ಉಗ್ರರ ದುಷ್ಕೃತ್ಯಗಳಿಗೆ ಬಲಿಯಾಗುತ್ತಿರುವವರು ಮಾತ್ರ ಬಡ ಭಾರತೀಯರು!

ಇದೆಂಥ ವಿಪರ್ಯಾಸ!!

ಈ ಮುಜಾಹಿದ್ದೀನ್‌ಗಳ ಅಸ್ತಿತ್ವದ ಬಗ್ಗೆ ಪೊಲೀಸರಿಗೆ ಏನೇ ಅನುಮಾನಗಳಿರಲಿ. ಆದರೆ ಅವರು ನಡೆಸುತ್ತಿರುವ ದುಷ್ಕೃತ್ಯ ಇದೇ ಮೊದಲಿನದಲ್ಲ. 2008 ರ ಮೇ ತಿಂಗಳಲ್ಲಿ ರಾಜಾಸ್ಥಾನದ ಜೈಪುರದಲ್ಲಿ ಅವರು ಬಾಂಬ್ ಸ್ಫೋಟಿಸಿ 63 ಜನರ ಸಾವಿಗೆ ಕಾರಣರಾಗಿದ್ದರು. ಆಗಲೂ ಕೂಡ ಈಗ ಮೇಲ್ ಕಳುಹಿಸಿರುವಂತೆಯೇ ಹೇಳಿಕೆ ನೀಡಿ:

``If Islam and Muslims in this Country are not safe then the light of your safety will also go off very soon."

▶▶▶

...ಮುಗಿಸಬೇಕೆಂದರೆ ಇಂಥದೊಂದು ಗಿಮಿಕ್ ಮಾಡಲೇಬೇಕು. ಎಲ್ಲಕ್ಕೂ ...ಗಿಲಾಗಿ ಈ ಹಿಂದೆ ಶಾಸಕರ ಭವನಕ್ಕೆ ಇಂಥದೊಂದು ಕ್ರೂಡ್ ಬಾಂಬ್ ...ಟ್ಟು ಸಿಕ್ಕಿಬಿದ್ದ ಗಿರೀಶ್ ಮಟ್ಟಣ್ಣನವರ್ ಈಗ ರಾಜ್ಯ ಬಿಜೆಪಿಯ ಯುವ ...ರ್ಚಾದ ಅಧ್ಯಕ್ಷ.

...ಬಾಂಬ್ ತಯಾರಿಕೆಯಾಗಲಿ, ಸ್ಫೋಟಿಸುವ ಕಲೆಯಾಗಲಿ ಬಿಜೆಪಿಗೆ ...ೂಸತೇನಲ್ಲ. ಹಾಗೊಂದು ಪಕ್ಷ ಇದು ಉಗ್ರರ ಕೃತ್ಯವೆಂದೇ ಇಟ್ಟುಕೊಳ್ಳೋಣ. ...ರ್ಕಾರಕ್ಕೊಂದು ಗೂಢಚರ್ಯೆ ಸಂಸ್ಥೆಯಿದೆ. ತಮ್ಮ ಜಾತಿಬಾಂಧವ ...ರ್ಜಿಯವರನ್ನೇ ಯಡ್ಡಿ ಅದರ ಮುಖ್ಯಸ್ಥನನ್ನಾಗಿ ನೇಮಿಸಿದ್ದಾರೆ. ಮಿರ್ಜಿ ...ಜ್ಯ ಗುಪ್ತ ವಾರ್ತೆಗೆ ಬಂದಿದ್ದೇ ಮೊದಲು ಮಾಡಿದ್ದು ಲಿಂಗಾಯತ ...ಧಿಕಾರಿಗಳನ್ನು ಹಿಡಿದು ತಂದು ಇಂಟಲಿಜೆನ್ಸಿಗೆ ತುಂಬಿದ್ದು. ಬಂದ ...ಧಿಕಾರಿಗಳೆಲ್ಲ ಮೊದಲು ಮಾಡಿದ ಕೆಲಸವೇನು ಗೊತ್ತೆ?

...ಹೊನ್ನಾಳಿಯ ಸ್ತ್ರೀಲಂಪಟ ಎಮ್ಮೆಲ್ಲೆ ರೇಣುಕಾಚಾರ್ಯ ...ಾವ ಹೊಸ ಹೆಂಗಸಿನ ತೆಕ್ಕೆಗೆ ಬಿದ್ದ? ಬಸನಗೌಡ ...ತ್ನಾಳ್ ಯಾವ ಸ್ಕೆಚ್ ಹಾಕುತ್ತಿದ್ದಾರೆ? ಸದಾನಂದಗೌಡ ...ರು ಮಸಲತ್ತು ಮಾಡುತ್ತಿದ್ದಾರೆ? ಗಣಿ ರೆಡ್ಡಿಗಳ ಹಾವಳಿ ...ಾವ ಮಟ್ಟ ಮುಟ್ಟುತ್ತಿದೆ? ಇಂಥವುಗಳ ಬಗ್ಗೆಯೇ ...ೊಲೀಸ್ ಇಂಟಲಿಜೆನ್ಸ್‌ನ ಆಸಕ್ತಿ ಹೆಚ್ಚಾಯಿತು.



...ಯಡ್ಡಿ ವಿರುದ್ಧ ಮುನಿಸಿಕೊಂಡ ಶಂಕರಮೂರ್ತಿ ...ಂಥವರ ಚಟುವಟಿಕೆಯ ಮೇಲೆ ಕಣ್ಣಿಡುವುದು, ಬಹುಮತ ...ದಗಿಸಿಕೊಟ್ಟ ಪಕ್ಷೇತರ ಶಾಸಕರನ್ನು ಹಿಂಬಾಲಿಸುವುದಷ್ಟೇ ...ಂಟಲಿಜೆನ್ಸ್ ಅಲ್ಲವಲ್ಲ!

...ಇಂಟಲಿಜೆನ್ಸ್ ಮುಖ್ಯಸ್ಥನಾದವನು ಪ್ರತಿ ಮೂರು ...ಂಟೆಗೊಮ್ಮೆ ರಾಜ್ಯದ ಆಗುಹೋಗುಗಳ ಬಗ್ಗೆ ...ುಖ್ಯಮಂತ್ರಿಗೆ ಮಾಹಿತಿ ಕೊಡಬೇಕು. ಆದರೆ ಅದನ್ನು ...ಳಿಸಿಕೊಳ್ಳಲು ಮುಖ್ಯಮಂತ್ರಿಗೇ ಟೈಮಿಲ್ಲ. ಕಳೆದ ವಾರ ...ಜ್ಯದ ಮದ್ಯ ವಿರೋಧಿ ಹೋರಾಟಗಾರ ಎ.ಟಿ. ಬಾಬು ...ತ್ಯೆಯ ವಿರುದ್ಧ ಮುಖ್ಯಮಂತ್ರಿಗೆ ಮನವಿ ಕೊಡಲು ...ೋದ 'ನರ್ಮದಾ ಬಚಾವೋ' ನಾಯಕಿ ಮೇಧಾ ಪಾಟ್ಕರ್ ...ುಂದೆ ಯಡಿಯೂರಪ್ಪ 'ಬಾಬು ಕೊಲೆಯಾಗಿದ್ದೇ ನನಗೆ ...ತ್ತಿಲ್ಲ' ಎಂದುಬಿಟ್ಟರು!

...ಇದರರ್ಥ ಇಂಟಲಿಜೆನ್ಸ್ ಇಲಾಖೆ ಯಡ್ಡಿಯ ಕುರ್ಚಿ ...ಯಾಲಿಗೆ ಬಳಕೆಯಾಗುತ್ತಿದೆಯೇ ಹೊರತು ಜನರ ...ಾನ-ಪ್ರಾಣದ ಸುರಕ್ಷತೆ ಅದಕ್ಕೆ ಮುಖ್ಯವಲ್ಲ

...ಲಾಗಾಯ್ತಿನಿಂದಲೂ 'ಬೆಂಗಳೂರು ಉಗ್ರರ ಅಡಗುದಾಣವಾಗಿದೆ. ...ಯೋತ್ಪಾದಕರ ಕೆಂಗಣ್ಣು ಬೆಂಗಳೂರಿನ ಮೇಲೆ ಬಿದ್ದಿದೆ' ಎಂದು ಕೇಂದ್ರ ...ೇಹುಗಾರಿಕೆ ದಳ (ಐಬಿ) ರಾಜ್ಯ ಸರ್ಕಾರವನ್ನು ಎಚ್ಚರಿಸಿಕೊಂಡೇ ಬಂದಿದೆ. ...ಂದ್ರ ಐಬಿಯ ಎಚ್ಚರಿಕೆಗೆ ಸಾಕ್ಷಿಯೋ ಎಂಬಂತೆ ಇಂಡಿಯನ್ ಇನ್‌ಸ್ಟಿಟ್ಯೂಟ್ ...ಫ್ ಸೈನ್ಸ್ ಮೇಲೆ ದಾಳಿ ನಡೆದು ಓರ್ವ ವಿಜ್ಞಾನಿಯ ಹತ್ಯೆಯಾಗಿದೆ. ...ಲ್ಲಿಗೆ ಎರಡು ವರ್ಷದ ಹಿಂದೆ ಬೆಂಗಳೂರಿನ ಎಂ.ಎಸ್. ರಾಮಯ್ಯ ...ಲೇಜ್ ಹಿಂಭಾಗದ ಮನೆಯೊಂದರ ಮೇಲೆ ತಮಿಳುನಾಡನ 'ಕ್ಯೂ' ಬ್ರಾಂಚ್ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ಐವರು 'ಅಲ್‌ಉಮ್ಮಾ' ಉಗ್ರರು ಬಲಿಯಾದರು.

ಅವತ್ತು ಹತರಾದ ಇಸ್ಲಾಮಿಕ್ ಅಲ್‌ಉಮ್ಮಾಗಳ ಬಳಿ ಇಸ್ರೋ, ಇನ್‌ಫೋಸಿಸ್, ಇಸ್ರೋ ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಕಟ್ಟಡಗಳ ನಕ್ಷೆ ಮತ್ತು ವೀಡಿಯೋ ಟೇಪುಗಳಿದ್ದವು. ಇದಾದ ನಂತರ ಅದೇ ಟಾಟಾ ಇನ್‌ಸ್ಟಿಟ್ಯೂಟ್ ಮೇಲೆ ಉಗ್ರರ ದಾಳಿಯಾಯಿತು. ಹೀಗೆ ಒಂದಲ್ಲಾ ಒಂದು ಘಟನೆ ನಡೆದು ರಾಜ್ಯದಲ್ಲಿ ಟೆರರಿಸ್ಟ್ ಕೂಟಗಳು ಸಕ್ರಿಯವಾಗಿರುವುದನ್ನು ಎತ್ತಿ ತೋರುತ್ತಿದ್ದರೂ ರಾಜ್ಯದ ಇಂಟಲಿಜೆನ್ಸ್ ಮಾತ್ರ ರೇಣುಕಾಚಾರ್ಯನ ರಾಸಲೀಲೆಯನ್ನು ಹಿಂಬಾಲಿಸುತ್ತದೆ. ತಮ್ಮ ಗೂಢಚರ್ಯೆ ವಿಫಲವಾಗಿಲ್ಲ ಎನ್ನುವ ಗೃಹಮಂತ್ರಿ, ನನ್ನ ಯಶಸ್ವಿ ಆಡಳಿತವನ್ನು ಸಹಿಸದೇ ಮಾಡಿದ ಪಿತೂರಿ' ಎನ್ನುವ ಮುಖ್ಯಮಂತ್ರಿ. ಇಬ್ಬರದೂ ಪರಸ್ಪರ ವಿರೋಧಾಭಾಸದ ಅಸಂಬದ್ಧ ಹೇಳಿಕೆಯೇ. ಅಹಮದಾಬಾದ್ ಸ್ಫೋಟ ಮತ್ತು ರಕ್ತಪಾತಕ್ಕೆ ಹೋಲಿಸಿದರೆ ಬೆಂಗಳೂರಿನದ್ದು ಎಚ್ಚರಿಕೆಯಂತೆ ಅಥವಾ ಇನ್ನೂ ಪಳಗಿಲ್ಲದ ಉಗ್ರರ ಕೃತ್ಯದಂತೆ ಕಾಣುತ್ತದೆ. ಇದರರ್ಥ ಮುಂದೊಂದು ದಿನ ದೊಡ್ಡ ಅನಾಹುತ ಕಾದಿದೆ!

ಅಥವಾ ಕೊಟ್ಟ ಸ್ಯಾಂಪಲ್ಲಿಗೆ ಸರ್ಕಾರ ಹೇಗೆ ರಿಯಾಕ್ಟ್ ಮಾಡುತ್ತದೆ? ಯಾವ ರೀತಿ ಸಜ್ಜಾಗಿದೆ? ಅದರ ಶಕ್ತಿ ಸಾಮರ್ಥ್ಯವೇನು? ಎಂಬುದನ್ನು ಅಳೆಯುವ ತಂತ್ರವಿದು. ದುರಂತ ಸಂಭವಿಸಿದಾಗಷ್ಟೇ ಗಡಿಬಿಡಿ ವೀರಾವೇಶದ ಪ್ರತಾಪ ತೋರುವ ಸರ್ಕಾರ ಕೆಲವೇ ದಿನಕ್ಕದನ್ನು ಮರೆತು ಬಿಡುತ್ತದೆ. ಪೊಲೀಸರು ಕೂಡ ತಮ್ಮ ಕಟ್ಟೆಚ್ಚರಿಕೆಯನ್ನು ಮರೆತು ರಿಲ್ಯಾಕ್ಸ್ ಆಗುತ್ತಾರೆ. ಅಂಥ ಸಮಯವನ್ನೇ ಕಾದು ಉಗ್ರ ತನ್ನೆಲ್ಲಾ ಶಕ್ತಿ ತಂತ್ರ ಮತ್ತು ಸಾಮರ್ಥ್ಯವನ್ನು ಬಳಸಿ ಎರಗುತ್ತಾನೆ. ಆಗ ಅದು ಕ್ರೂಡ್ ಬಾಂಬ್ ಆಗಿರುವುದಿಲ್ಲ.

ಇಂಥದೊಂದು ಅನಿರೀಕ್ಷಿತ ದಾಳಿಗೆ ನಮ್ಮ ಪೊಲೀಸರು ಮತ್ತು ಗುಪ್ತಚಾರ ಇಲಾಖೆ ಸಜ್ಜಾಗಿದೆಯೇ?

ಕಮಾಂಡೋ ತರಬೇತಿಯಿಲ್ಲದಿದ್ದರೂ ಕಮಾಂಡೋ ವೇಷ ದಾರಿ ಮೀಸಲು ಪೊಲೀಸರು, ಭಯೋತ್ಪಾದನಾ ನಿಗ್ರಹದಳ ಎಂಬ ಹೆಸರಿನಡಿ ಅದೇ ಮಾಮೂಲಿಯ ಸಿವಿಲ್ ಪೊಲೀಸರು, ಉಗ್ರರ ಕಾರ್ಯತಂತ್ರ, ಬಳಸುವ ಆಯುಧ ಸ್ಫೋಟಕಗಳ ಜ್ಞಾನವೇ ಇಲ್ಲದವರು, ಕೇವಲ ಗನ್ ಪೌಡರ್‌ನ ವಾಸನೆಯನ್ನಷ್ಟೇ ಹಿಡಿಯಬಲ್ಲ ಆರ್‌ಡಿಎಕ್ಸ್‌ನಂಥ ವಿನಾಶಕಾರಿ ಸ್ಫೋಟಕಗಳ ಪರಿಚಯ ವಾಸನೆಯೇ ಅಪರಿಚಿತವಾಗಿರುವ ಡಾಗ್ ಸ್ಕ್ವಾಡ್, ಮುಖ್ಯಮಂತ್ರಿಯ ಹಿತಾ ಕಾಯುವುದನ್ನೇ ಗೂಢಚರ್ಯೆ ಎಂದುಕೊಂಡ ಇಂಟಲಿಜೆನ್ಸ್, ಅದಕ್ಕೆ ಶಿಕ್ಷಾರ್ಥವಾಗಿ ಎತ್ತಂಗಡಿಯಾದ ಪೊಲೀಸ್ ಅಧಿಕಾರಿ ವರ್ಗ, ಟ್ರಾನ್ಸ್‌ಫರ್ ದಂಧೆಯಲ್ಲೇ ನಿರತ ಪೊಲೀಸು ಮಂತ್ರಿ, ಹೋಮ ಯಜ್ಞದಲ್ಲೇ ಕಾಲ ಕಳೆಯುವ ಮುಖ್ಯಮಂತ್ರಿ ಎಲ್ಲವೂ ಕೇಡುಗಾಲಕ್ಕೆ ಹೇಳಿ ಮಾಡಿಸಿದಂತಿವೆ.

ಇವತ್ತು ಮೋರಿಯಲ್ಲೋ ಖಾಲಿ ಸೈಟಿನಲ್ಲೋ ಬಾಂಬ್ ಇಟ್ಟವನು ನಾಳೆ ವಿಧಾನಸೌಧಕ್ಕೇ ಇಡಲಾರ ಎಂಬುದಕ್ಕೆ ಏನು ಗ್ಯಾರಂಟಿ?

ಇಸ್ಲಾಮಿಕ್ ಉಗ್ರನೋ, ಆರೆಸ್ಸೆಸ್ ವ್ಯಗ್ರನೋ ನಿರ್ಧರಿಸುವವರ್‍ಯಾರು?

■ ರಾ.ಸೋ.

–ಅದೆಂಥ ಉನ್ಮಾದ, ಆಕ್ರೋಶಗಳಿವೆ ಈ ಮಾತುಗಳಲ್ಲಿ ...ೋಡಿ. ಈ ತಲೆಕೆಟ್ಟ ಭಯೋತ್ಪಾದಕರಿಗೆ ಭಾರತೀಯರೆಲ್ಲರೂ ...ುಸ್ಲಿಮರ ವಿರೋಧಿಗಳಂತೆ ಕಾಣುತ್ತಿದ್ದಾರೆ. ಹಾಗೆ ನೋಡಿದರೆ ...ಾಂಗ್ರೆಸ್, ಕಮ್ಯುನಿಸ್ಟರಿಗೆ, ಜನತಾದಳ ಅಥವಾ ತೆಲುಗು ...ದೇಶಂ, ಡಿಎಂಕೆಯಂಥ ರಾಜಕೀಯ ಪಕ್ಷಗಳಿಗೆ ಮುಸ್ಲಿಂ ...ದ್ವೇಷ ಅಥವಾ ಹಿಂದೂತ್ವ ಅಜೆಂಡಾಗಳು ಎಂದೂ ...ಪ್ರಧಾನವಾಗಿರಲಿಲ್ಲ. ಈಗಲೂ ಆಗಿಲ್ಲ. ಇವೆಲ್ಲವೂ ...ಭಾರತೀಯರ ರಾಜಕೀಯ ಪಕ್ಷಗಳೇ ತಾನೆ. ಆರ್‌ಎಸ್‌ಎಸ್, ...ವಿಶ್ವ ಹಿಂದೂ ಪರಿಷತ್, ಶಿವಸೇನೆ, ಭಜರಂಗ ದಳಗಳಿಗೆ ...ಸತ್ತವರ ರಾಜಕೀಯ ಪಕ್ಷ ಬಿಜೆಪಿಗೆ ಮಾತ್ರ ಸ್ಪಷ್ಟ ...ಗೋಚರವಾಗುವಂಥ ಮುಸ್ಲಿಂ, ಕ್ರಿಶ್ಚಿಯನ್ ಹಾಗೂ ದಲಿತ ...ವಿರೋಧಿ ಅಜೆಂಡಾಗಳಿವೆ. ವಸ್ತುಸ್ಥಿತಿ ಹೀಗಿರುವಾಗ ಎಲ್ಲಾ ...ಭಾರತೀಯರೂ ಒಂದೇ ಎಂತಲೋ ಅಥವಾ ...ಭಾರತೀಯರೆಲ್ಲರೂ ಹಿಂದೂ ಕೋಮುವಾದಿಗಳೆಂದೋ ...ಭಾವಿಸಿ ಸಿಕ್ಕ ಸಿಕ್ಕಲ್ಲಿ ಬಾಂಬ್ ಸ್ಫೋಟಿಸುತ್ತಾ ಅಮಾಯಕರನ್ನ ಕೊಲ್ಲುತ್ತಾ ...ೋದರೆ ಅಂಥವರನ್ನು ಹಿಡಿದು ಮಟ್ಟ ಹಾಕಲೇಬೇಕಾಗುತ್ತದೆ.



ಪೊಲೀಸರ ಪ್ರಕಾರ ಈ ಮುಜಾಹಿದ್ದೀನ್‌ಗಳಿಗೆ ಕಾಶ್ಮೀರದ ಹರ್ಕತ್-...ಲ್-ಜಿಹಾದ್ ಎ-ಇಸ್ಲಾಮಿ ಉಗ್ರ ಸಂಘಟನೆಯ ನೆರವು ಸಿಗುತ್ತಿದೆ. ...007ರ ನವೆಂಬರ್‌ನಲ್ಲಿ ಉತ್ತರ ಪ್ರದೇಶದ ವಾರಣಾಸಿ ಹಾಗೂ ಲಕ್ನೋಗಳಲ್ಲಿ ...3 ಮಂದಿ ಸತ್ತಿದ್ದರು. ಆಗ ಪೊಲೀಸರು ನಿಷೇಧಿತ ಸಿಮಿ ...ಸಂಘಟನೆಯ ಶಮೀಂ, ಖಾಲೀದ್, ಮುಜಾಹಿದ್, ...ಜಂಗೀರ್, ಯುನಾನಿ ವೈದ್ಯ ಮೊಹಮ್ಮದ್ ತಾರೀಖ್ ...ಎಂಬುವರನ್ನು ಬಂಧಿಸಿದ್ದರು. ನಂತರ ತನಿಖೆಯ ವೇಳೆ ...ರು ಹರ್ಕತ್ ಹಾಗೂ ಬಾಂಗ್ಲಾದ ಹುಜಿ ಹೆಸರು ...ಯಬಿಟ್ಟಿದ್ದರು. ಅಷ್ಟರೊಳಗೆ ಹುಜಿ ಭಯೋತ್ಪಾದಕ ...ಸಂಘಟನೆಯ ಹೆಸರೂ ಜೈಪುರ ಸ್ಫೋಟದಲ್ಲಿ ಕೇಳಿಬಂದಿತ್ತು.

[illegible]

ಈಗ ಬೆಂಗಳೂರು ಮತ್ತು ಅಹಮದಾಬಾದ್ ಸ್ಫೋಟಗಳ [illegible] ಬಗ್ಗೆ ಹೋಲಿಸಿ ನೋಡಲಾಗುತ್ತಿದೆ. [illegible] ಹಾಗೂ ಸ್ಫೋಟದ ತೀವ್ರತೆ ಆಧರಿಸಿ ಕೆಲ [illegible] ಗೋಚರವಾಗಿದೆ. ಬೆಂಗಳೂರಿನ ಬಾಂಬ್‌ಗಳು [illegible] ಕ್ರೂಡ್ ಬಾಂಬ್ ತರಹದ್ದಾಗಿವೆ. ಆದರೆ ಅಹಮದಾ...ಬಾದಿನಲ್ಲಿ ಸ್ಫೋಟಗೊಂಡ ಬಾಂಬ್‌ಗಳಲ್ಲಿ plastic



device ಬಳಸಲಾಗಿದ್ದು ಮಿಲಿಟರಿ ಲೆವೆಲ್‌ನಲ್ಲಿ ಬಳಕೆಯಾಗುವಂಥ ಸ್ಫೋಟಗಳವು. ಅಂದರೆ ಉಗ್ರರ ತಯಾರಿ ಪೊಲೀಸರು ಊಹಿಸಿರುವುದಕ್ಕಿಂತ ಹೆಚ್ಚೇ ಇದೆ ಎಂದು ಭಾಸವಾಗುತ್ತಿದೆ. ಕರ್ನಾಟಕದಲ್ಲಿ ಕಳೆದ ನಾಲ್ಕಾರು ವರ್ಷಗಳಲ್ಲಿ ಪೊಲೀಸರು ಉಗ್ರಗಾಮಿ ಸಂಪರ್ಕಗಳಿದ್ದವೆಂಬ ಅನುಮಾನದ ಮೇಲೆ ಇದುವರೆಗೂ ನೂರಾರು ಜನರನ್ನು ಬಂಧಿಸಿದ್ದಾರೆ. ವ್ಯಾಪಕ ತನಿಖೆಗಳಾಗಿವೆ. ಈಗ ಕೋಕಾ-ಪೋಟಾದಂತಹ ಕಠಿಣ ಕಾಯ್ದೆಗಳ ಜಾರಿಗೂ ಬಿಜೆಪಿ ಒತ್ತಾಯಿಸುತ್ತಿದೆ. ಆದರೆ ಸೂಯಿಸೈಡ್ ಬಾಂಬರ್‌ಗಳಾಗಲೂ ತಯಾರಿರುವವರನ್ನು ಈ ಕಾಯ್ದೆಗಳು ಎಷ್ಟರಮಟ್ಟಿಗೆ ತಡೆಯಲು ಸಾಧ್ಯ. ಭಯೋತ್ಪಾದಕ ದುಷ್ಕೃತ್ಯಗಳನ್ನು ದಮನಿಸುವ ಜೊತೆಗೆ ಯಾವುದೇ ಸಮುದಾಯದ ಯುವ ಜನತೆ ಹತಾಶೆ ಅಥವಾ ರೊಚ್ಚಿನಿಂದ ಅಂತ ಗುಂಪುಗಳನ್ನು ಸೇರದಂತೆ ನೋಡಿಕೊಳ್ಳಬೇಕಾದ ಕರ್ತವ್ಯ ಸರ್ಕಾರ ಮತ್ತು ಪೊಲೀಸರ ಮೇಲಿದೆ. ಈಗ ಇಡೀ ದೇಶದ ಜನತೆ ಬಾಂಬ್ ದಾಳಿಗಳ ಭೀತಿಗೆ ಸಿಲುಕಿರುವಾಗ ನರೇಂದ್ರ ಮೋದಿ, ಅಡ್ವಾಣಿ ತರದವರು 'ಇದು ಭಾರತ ದೇಶದ ಮೇಲೆ ಉಗ್ರರು ಘೋಷಿಸಿರುವ ಯುದ್ಧ' ಎಂದು ಅಪೂರ್ಣ ಸತ್ಯ ಹೇಳುತ್ತಿದ್ದಾರೆ. ವಾಸ್ತವದಲ್ಲಿ ಈ ದುಷ್ಕೃತ್ಯಗಳ ಮೂಲ ಪ್ರೇರಣೆಯಿರುವುದು ಇದುವರೆಗೂ ಸಂಘ ಪರಿವಾರ ನಡೆಸಿಕೊಂಡು ಬಂದಿರುವ ದೌರ್ಜನ್ಯ ಹತ್ಯಾಕಾಂಡ ಹಾಗೂ ಅನ್ಯಧರ್ಮ ದ್ವೇಷದ ರಾಜಕೀಯದಲ್ಲಿ. ಈ ಭಯೋತ್ಪಾದಕ ಕೃತ್ಯಗಳನ್ನು ಕಾನೂನು, ರಕ್ಷಣಾ ಪಡೆಗಳ ನೆರವಿನಿಂದ ದಮನಿಸುವುದರ ಜೊತೆ ಜೊತೆಯಾಗಿಯೇ ಜನರು ಸಂಘ ಪರಿವಾರದ ದ್ವೇಷದ ರಾಜಕೀಯದಿಂದಲೂ ದೂರ ನಿಲ್ಲುವುದರಿಂದ ಮಾತ್ರ ಇದಕ್ಕೆ ಪೂರ್ಣ ವಿರಾಮ ಹಾಕಲು ಸಾಧ್ಯವೆಂಬುದನ್ನು ಜನ ಆದಷ್ಟು ಬೇಗ ಅರಿಯಬೇಕಿದೆ.

ಇಲ್ಲದಿದ್ದರೆ ಸರಿ ತಪ್ಪುಗಳ, ಕುತಂತ್ರಗಳಿಗೆ ಅಮಾಯಕರ ನಡುವಿನ ವ್ಯತ್ಯಾಸವೇ ಗೊತ್ತಿರದ ಭಯೋತ್ಪಾದನೆಯ ಪೆಡಂಭೂತ ಎಲ್ಲರನ್ನೂ ಬಲಿ ತೆಗೆದುಕೊಳ್ಳಲಿದೆ.

ಈ ಮುಜಾಹಿದ್ದೀನ್‌ಗಳು 'stop us if you can' ಎಂದು ಸವಾಲು ಹಾಕಿದ್ದಾರೆ. ಹಿಂದೂ ಕೋಮುವಾದಿಗಳನ್ನು ತಿರಸ್ಕರಿಸದೆ ನಾವಿದನ್ನು ಸಾಧಿಸಲು ಅಸಾಧ್ಯ.

■ ಬಳಿದಾಳೆ ಪಾರ್ವತೀಶ

ಕನ್ನಡಿಗರು ಏನು ಮಾಡಬಹುದು?

ಬೆಂಗಳೂರಿನಲ್ಲಿ ನಡೆದ ಬಾಂಬ್ ಸ್ಫೋಟಗಳಿಗೆ ಯಾರು ಕಾರಣ ಎಂಬುದು ಇನ್ನೂ ಗೊತ್ತಾಗಿಲ್ಲ. ಇಂಥ ಸಂದರ್ಭದಲ್ಲಿ ಮುಂದೆ ಅಮಾಯಕ ಕನ್ನಡಿಗರು ಇಂಥ ಘೋರ ದುಷ್ಕೃತ್ಯಗಳಿಗೆ ಬಲಿಯಾಗಬಾರದೆಂದಿದ್ದಲ್ಲಿ, ನಮ್ಮಗಳ ಪ್ರಾಣ, ಆಸ್ತಿ-ಪಾಸ್ತಿ ನಾಶವಾಗದೆ ನೆಮ್ಮದಿಯಾಗಿ ಉಳಿಯಲು ಈಗ ಕೆಲವು ದೃಢ ತೀರ್ಮಾನಗಳನ್ನು ಮಾಡಲೇಬೇಕಿದೆ.

* ಭಯೋತ್ಪಾದಕ ಚಟುವಟಿಕೆಗಳನ್ನು ತಡೆಯುವ ನಿಟ್ಟಿನಲ್ಲಿ ಅನುಮಾನಾಸ್ಪದವಾಗಿ ಕಂಡುಬರುವ ವ್ಯಕ್ತಿ ಗುಂಪುಗಳ ಬಗ್ಗೆ ಸರ್ಕಾರಕ್ಕೆ ಮಾಹಿತಿ ನೀಡುವುದು.
* ಯಾವುದೇ ಸಂದರ್ಭದಲ್ಲೂ ಸಮಾಜ ವಿರೋಧಿ ಶಕ್ತಿಗಳೊಂದಿಗೆ ಕೈಜೋಡಿಸದಿರುವುದು.
* ಮುಸ್ಲಿಂ, ಕ್ರಿಶ್ಚಿಯನ್ ಹಾಗೂ ದಲಿತ-ಹಿಂದುಳಿದ ಸಮುದಾಯದವರ ಮೇಲೆ ಹಿಂದೂ ಕೋಮುವಾದಿಗಳು ನಡೆಸುತ್ತಿರುವ ದಾಳಿ, ದೌರ್ಜನ್ಯಗಳಿಗೆ ಬೆಂಬಲ ನೀಡದೆ ದೂರ ನಿಲ್ಲುವುದು.
* ಕರ್ನಾಟಕದ ಸಾಮಾಜಿಕ ಶಾಂತಿ ಕದಡುವಂತಹ ಧಾರ್ಮಿಕ ದ್ವೇಷ, ಸಾಮಾಜಿಕ ತಾರತಮ್ಯ ಪ್ರತಿಪಾದಿಸುವ ಪುರೋಹಿತಶಾಹಿ ದುಷ್ಟ ಗುಂಪುಗಳ ಹುನ್ನಾರಗಳ ವಿರುದ್ಧ ಸೆಟೆದು ನಿಲ್ಲುವುದು.
* ನಾವು ಅಶಾಂತಿಯನ್ನು ಹಬ್ಬಿಸುವ ಮೂಲಕ ಶಾಂತಿಯನ್ನು ಸಾಧಿಸಲಾಗುವುದಿಲ್ಲ. ಸಂಘ ಪರಿವಾರದ ಕೋಮು ದ್ವೇಷ, ಜಾತಿ ತಾರತಮ್ಯಗಳ ತಳಹದಿಯಲ್ಲೇ ಅಶಾಂತಿಯನ್ನು ಹಬ್ಬಿಸಿ, ಬೆಳೆಸುವ ಹುನ್ನಾರವಿದೆ.

ಹಾಗಾಗಿ ನಮಗೆ ಶಾಂತಿ-ನೆಮ್ಮದಿ ಬೇಕಾದಲ್ಲಿ ಹಿಂದೂ ಪುರೋಹಿತ ಶಾಹಿ ಕೋಮುವಾದಿಗಳನ್ನು ತಿರಸ್ಕರಿಸಬೇಕಾಗಿದೆ.

* ಕರ್ನಾಟಕದಲ್ಲಿ ಬಾಬಾಬುಡನ್‌ಗಿರಿ, ಹುಬ್ಬಳ್ಳಿ ಈದ್ಗಾ ಮೈದಾನ, ಮತಾಂತರ ಮುಂತಾದ ನಕಲಿ ಸಮಸ್ಯೆಗಳನ್ನು ಸೃಷ್ಟಿಸುತ್ತಿರುವ ಹಿಂದೂ ಕೋಮುವಾದಿಗಳು ತಮ್ಮ ಸ್ವಾರ್ಥಸಾಧನೆಗಾಗಿ ಅಮಾಯಕ ಕನ್ನಡಿಗರು ರಕ್ತ ಹರಿಸುವಂತೆ ಮಾಡುತ್ತಿದ್ದಾರೆ. ನಾವು ಇದರ ಬಗ್ಗೆ ಇನ್ನಾದರೂ ಎಚ್ಚರಗೊಳ್ಳಬೇಕಲ್ಲವೆ?
* ಹಿಂದೂ ಕೋಮುವಾದಿಗಳು ಕರ್ನಾಟಕದ ಜನತೆಯ ನೈಜ ಪ್ರತಿನಿಧಿಗಳಲ್ಲ. ಜನ ಇದರಿಂದ ಆದಷ್ಟು ಬೇಗನೆ ಪ್ರತ್ಯೇಕಗೊಳ್ಳಬೇಕಲ್ಲವೆ?

ಪೊಲೀಸರು ಮಾಡಬೇಕಾದುದೇನು?

ಇನ್ನಷ್ಟು ಗಸ್ತು ತಿರುಗುವುದು, ಗೂಢಚಾರ್ಯೆ ಜಾಲ ಗಟ್ಟಿಗೊಳಿಸುವುದು, ಪೋಟಾ, ಕೋಕಾ ಕಾಯ್ದೆಗಳನ್ನು ಬಳಸಿಕೊಂಡು ಉಗ್ರಗಾಮಿಗಳ ಹುಟ್ಟಡಗಿಸಬೇಕೆಂದು ಒತ್ತಾಯಿಸುವ ಮಾತುಗಳು ಕೇಳಿಬರುತ್ತಿವೆ. ಆದರೆ ಸೂಸೈಡ್ ಬಾಂಬರ್‌ಗಳಾಗಲು ತಯಾರಾಗಿರುವ ಒಬ್ಬಾತನನ್ನು ಈ ಕಾಯ್ದೆಗಳು ನಿಯಂತ್ರಿಸಲು ಸಾಧ್ಯವೆ? ಅದರ ಬದಲಾಗಿ ಎಲ್ಲರಂತೆ ಸಹಜ ಜೀವನ ನಡೆಸಲು ಬಯಸುವ ಜನ ಅನಗತ್ಯವಾಗಿ ಕಿರುಕುಳ, ದೌರ್ಜನ್ಯಕ್ಕೆ ಬಲಿಯಾಗದಂತೆ ನೋಡಿಕೊಳ್ಳುವ ಮೂಲಕ ಮಾತ್ರ ಇನ್ನಷ್ಟು ಉಗ್ರಗಾಮಿಗಳು ಹುಟ್ಟಿಕೊಳ್ಳದಂತೆ ತಡೆಯಬಹುದು.

* ಕಾಯ್ದೆ ಕಾನೂನುಗಳನ್ನು ತಮ್ಮ ಕೈಗೆ ತೆಗೆದುಕೊಂಡು ಅಲ್ಪಸಂಖ್ಯಾತರಿಗೆ ಕಿರುಕುಳ ನೀಡುತ್ತಿರುವ 'ಹಿಂದೂವಾದಿ'ಗಳನ್ನು ಪೊಲೀಸರು ಮೊದಲು ನಿಯಂತ್ರಿಸಬೇಕಿದೆ.
* ಸರ್ಕಾರ, ಪೊಲೀಸರು ಹಾಗೂ ಕಾನೂನು ಎಲ್ಲರಿಗೂ ಒಂದೆ. ಅಲ್ಲಿ ತಾರತಮ್ಯವಾಗಲು ಅವಕಾಶವಿಲ್ಲವೆಂಬ ಭರವಸೆಯನ್ನು ಕರ್ನಾಟಕ ಸಮಾಜದ ಪ್ರತಿ ಪ್ರಜೆಗೂ ನೀಡುವುದು ಪೊಲೀಸರ ಕರ್ತವ್ಯವಲ್ಲವೆ?
* ಕರ್ನಾಟಕ ಪೊಲೀಸರು ಹಿಂದೂ ಕೋಮುವಾದಿಗಳ ಪರ ಸೌಮ್ಯ ಧೋರಣೆ ತಾಳುತ್ತಿದ್ದಾರೆಂಬ ಅನ್ಯ ಧರ್ಮೀಯರ ಅನುಮಾನವನ್ನು ಮೊದಲು ನಿವಾರಿಸಬೇಕಿದೆ. ಇದು ಕೇವಲ ಸಂವಿಧಾನದ ಆಶಯ, ಕಾನೂನು ಪರಿಪಾಲನೆಯ ಪ್ರಶ್ನೆಯಲ್ಲ. ಬದಲಾಗಿ ಸಮಸ್ತ ಜನರ ಹಿತರಕ್ಷಣೆಯ ವಿಚಾರವೂ ಆಗಿದೆ. ಮುಸ್ಲಿಂ ಉಗ್ರಗಾಮಿಗಳ ವಿರುದ್ಧ ಹೇಗೆ ನಿರ್ದಯೆಯಿಂದ ಕಾನೂನು ಕ್ರಮ ವಹಿಸಬೇಕಿದೆಯೋ ಅದೇ ರೀತಿ ಹಿಂದೂ ಕೋಮುವಾದಿ ಉಗ್ರಗಾಮಿಗಳ ವಿರುದ್ಧವೂ ಪೊಲೀಸರು ತಾರತಮ್ಯವಿಲ್ಲದ ಕಾನೂನು ಕ್ರಮ ತೆಗೆದುಕೊಳ್ಳಬೇಕಿದೆ.

ಕರ್ನಾಟಕದಲ್ಲಿ ಶಾಂತಿ ನೆಮ್ಮದಿಯ ವಾತಾವರಣ ಮತ್ತೆ ಸ್ಥಾಪನೆಯಾಗಬೇಕೆಂದರೆ ಕೇವಲ ಒಂದು ಗುಂಪಿನ ಜನರು ಮಾತ್ರ ಅಶಾಂತಿಗೆ ಹೊಣೆ ಎಂಬ ಸರಳ ತೀರ್ಮಾನಕ್ಕೆ [illegible] ■

ಮೈಸೂರು-ಜೆಡಿಎಸ್ ಕಾರ್ಪೊರೇಟರ್‌ಗಳು ಬಿಜೆಪಿಗೆ?

ಐತಿಹಾಸಿಕ ನಗರವೆನಿಸಿಕೊಂಡಿರುವ ಮೈಸೂರಿನಲ್ಲಿ ಹೊಸದೊಂದು ಇತಿಹಾಸ ಸೃಷ್ಟಿಯಾಗುವ ಲಕ್ಷಣಗಳು ಕಂಡುಬರುತ್ತಿದೆ. ಅದೇನೆಂದರೆ ಜಾತ್ಯತೀತ ಜನತಾದಳದ ನಗರಪಾಲಿಕೆಯ ಸುಮಾರು 12 ಜನ ಸದಸ್ಯರುಗಳು ಬಿಜೆಪಿಗೆ ಸೇರ್ಪಡೆಗೊಳ್ಳುವುದು; ಮೊದಲ ಬಾರಿಗೆ ಬಿಜೆಪಿ ಪಾಲಿಕೆಯ ಅಧಿಕಾರದ ಚುಕ್ಕಾಣಿ ಹಿಡಿಯುವುದು!

ಜೆಡಿಎಸ್‌ನ ನಗರಾಧ್ಯಕ್ಷ ಟಿ. ದೇವರಾಜ್ ಸೇರಿದಂತೆ ಈಗಾಗಲೇ ಒಂಬತ್ತು ಜನ ಪಾಲಿಕೆ ಸದಸ್ಯರು ಬಿಜೆಪಿಗೆ ಜಿಗಿಯಲು ಸಿದ್ಧರಾಗಿದ್ದು ಪಕ್ಷಾಂತರ ನಿಷೇಧ ಕಾಯ್ದೆ ಪ್ರಕಾರ 12 ಜನರು ಪಕ್ಷಾಂತರ ಮಾಡಬೇಕಾಗಿರುವುದರಿಂದ, ಉಳಿದ ಪಕ್ಷಾಂತರಿಗಳಿಗಾಗಿ ಹುಡುಕಾಟ ನಡೆದಿದೆ.







ಮಹಾನಗರಪಾಲಿಕೆಯ ವ್ಯಾಪ್ತಿಗೆ ಒಳಪಡುವ, ಪಕ್ಷಾಂತರ ನಿಷೇಧ ಕಾಯಿದೆ ಪ್ರಕಾರ 3ನೇ 1ಭಾಗದಷ್ಟು ಸದಸ್ಯರು ಪಕ್ಷಾಂತರ ಮಾಡಬಹುದಾದರೂ ಅಷ್ಟು ಜನ ಹೋದರೆ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲದಿರುವುದರಿಂದ 12 ಜನ ಸದಸ್ಯರನ್ನು ಕರೆದುಕೊಂಡು ಹೋಗುವ ಕಸರತ್ತು ಜಾತ್ಯತೀತ ಜನತಾದಳದಲ್ಲಿ ನಡೆಯುತ್ತಿದೆ.

ಕಳೆದ ಮಹಾನಗರಪಾಲಿಕೆಯ ಚುನಾವಣೆಯಲ್ಲಿ ಕಾಂಗ್ರೆಸ್ 22, ಬಿಜೆಪಿ ಮತ್ತು ಜಾತ್ಯತೀತ ಜನತಾದಳ ತಲಾ 18 ಸ್ಥಾನಗಳನ್ನು ಗಳಿಸಿದ್ದರೆ, ಬಂಡಾಯ ಅಭ್ಯರ್ಥಿಗಳಾಗಿದ್ದ ಬಿಜೆಪಿಯ ಒಬ್ಬರು, ಜಾತ್ಯತೀತ ಜನತಾದಳದ ಒಬ್ಬರು, ಕಾಂಗ್ರೆಸ್‌ನ ಐವರು ಗೆದ್ದು ಬಂದಿದ್ದಾರೆ. ಆಗ ಬಿಜೆಪಿ, ಜಾತ್ಯತೀತ ಜನತಾದಳದ ಸಮ್ಮಿಶ್ರ ಸರ್ಕಾರ ಮುಂದುವರೆಯುತ್ತದೆ. ಅದೇರೀತಿ ಮೈಸೂರು ಮಹಾನಗರಪಾಲಿಕೆಯಲ್ಲಿಯೂ ಇವೆರಡೂ ಪಕ್ಷಗಳು ಜತೆಯಾಗಿ ಅಧಿಕಾರ ಹಿಡಿಯುತ್ತವೆ ಎಂದು ನಿರೀಕ್ಷಿಸಲಾಗಿತ್ತು.


ಆದರೆ ಬಿಜೆಪಿಗೆ ಜಾತ್ಯತೀತ ಜನತಾದಳ "ಕೈ" ಕೊಟ್ಟಿದ್ದರಿಂದ ನಗರಪಾಲಿಕೆಯ ಸಮ್ಮಿಶ್ರ ಆಡಳಿತಕ್ಕೂ ಅವಕಾಶ ಸಿಗದೆ, ಈಗ ಕಾಂಗ್ರೆಸ್ ಅಧಿಕಾರದಲ್ಲಿದ್ದು ಅಯೂಬ್‌ಖಾನ್ ಮೇಯರ್ ಆಗಿದ್ದರೆ ಶ್ರೀಮತಿ ಕಮಲಾ ವೆಂಕಟೇಶ್ ಉಪಮೇಯರ್ ಆಗಿದ್ದಾರೆ. ಅಧಿಕಾರ ಹಿಡಿಯಲು ಹೊರಟಿದ್ದ ಎರಡೂ ಪಕ್ಷಗಳೂ ವಿರೋಧಪಕ್ಷಗಳಾಗಿವೆ.


ಜಾತ್ಯತೀತ ಜನತಾದಳ ಕಾರ್ಪೊರೇಟರ್‌ಗಳು ಸಾಮೂಹಿಕವಾಗಿ ಬಿಜೆಪಿ ಸೇರಲು ಹೊರಟಿರುವುದಕ್ಕೆ ಎರಡು ಪ್ರಮುಖ ಕಾರಣಗಳಿವೆ. ಒಂದು ಅಧಿಕಾರ ಹಿಡಿಯುವುದು, ಮತ್ತೊಂದು ಮಾಜಿ ಪ್ರಧಾನ ಮಂತ್ರಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ.ದೇವೇಗೌಡರ ಪುತ್ರ ವ್ಯಾಮೋಹಕ್ಕೆ ತಿರುಗೇಟು ನೀಡುವುದು.


ಹೆಚ್.ಡಿ.ದೇವೇಗೌಡರು ತಮ್ಮ ಪ್ರಭಾವ ಬೀರಿ, ತಂತ್ರಗಳನ್ನು ಹೆಣೆದು ಸ್ಥಾಯಿ ಸಮಿತಿ ಅಧ್ಯಕ್ಷ ಸ್ಥಾನಗಳನ್ನಾದರೂ ಕೊಡಿಸುತ್ತಾರೆಂದು ದಳದ ಕಾರ್ಪೊರೇಟರ್‌ಗಳು ನಿರೀಕ್ಷೆಯನ್ನಿಟ್ಟುಕೊಂಡಿದ್ದರು. ಆದರೆ ಗೌಡರು ಈ ಬಗ್ಗೆ ತಲೆಯನ್ನೇ ಕೆಡಿಸಿಕೊಂಡಿಲ್ಲ, ತುಟಿ ಬಿಚ್ಚುತ್ತಿಲ್ಲ. ಅವರು ಸದಾ ತಮ್ಮ ಕುಟುಂಬದ ಬಗ್ಗೆ ತಮ್ಮ ಮಕ್ಕಳ ಬಗ್ಗೆಯೇ ಕನವರಿಸುತ್ತಾರೆಂಬ ಸಿಟ್ಟು ಕಾರ್ಪೊರೇಟರ್‌ಗಳ ಪಕ್ಷಾಂತರಕ್ಕೆ ನಾಂದಿ ಹಾಡಿದೆ.

ಅಣು ಒಪ್ಪಂದ ಬಿಕ್ಕಟ್ಟಿನಿಂದಾಗಿ ಕೇಂದ್ರ ಸರ್ಕಾರ ವಿಶ್ವಾಸಮತ ಕೋರಬೇಕಾದ ಸಂದರ್ಭದಲ್ಲಿ ಹೆಚ್.ಡಿ. ದೇವೇಗೌಡರು ಯುಪಿಎ ಸರ್ಕಾರವನ್ನು ಬೆಂಬಲಿಸುತ್ತಾರೆ, ಚಾಮರಾಜನಗರದ ಸಂಸದ ಶಿವಣ್ಣನವರನ್ನು ಕೇಂದ್ರ ಸಚಿವರನ್ನಾಗಿಸುತ್ತಾರೆಂಬ ಅಭಿಪ್ರಾಯ ಜನತಾದಳದ ಪಾಳೆಯದಲ್ಲಿತ್ತು. ಬೆಂಗಳೂರಿನಲ್ಲಿ ನಡೆದ ಪಕ್ಷದ ಸಭೆಯಲ್ಲೂ ಕೂಡಾ ಇದನ್ನೇ ತೀರ್ಮಾನಿಸಲಾಗಿತ್ತು. ಇದಕ್ಕೆ ಗೌಡರು ಒಪ್ಪಿಕೊಂಡಿದ್ದರು ಎಂದು ಹೇಳಲಾಗುತ್ತಿದೆ.

ಆದರೆ ಊಸರವಳ್ಳಿ ಬಣ್ಣ ಬದಲಾಯಿಸುವಂತೆ ದೆಹಲಿಯ ವಿಮಾನವೇರಿದ ದೇವೇಗೌಡರ ಮನಸ್ಸೂ ಬದಲಾಗಿಬಿಟ್ಟಿತು. ಕಾಂಗ್ರೆಸ್ ನಾಯಕರೊಂದಿಗೆ ಮಾತುಕತೆಗೆ ಕುಳಿತ ಗೌಡರು, ಶಿವಣ್ಣನವರ ಹೆಸರನ್ನು ಎತ್ತದೆ, ತಮ್ಮ ಪುತ್ರ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿಯವರನ್ನೇ ಕೇಂದ್ರದ ಮಂತ್ರಿಯನ್ನಾಗಿಸಬೇಕೆಂಬ ಬೇಡಿಕೆಯನ್ನಿಟ್ಟದ್ದಾರೆ. ಇದಕ್ಕೆ ಒಪ್ಪದಿದ್ದಾಗ, ಬಿಎಸ್‌ಪಿ ನಾಯಕಿ ಮಾಯಾವತಿಯ ಮಡಿಲಿಗೆ ಬಿದ್ದು ತೃತೀಯ ರಂಗದ ಮಾತುಗಳನ್ನಾಡಿದ್ದಾರೆ.







ಹೆಚ್.ಡಿ.ದೇವೇಗೌಡರ ವರ್ತನೆ, ಮೈಸೂರಿನ ಅವರ ಪಕ್ಷದ ಕಾರ್ಪೊರೇಟರ್‌ಗಳನ್ನು ಕೆರಳಿಸಿದೆ. ಇವರನ್ನು ನಂಬಿ ಕುಳಿತರೆ ತಮ್ಮ ಕೈಗೆ ಚಿಕ್ಕನಾಯಕನಹಳ್ಳಿ ಚಿಪ್ಪೇ ಗತಿ ಎಂಬ ಅಭಿಪ್ರಾಯಕ್ಕೆ ಬಂದು, ಗೌಡರ ಪಕ್ಷಕ್ಕೆ ತಿಲಾಂಜಲಿ ನೀಡಲು ವೇದಿಕೆ ಸಿದ್ಧ ಮಾಡಿಕೊಳ್ಳುತ್ತಿದ್ದಾರೆ.

ಬಿಜೆಪಿ ಜತೆ ಸೇರುವ ಬಗ್ಗೆ ಮೊದಲು ಪ್ರಯತ್ನಕ್ಕಿಳಿದಿದ್ದು ಹಾಲಿ ವಿರೋಧ ಪಕ್ಷದ ನಾಯಕರಾಗಿರುವ ಸಂದೇಶ್ ಸ್ವಾಮಿ ಮತ್ತು ಕೆ.ಟಿ. ಚಲುವೇಗೌಡರುಗಳ ಗುಂಪು. ಸಂದೇಶಸ್ವಾಮಿ, "ನಾನು ಹೆಚ್ಚಿನ ಸಂಖ್ಯೆಯಲ್ಲಿ ದಳದ ಸದಸ್ಯರನ್ನು ಕರೆದುಕೊಂಡು ಬರುತ್ತೇನೆ, ನನ್ನನ್ನು ಮೇಯರ್ ಮಾಡಿ" ಎಂಬ ಬೇಡಿಕೆಯನ್ನಿಟ್ಟರೆಂದು, ಅದಕ್ಕೆ ಬಿಜೆಪಿ ನಾಯಕರು ಒಪ್ಪಲಿಲ್ಲವೆಂದು ಹೇಳಲಾಗುತ್ತಿದೆ.

ದಳದಿಂದ ಬರುವವರಲ್ಲಿ ಒಬ್ಬರನ್ನು ಉಪಮೇಯರ್ ಮಾಡುವುದು, ಕೆಲವರನ್ನು ಸ್ಥಾಯಿ ಸಮಿತಿ ಅಧ್ಯಕ್ಷರನ್ನಾಗಿ ಮಾಡುವುದು, ಇನ್ನುಳಿದವರಿಗೆ ಕಾಣಿಕೆ ಸಲ್ಲಿಸುವುದು ಇದು ಜಾತ್ಯತೀತ ಜನತಾದಳದಿಂದ ಭಾರತೀಯ ಜನತಾ ಪಕ್ಷಕ್ಕೆ ಬರಲಿರುವವರಿಗೆ ಸಿಗಬಹುದಾದ ಸವಲತ್ತುಗಳಾಗಿವೆ. ಈಗ ಜೆಡಿಎಸ್ ನಗರಾಧ್ಯಕ್ಷ ಟಿ. ದೇವರಾಜು, 29ನೇ ವಾರ್ಡ್ (ಸರಸ್ವತಿಪುರಂ)ನ ಕಾರ್ಪೊರೇಟರ್ ಆರ್.ಲಿಂಗಪ್ಪನವರ ನೇತೃತ್ವದಲ್ಲಿ ಪಕ್ಷಾಂತರಕ್ಕೆ ಬೇಕಾದ ಎಲ್ಲಾ ರೀತಿಯ ಮಾತುಕತೆ, ಸಿದ್ಧತೆಗಳು ನಡೆಯುತ್ತಿವೆ.

ದಳದ ಅತೃಪ್ತ ಪಾಲಿಕೆ ಸದಸ್ಯರನ್ನು ಪಕ್ಷಕ್ಕೆ ಸೇರಿಸಿಕೊಂಡು ನಗರಪಾಲಿಕೆಯ ಅಧಿಕಾರ ಹಿಡಿಯುವ ಜವಾಬ್ದಾರಿಯನ್ನು ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿ ಎಸ್.ಎ. ರಾಮದಾಸ್ ಮತ್ತು ಗೃಹ ಮಂಡಳಿ ಅಧ್ಯಕ್ಷ ಜಿ.ಟಿ.ದೇವೇಗೌಡ ವಹಿಸಿಕೊಂಡಿದ್ದಾರೆ. ಈಗಾಗಲೇ ಹಲವು ಸುತ್ತಿನ ಮಾತುಕತೆಗಳು ನಡೆದಿದ್ದು, ಕೆಲವರಿಗೆ ಹಣ, ಕೆಲವರಿಗೆ ಅಧಿಕಾರದ ಭರವಸೆ ನೀಡಲಾಗಿದೆಯಂತೆ.

ರಾಯಚೂರು: ಅಸ್ತಮಿಸಿದ ಸ್ವಾಭಿಮಾನಿ ಚೇತನ ಜೇಗರಕಲ್ ಶಿವಪ್ಪ!



ಕರ್ನಾಟಕ ಮತ್ತೊಬ್ಬ ಹೋರಾಟಗಾರರನ್ನು ಕಳೆದುಕೊಂಡಿದೆ. ಎಪ್ಪತ್ತರ ಇಳಿ ವಯಸ್ಸಿನಲ್ಲೂ ದಣಿವರಿಯದಂತೆ ದಮನಿತರ ಪರವಾಗಿ ಹೋರಾಡಿದ ರಾಯಚೂರು ಜಿಲ್ಲೆಯ ಜೇಗರಕಲ್ ಗ್ರಾಮದ ಪಟ್ನಂ ಶಿವಪ್ಪ ಮೊನ್ನೆ ಅನಾರೋಗ್ಯದಿಂದ ಮರಣ ಹೊಂದಿದ್ದಾರೆ.

ಶಿವಪ್ಪ ಕರ್ನಾಟಕದ ಜನರಿಗೆ ಚಿರಪರಿಚಿತವಾಗಿರುವ ವ್ಯಕ್ತಿಯಲ್ಲ. ಏಕೆಂದರೆ, ಪತ್ರಿಕೆಗಳಲ್ಲಿ ತಮ್ಮ ಫೋಟೋ ಬರಬೇಕು, ಟೀವಿಗಳಲ್ಲಿ ತಾವು ಕಾಣಿಸಿಕೊಳ್ಳಬೇಕು ಎಂದು ಹಂಬಲಿಸುವ ಪೊಳ್ಳು 'ಓರಾಟಗಾರ'ರೇ ಇಂದು ವಿಜೃಂಭಿಸುತ್ತಿರುವಾಗ ರಾಜ್ಯದಲ್ಲಿಯೇ ಅತ್ಯಂತ ಹಿಂದುಳಿದ ರಾಯಚೂರಿನ ಕುಗ್ರಾಮಗಳಲ್ಲಿ ಶಿವಪ್ಪ ದಮನಿತ ದಲಿತರ ದನಿಯಾಗಿ ನಿಸ್ವಾರ್ಥವಾಗಿ ಮಾಡಿದ ಹೋರಾಟ ಬಾಹ್ಯ ಜಗತ್ತಿಗೆ ಗೊತ್ತಾಗುವುದು ತುಸು ಕಷ್ಟವೆ. ಜೇಗರಕಲ್ ಶಿವಪ್ಪ ಎಂದೇ ಸುತ್ತಮುತ್ತಲ ಗ್ರಾಮಗಳಲ್ಲಿ ಜನಜನಿತರಾದ ಶಿವಪ್ಪ ತಮ್ಮ ಜೀವನದ ಮುಕ್ಕಾಲು ಭಾಗವನ್ನು ಹೋರಾಡುತ್ತಲೇ ಕಳೆದರು.

ಜೇಗರಕಲ್ ಶಿವಪ್ಪನಿಗೆ ಅಪ್ಪನಿಂದ ಬಂದ ಏಕೈಕ ಬಳುವಳಿ ಎಂದರೆ ಊರಗೌಡನ ಮನೆಯಲ್ಲಿ ಮಾಡಬೇಕಾದ ಜೀತ! ಆದರೆ ಸ್ವಾಭಿಮಾನಿ ಶಿವಪ್ಪನಿಗೆ ಇದು ಒಗ್ಗಲಿಲ್ಲ. ಮೂಲತಃ ದಲಿತ ಸಮುದಾಯಕ್ಕೆ ಸೇರಿದ ಅವರಿಗೆ ಉಕ್ಕೇರಿ ಬರುತ್ತಿದ್ದ ದಲಿತ ಚಳವಳಿ ಮತ್ತಷ್ಟು ಸ್ಫೂರ್ತಿ ತುಂಬಿತ್ತು. ಜೀತಕ್ಕೆ ಗುಡ್‌ಬೈ ಹೇಳಿ ತನ್ನ ದಲಿತ ಸಮುದಾಯವನ್ನು ಪ್ರಾಣಿಗಳಿಗಿಂತ ಕೀಳಾಗಿ ಕಾಣುವ ಈ ಸಮಾಜವನ್ನು, ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಿಸುವ ಸ್ವಾಭಿಮಾನಿ ಚಳವಳಿಗೆ ಧುಮುಕಿದರು.

ಹೋರಾಟದ ಪ್ರಕ್ರಿಯೆಯಲ್ಲಿಯೇ ಜನಪ್ರಿಯರಾದ ಶಿವಪ್ಪ ಗ್ರಾಮಪಂಚಾಯತಿ ಉಪಾಧ್ಯಕ್ಷರಾಗಿಯೂ ಆಯ್ಕೆಯಾದರು. ಇಡೀ ವ್ಯವಸ್ಥೆಯೇ ಕೊಚ್ಚೆಗುಂಡಿಯಂತಾಗಿರುವಾಗ ಶಿವಪ್ಪ ಗ್ರಾಮ ಪಂಚಾಯತಿ ಉಪಾಧ್ಯಕ್ಷರಾಗಿದ್ದರೂ ಯಾವುದೇ ಭ್ರಷ್ಟಾಚಾರ ಎಸಗದೇ ದಮನಿತ ಸಮುದಾಯದ ಅಭಿವೃದ್ಧಿಗಾಗಿ ತಮ್ಮ ಅಧಿಕಾರವನ್ನು ಸದುಪಯೋಗಪಡಿಸಿಕೊಳ್ಳಲು ಯತ್ನಿಸಿದರು.

ಒಂದೆಡೆ ಜೇಗರಕಲ್ ಗ್ರಾಮದಲ್ಲಿದ್ದ 125 ಎಕರೆ ಗೋಮಾಳ ಜಮೀನಿಗೆ ಅನಧಿಕೃತವಾಗಿ ಊರ ಭೂಮಾಲಿಕನೇ ಒಡೆಯನಾಗಿದ್ದ, ಇನ್ನೊಂದೆಡೆ ತುಂಡು ಭೂಮಿಯೂ ಇಲ್ಲದೇ ಇದೇ ಜಮೀನಿನಲ್ಲಿ ಭೂಮಾಲಿಕನ ಜೀತದಾಳುಗಳಾಗಿ ಹಗಲಿರುಳೂ ಪ್ರಾಣಿಗಳಂತೆ ದುಡಿಯುವ ದಲಿತ ಸಮೂಹವಿತ್ತು. ಇಂತಹ ಸಂದರ್ಭದಲ್ಲಿಯೇ ಆ 125 ಎಕರೆ ಜಮೀನನ್ನು 60 ಜನ ಭೂರಹಿತ ದಲಿತರಿಗೆ ಹಂಚಬೇಕೆಂಬ ಆಶಯದೊಂದಿಗೆ ಶಿವಪ್ಪ ಕರ್ನಾಟಕ ರೈತ ಕೂಲಿ ಸಂಘ ಕಟ್ಟಿಕೊಂಡು ಎಲ್ಲಾ ಭೂರಹಿತ ಕೂಲಿಗಳನ್ನು, ಜೀತದಾಳುಗಳನ್ನು ಸಂಘಟಿಸಿ ಭೂಮಾಲಿಕನ ವಿರುದ್ಧ ಹೋರಾಟಕ್ಕಿಳಿದರು.

ತಲೆತಲಾಂತರಗಳಿಂದ ಭೂಮಿಯ ಒಡೆತನವನ್ನೇ ಕಾಣದ ದಲಿತ ಸಮೂಹ ತಾವೂ ತುಂಡು ಭೂಮಿಗೆ ಒಡೆಯರಾಗಬಹುದೆಂಬ ಮಹತ್ವಾಕಾಂಕ್ಷೆಯಿಂದ ಶಿವಪ್ಪನ ಹೆಸರಿನಲ್ಲಿ ವಿರೋಚಿತ ಹೋರಾಟಗಳನ್ನು ನಡೆಸಿದರು. ಮೊದಮೊದಲು ತಾಲ್ಲೂಕು, ಜಿಲ್ಲಾ ಕೇಂದ್ರಗಳಲ್ಲಿ ಧರಣಿ, ಪ್ರತಿಭಟನೆ, ಪ್ರದರ್ಶನಗಳಂತಹ ಪ್ರಜಾತಾಂತ್ರಿಕ ಹೋರಾಟಗಳನ್ನು ಹಮ್ಮಿಕೊಂಡರು, ಸರ್ಕಾರಿ ಕಚೇರಿಗಳಿಗೆ ಮುತ್ತಿಗೆ ಹಾಕಿದರು. ಆದರೆ, ಈ ವ್ಯವಸ್ಥೆ ಎಷ್ಟೊಂದು ಕ್ರೂರವಾಗಿದೆ ಎಂದರೆ ದಮನಿತ ಜನಸಮೂಹಗಳ ಈ ನ್ಯಾಯಯುತ ಬೇಡಿಕೆಯನ್ನು ಸರ್ಕಾರವಾಗಲೀ, ಅಧಿಕಾರಿಗಳಾಗಲೀ ಮನ್ನಿಸಲೇ ಇಲ್ಲ, ಬದಲಿಗೆ ಅವರೆಲ್ಲರೂ ಭೂಮಾಲಿಕನ ಪರವಾಗಿ ನಿಂತುಬಿಟ್ಟರು.

"ಸರ್ಕಾರಿ ಗೋಮಾಳ ಜಮೀನನ್ನು ಭೂರಹಿತ ದಲಿತರಿಗೆ, ದಮನಿತರಿಗೆ ಕೊಡಬೇಕೆಂಬುದು ನಾವು ಕೇಳುತ್ತಿರುವ ಭಿಕ್ಷೆಯಲ್ಲ, ಅದು ನಮ್ಮ ಹಕ್ಕು" ಎಂದು ಶಿವಪ್ಪ ಜನರನ್ನು ಹುರಿದುಂಬಿಸಿ ತಮ್ಮ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಿದರು. ಸರ್ಕಾರ, ಅಧಿಕಾರಿಗಳು, ಪೊಲೀಸರು – ಹೀಗೆ ಇಡೀ ಆಡಳಿತ ಯಂತ್ರಾಂಗವೇ ತಮ್ಮ ಬೇಡಿಕೆಯನ್ನು ನಿರ್ಲಕ್ಷಿಸುತ್ತಾ ಭೂಮಾಲಿಕನ ಪರವಾಗಿ ನಿಂತಿದ್ದರಿಂದ ಶಿವಪ್ಪ ಹೋರಾಟದ ಸ್ವರೂಪವನ್ನೇ ಬದಲಿಸಬೇಕಾಯಿತು. ಜನರೆಲ್ಲರನ್ನೂ ತಮ್ಮ ತಮ್ಮ ಎತ್ತು ಗಾಡಿ, ನೇಗಿಲುಗಳೊಂದಿಗೆ ಕರೆದುಕೊಂಡು ಹೋಗಿ ನೇರವಾಗಿ ಭೂಮಾಲಿಕನ ವಶದಲ್ಲಿದ್ದ ಸರ್ಕಾರಿ ಗೋಮಾಳ ಭೂಮಿಯನ್ನು ಉಳುಮೆ ಮಾಡಲಾರಂಭಿಸಿಬಿಟ್ಟರು. ನಂತರ ಸುಮಾರು 60 ಭೂಹೀನ ರೈತರಿಗೆ ಆ ಭೂಮಿಯನ್ನು ಹಂಚಿಕೊಟ್ಟರು.

ಆದರೆ ಭೂಮಾಲಿಕರ, ಶ್ರೀಮಂತರ ಹಿತ ಕಾಯುವುದಕ್ಕೇ ಇರುವ ಪೊಲೀಸರು, ಸರ್ಕಾರಿ ಅಧಿಕಾರಿಗಳು ಸುಮ್ಮನಿರಬೇಕಲ್ಲ? ಶಿವಪ್ಪನನ್ನೂ ಒಳಗೊಂಡಂತೆ ಈ ನ್ಯಾಯಸಮ್ಮತ ಹೋರಾಟದಲ್ಲಿ ತೊಡಗಿದ್ದ ದಮನಿತರ ಮೇಲೆ ಎರಗಿದ ಪೊಲೀಸರು ಅವರನ್ನು ಮನಬಂದಂತೆ ಥಳಿಸಿದರು, ಹಾಕಬಾರದ ಕೇಸುಗಳನ್ನೆಲ್ಲಾ ಹಾಕಿ ಜೈಲಿಗಟ್ಟಿದರು. ಹೋರಾಟದಲ್ಲಿ ತೊಡಗಿದ್ದ ಕುಟುಂಬಗಳನ್ನು ಮಾನಸಿಕವಾಗಿ, ದೈಹಿಕವಾಗಿ ಯಾವ್ಯಾವ ರೀತಿಯಲ್ಲಿ ಹಿಂಸಿಸಬಹುದೋ ಅದನ್ನೆಲ್ಲಾ ಮಾಡಿಬಿಟ್ಟರು.

ಇಲ್ಲಿಯತನಕ ಕೇವಲ ಪೊಲೀಸರು ಮತ್ತು ಅಧಿಕಾರಿಗಳು ಈ ಬಡಜೀವಗಳನ್ನು ಹಿಂಡುತ್ತಿದ್ದರೆ ಈಗ ಆ ಪುಣ್ಯಕಾರ್ಯಕ್ಕೆ ನ್ಯಾಯಾಲಯವೂ ಸೇರಿಕೊಂಡಿತು. ಜೇಗರಕಲ್ ಶಿವಪ್ಪನಂತಹ ಇಳಿವಯಸ್ಸಿನ ಮುದುಕರನ್ನು, ಅವರ ನ್ಯಾಯಸಮ್ಮತ ಬೇಡಿಕೆಯನ್ನು ನೋಡಿಯೂ ನ್ಯಾಯಾಲಯಕ್ಕೆ ಮರುಕ ಹುಟ್ಟಲಿಲ್ಲ. ಯಾವೊಬ್ಬ ಬಂಧಿತನಿಗೂ ಜಾಮೀನು ನೀಡದೇ ಎಲ್ಲರೂ ಜೈಲಿನಲ್ಲಿ ಕೊಳೆಯುವಂತೆ ಮಾಡುವ ಮೂಲಕ ನ್ಯಾಯಾಲಯವೂ ತನ್ನ ಅಮಾನವೀಯತೆಯನ್ನು ಪ್ರದರ್ಶಿಸಿತು. ಕೊನೆಗೆ ಅವರಿಗೆ ಜಾಮೀನು ಸಿಕ್ಕಿತಾದರೂ ಕೇಸುಗಳ ವಿಚಾರಣೆಯ ಹೆಸರಿನಲ್ಲಿ ವರ್ಷಗಟ್ಟಲೆ ಈ ಅಮಾಯಕರನ್ನು ನ್ಯಾಯಾಲಯಕ್ಕೆ ಅಲೆದಾಡಿಸಿತು. ಕಾಲಿನಲ್ಲಿ ಚಪ್ಪಲಿಯಿಲ್ಲದೇ, ಜೇಬಿನಲ್ಲಿ ಬಿಡಿಗಾಸಿಲ್ಲದೇ ಇವರೆಲ್ಲಾ ನ್ಯಾಯಾಲಯಕ್ಕೆ ಅಲೆದಾಡುತ್ತಲೇ ಹೋದರು. ನ್ಯಾಯಾಲಯದ ಮೆಟ್ಟಿಲುಗಳ ಮೇಲೆಯೇ ಇಬ್ಬರು ಕೊನೆಯುಸಿರೆಳೆದಾಗಲೂ ನ್ಯಾಯಾಲಯಕ್ಕೆ ಕನಿಕರ ಬರಲಿಲ್ಲ.

ಹೋರಾಟದ ನಾಯಕ 65 ವರ್ಷ ವಯಸ್ಸಿನ ಜೇಗರಕಲ್ ಶಿವಪ್ಪನಲ್ಲಿ ಮಾತ್ರ ಸ್ಫೂರ್ತಿಯ ಸೆಲೆ ಬತ್ತಿರಲಿಲ್ಲ. ಎಲ್ಲಾ ದಮನ, ಅವಮಾನಗಳನ್ನೂ ಎದುರಿಸುತ್ತಲೇ ತಮ್ಮ ಹೋರಾಟವನ್ನವರು ಮುಂದುವರೆಸಿದರು. ಹೋರಾಟದ ನಾಯಕ ಶಿವಪ್ಪನನ್ನು ಜೈಲಿಗಟ್ಟಿದರೆ ಹೋರಾಟ ತನ್ನಿಂದ ತಾನೇ ಸಾಯುತ್ತದೆ ಎಂದುಕೊಂಡ ಪೊಲೀಸರು 2000ದಲ್ಲಿ ಅವರ ಮೇಲೆ ರಾಜದ್ರೋಹದ ಕೇಸು ಹಾಕಿದರು. ಆಗಲೂ ನ್ಯಾಯಾಲಯ ಅವರ ವಯಸ್ಸನ್ನೂ ಪರಿಗಣಿಸದೇ ಜಾಮೀನು ನಿರಾಕರಿಸಿ ಎರಡು ವರ್ಷಗಳ ಕಾಲ ಜೈಲಿನಲ್ಲಿ ಕೊಳೆಸಿತು.

...ನ ಸಗರಾಧ್ಯಕ್ಷ ಮತ್ತು 34ನೇ ವಾರ್ಡ್‌ನ ...ಬಿಪಿ ಟಿ.ದೇವರಾಜು, 20ನೇ ವಾರ್ಡ್‌ನ ಆರ್. ...ಗಪ್ಪ, 18ನೇ ವಾರ್ಡ್‌ನ ಕೆ. ಮಲ್ಲೇಶ್, 27ನೇ ವಾರ್ಡ್‌ನ ಕೆ.ಟಿ. ಚೆಲುವೇಗೌಡ, 60ನೇ ವಾರ್ಡ್‌ನ ...ಎಸ್. ಶ್ರೀಕಂಠಯ್ಯ, 64ನೇ ವಾರ್ಡ್‌ನ ...ವಮ್ಮ, 62ನೇ ವಾರ್ಡ್‌ನ ಸಂದೇಶ್ ಸ್ವಾಮಿ ...ವರುಗಳು ಬಿಜೆಪಿ ಸೇರಲು ಸಿದ್ಧರಾಗಿರುವ ಪಾಲಿಕೆ ...ದಸ್ಯರುಗಳಾಗಿದ್ದಾರೆ ಎಂಬುದು ತಿಳಿದು ಬಂದಿದ್ದು, ಪಕ್ಷಾಂತರಕ್ಕೆ ಸಿದ್ಧರಾಗಿರುವ ಇತರರ ಹೆಸರುಗಳು ...ಳಿದುಬಂದಿಲ್ಲ.

ಈ ರೀತಿ ಏನಾದರೂ ಪಕ್ಷಾಂತರ ನಡೆದು, ಬಿಜೆಪಿ ...ಮಹಾನಗರಪಾಲಿಕೆಯ ಅಧಿಕಾರದ ಚುಕ್ಕಾಣಿ ...ಹಿಡಿಯುವಂತಾದರೆ ಕಳೆದ ಬಾರಿ ವಿರೋಧ ಪಕ್ಷದ ನಾಯಕರಾಗಿದ್ದ 8ನೇ ವಾರ್ಡ್‌ನಿಂದ ಗೆದ್ದಿರುವ ನಾಗೇಂದ್ರ ಮೇಯರ್ ಆಗುವ ಸಾಧ್ಯತೆಗಳು ಕಂಡುಬರುತ್ತಿವೆ. ...ದಕ್ಕಾಗಿಯೇ ನಾಗೇಂದ್ರ ಸುಮಾರು 35ರಿಂದ 40 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲು ಸಿದ್ಧರಾಗಿದ್ದಾರಂತೆ.

ಈಗಾಗಲೇ ಸಿದ್ದರಾಮಯ್ಯ, ಜಿ.ಟಿ. ದೇವೇಗೌಡ, ...ಟಿ. ಜಯಕುಮಾರ್‌ಗಳಂತಹ ಪ್ರಬಲ ನಾಯಕರು ...ಳನ್ನು ಕಳೆದುಕೊಂಡು ದುರ್ಬಲಗೊಂಡಿರುವ ಮೈಸೂರು ಭಾಗದ ಜಾತ್ಯತೀತ ಜನತಾದಳ, ಪಾಲಿಕೆ ಸದಸ್ಯರುಗಳ ಪಕ್ಷಾಂತರದಿಂದ ಮತ್ತಷ್ಟು ದುರ್ಬಲ ...ಗೊಂಡು ಹೀನಾಯ ಸ್ಥಿತಿಯತ್ತ ಸಾಗಲಿದೆ. ಪಕ್ಷವನ್ನು ...ಲಗೊಳಿಸುವಂತಹ ಪಕ್ಷಾಂತರವಾಗಲು ಸಿದ್ಧರಾಗಿರು...ವರನ್ನು ತಡೆಯುವಂತಹ ದಳಪತಿಗಳು ಯಾರೂ ...ಲ್ಲದಂತಾಗಿದೆ. ಈ ವಿಚಾರ ತಿಳಿದು ಸ್ವತಃ ಎಚ್.ಡಿ.ಕುಮಾರಸ್ವಾಮಿ ಜುಲೈ 27ರಂದು ಮೈಸೂ...ಗೆ ಆಗಮಿಸಿ ತಮ್ಮ ಪ್ರಭಾವ ಬೀರಲು ಪ್ರಯತ್ನಿಸಿದ...ದರೂ ಯಾವುದೇ ಪ್ರಯೋಜನಗಳಾಗಿಲ್ಲ.

ಒಟ್ಟಿನಲ್ಲಿ ಸದ್ಯದಲ್ಲೇ ಬಿಜೆಪಿ ಮೈಸೂರು ಮಹಾ...ನಗರಪಾಲಿಕೆಯ ಅಧಿಕಾರದ ಗದ್ದುಗೆಯೇರಿ ಮೈಸೂರಿನ ...ತಿಹಾಸದ ಪುಟಗಳಲ್ಲಿ ಹೊಸದೊಂದು ಅಧ್ಯಾಯ ...ರೆಯುವ ದಿನ ದೂರವೇನಿಲ್ಲ.

■ ವರದಿಗಾರ


ಆದರೆ ಈ ಹೋರಾಟದ ನಾಯಕ 65 ವರ್ಷ ...ಯಸ್ಸಿನ ಜೀಗರಕಲ್ ಶಿವಪ್ಪನಲ್ಲಿ ಮಾತ್ರ ಸ್ಫೂರ್ತಿಯು ...ರೆ ಬತ್ತಿರಲಿಲ್ಲ. ಎಲ್ಲಾ ದಮನ, ಅವಮಾನಗಳನ್ನೂ ...ದುರಿಸುತ್ತಲೇ ತಮ್ಮ ಹೋರಾಟವನ್ನವರು ಮುಂದು...ರೆಸಿದರು. ಹೋರಾಟದ ನಾಯಕ ಶಿವಪ್ಪನನ್ನು ...ೖಲಿಗಟ್ಟಿದರೆ ಹೋರಾಟ ತನ್ನಿಂದ ತಾನೇ ಸಾಯುತ್ತದೆ ...ಂದುಕೊಂಡ ಪೊಲೀಸರು 2000ದಲ್ಲಿ ಅವರ ಮೇಲೆ ...ಜದ್ರೋಹದ ಕೇಸು ಹಾಕಿದರು. ಆಗಲೂ ನ್ಯಾಯಾ...ಯ ಅವರ ವಯಸ್ಸನ್ನೂ ಪರಿಗಣಿಸದೇ ಜಾಮೀನು ...ರಾಕರಿಸಿ ಎರಡು ವರ್ಷಗಳ ಕಾಲ ಜೈಲಿನಲ್ಲಿ ...ಳೆಸಿತು.

ಜೈಲಿನಿಂದ ಹೊರಬಂದ ಮೇಲೂ ಅವರು ತಮ್ಮ ...ೋರಾಟವನ್ನು ಮುಂದುವರೆಸಿದರು. ವಯಸ್ಸಾಗಿತ್ತು, ... ನಡುವೆ ಅವರ ಆರೋಗ್ಯವೂ ಹದಗೆಟ್ಟಿತ್ತು. ...ದರೂ ತಮ್ಮ ವಿರೋಧಿಗಳೊಂದಿಗೆ ರಾಜಿ ಮಾಡಿ...ಕೊಳ್ಳಲಿಲ್ಲ, ತಮ್ಮ ಆಶಯಗಳಿಗಾಗಿ ಹೋರಾಡುತ್ತಲೇ ಜೀಗರಕಲ್ ಶಿವಪ್ಪ ಮೊನ್ನೆ ತಾನೆ ಕೊನೆಯುಸಿರೆಳೆದರು. ...ಲಿತರಿಗೆ, ಭೂರಹಿತರಿಗೆ, ದಮನಿತರಿಗೆ ಭೂಮಿ ...ಕೊಡಿಸಬೇಕೆಂಬ, ಅವರೆಲ್ಲರೂ ಸ್ವಾಭಿಮಾನದಿಂದ ...ದುಕಬೇಕೆಂಬ ಶಿವಪ್ಪನ ಆಸೆ ಕೊನೆಗೂ ಈಡೇರಲಿಲ್ಲ.

ಶಿವಪ್ಪರಿಗೆ ಸ್ವಾರ್ಥವಿದ್ದಿದ್ದರೆ ಗ್ರಾಮಪಂಚಾಯತಿ...ಯಲ್ಲಿ ಉಪಾಧ್ಯಕ್ಷನಾಗಿದ್ದಾಗಲೇ ಭ್ರಷ್ಟಾಚಾರ ಎಸಗಿ ...ಬೇಕಾದಷ್ಟು ದುಡ್ಡು ಮಾಡಿಕೊಳ್ಳಬಹುದಿತ್ತು, ಇಲ್ಲವೇ, ಹೋರಾಟವನ್ನು ಅರ್ಧದಲ್ಲಿಯೇ ನಿಲ್ಲಿಸಿದ್ದರೆ ಭೂಮಾ...ಲೀಕನೂ ಬೇಕಾದಷ್ಟು ದುಡ್ಡು ಕೊಡುತ್ತಿದ್ದ, ಪೊಲೀಸರೂ ...ಬಹಳಷ್ಟು ಆಮಿಷಗಳನ್ನು ಒಡ್ಡಿದ್ದರು. ಆದರೆ ಶಿವಪ್ಪ ...ಜೀವನದಲ್ಲಿ ಕಿತ್ತು ತಿನ್ನುವ ಬಡತನವಿದ್ದರೂ ಅದ್ಯಾವುದಕ್ಕೂ ...ಸೊಪ್ಪು ಹಾಕದೇ ತಮ್ಮ ಆಶಯಗಳಿಗಾಗಿ ಹೋರಾಡಿದರು.

ದಲಿತ-ದಮನಿತರಿಗೆ ಭೂಮಿ ಸಿಕ್ಕದೇ ಹೋಗಿರ...ಬಹುದು.. ಆದರೆ ಶಿವಪ್ಪ ಹೊತ್ತಿಸಿದ ಆತ್ಮವಿಶ್ವಾಸ ...ಮತ್ತು ಸ್ವಾಭಿಮಾನದ ಕಿಡಿ ಅವರಲ್ಲಿನ್ನೂ ಉಳಿದು...ಕೊಂಡಿದೆ. ಇಂದಲ್ಲ ನಾಳೆ ಅದು ದೊಡ್ಡ ಜ್ವಾಲೆಯಾಗಿ ...ಹೊತ್ತಿಕೊಂಡು ಜೀಗರಕಲ್ ಶಿವಪ್ಪ ಅವರ ಆಶಯ ...ಈಡೇರುವುದಂತೂ ಸತ್ಯ.

■ ಕುಮಾರ್ ಸಮತಳ



ಹಬ್ಬ ಆಚರಿಸಿದ ಕಾಟವೆ!

ರವಿಕಾಂತೇಗೌಡರು ಡಿಸಿಪಿ ಆಗಿದ್ದಾಗ ಕಮರಿಪೇಟೆಯ ದೋ ನಂಬರ್ ದಂಧೆ ಸಂಪೂರ್ಣವಾಗಿ ಹದ್ದುಬಸ್ತಿನಲ್ಲಿತ್ತು. ಅದೇ ಸಮಯದಲ್ಲಿ ಉಮಾಭಾರತಿಯ ಈದ್ಗಾ ಯಾತ್ರೆ ಶುರುವಾದಾಗ ಆಗಿನ ಪೊಲೀಸ್ ಕಮೀಷನರ್ ಆಗಿದ್ದ ಗಗನ್‌ದೀಪ್ [illegible] ರವಿಕಾಂತೇಗೌಡರು ಕೋಮುಗಲಭೆ ಏಳದಂತೆ ಪ್ರಾಮಾಣಿಕ ಪ್ರಯತ್ನ ಮಾಡಿದ್ದರು. ಇದೇ ಕಾರಣಕ್ಕಾಗಿ ಚೆಡ್ಡಿಗಳ ದ್ವೇಷ [illegible]

ಯಾವಾಗ ಹುಬ್ಬಳ್ಳಿ-ಧಾರವಾಡಗಳಿಂದ ರವಿಕಾಂತೇಗೌಡ ಮತ್ತು ಗಗನ್‌ದೀಪ್ ಜೋಡಿ ಎತ್ತಂಗಡಿಯಾಯಿತೋ [illegible] ಮೊದಲು ಹಬ್ಬದೂಟ ಮಾಡಿದವನು ಅಶೋಕ್ ಕಾಟವೆ. ಹೊಸ ಕಮೀಷನರ್ ಆಗಿ ಬಂದ ನಾರಾಯಣ ನಡುಮನಿಯೊಂದಿಗೆ ಡೀಲ್ ಕುದುರಿಸಿಕೊಂಡ ಕಾಟವೆ ಕಮರಿಪೇಟೆಯ ಕರಾಳದಂಧೆಯನ್ನು ಮತ್ತೆ ಜಾರಿಗೆ ತಂದ. ಆದರೆ ಸ್ವಲ್ಪ ಸಮಯದಲ್ಲೇ ಅದ್ಯಾಕೋ ನಾರಾಯಣ ನಡುಮನಿಗೂ ಕಾಟವೆಗೂ ಸಂಬಂಧ ಹಳಸಲಾರಂಭಿಸಿತು. ಅದಕ್ಕಾಗಿ ನಡುಮನಿಯನ್ನು ಎತ್ತಂಗಡಿ ಮಾಡಿಸಬೇಕೆನ್ನುವ ಕೂಟದಲ್ಲಿ ಇವನೂ ಮೆಂಬರ್ ಆಗಿಬಿಟ್ಟ.

ಈಗ ಕಾಟವೆ ಕನಸು ನನಸಾಗಿದೆ. ನಡುಮನಿ ಎತ್ತಂಗಡಿ ಆದ ರಾತ್ರಿಯೇ ಕಾಟವೆ ಕಮರಿಪೇಟೆಯಲ್ಲಿ ಅವಧಿಗೆ ಮುಂಚೆಯೇ 'ವಿಜಯದಶಮಿ' ಆಚರಿಸಿಬಿಟ್ಟಿದ್ದಾನೆ!



ನಡುಮನಿ ಸಾಹೇಬ್ರು ಎತ್ತಂಗಡಿ ಆಗಿದ್ದೇಕೆ?

ಅಂತೂಇಂತೂ ಸಂಘಪರಿವಾರದ ಚೆಡ್ಡಿಗಳು ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳ ಪೊಲೀಸ್ ಕಮೀಷನರ್ ಆಗಿದ್ದ ನಾರಾಯಣ ನಡುಮನಿಗೆ ಒಂದು ದಾರಿ ತೋರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆ ಜಾಗಕ್ಕೀಗ ತಮ್ಮ ಅಣತಿಯಂತೆ ಕುಣಿಯುವ ಶಿವಕುಮಾರನೆಂಬ ಹೇತ್ಲಾಂಡಿಯನ್ನು ತಂದು ಕೂರಿಸಿದ್ದಾರೆ. ಇದು ಅವಳಿನಗರಗಳಲ್ಲಿ ಚೆಡ್ಡಿಗಳು ಎಬ್ಬಿಸುವ ಗಬ್ಬು ಕೋಮುವಾದಿ ರಾಜಕೀಯಕ್ಕೆ ತಳಹದಿ ಕಟ್ಟಲು ಹಾಕಿದ ಮೊದಲನೇ ಕಲ್ಲು ಎಂಬುದರಲ್ಲಿ ಯಾರಿಗೂ ಅನುಮಾನವಿಲ್ಲ.

ನಡುಮನಿಯನ್ನು ಎತ್ತಂಗಡಿ ಮಾಡುವುದಕ್ಕೆ ಯಡ್ಡಿ ಸರ್ಕಾರ ಇಷ್ಟೊಂದು ಮುತುವರ್ಜಿ ಯಾಕೆ ವಹಿಸಿತು ಎಂಬುದು ಅರ್ಥವಾಗದ ಪ್ರಶ್ನೆಯೇನಲ್ಲ.

ಖುದ್ದು 'ರೆಡ್ಡಿವಾದಿ'ಯಾದ ನಡುಮನಿ ಅಸಲಿಗೆ ತುಂಬಾ ಪ್ರಾಮಾಣಿಕ ಮನುಷ್ಯನೇನಲ್ಲ. ಈತ ಅವಳಿ ನಗರಕ್ಕೆ ಕಾಲಿಟ್ಟಿದ್ದೇ ಬಸವರಾಜ ಹೊರಟ್ಟಿಯ ಬೆಂಬಲದೊಂದಿಗೆ. ಹೊರಟ್ಟಿ ಅಧಿಕಾರದಲ್ಲಿದ್ದಷ್ಟೂ ದಿನ ಅವರ ಮನೆಯ ಕಸಬರಿಗೆಯಂತೆ ಸೇವೆ ಮಾಡಿದ 'ಪ್ರಾಮಾಣಿಕ' ಅಧಿಕಾರಿ ಈ ನಡುಮನಿ. ಸೀಮೆಎಣ್ಣೆ ಕಾಳದಂಧೆಯಿಂದ ಹಿಡಿದು ಕಮರಿಪೇಟೆಯ 'ಡಿ'ಡಾನ್‌ಗಳ ತನಕ ಎಲ್ಲಾ ದೋನಂಬರ್ ದಂಧೆಯವರೊಂದಿಗೆ 'ಸಂಪರ್ಕ' ಹೊಂದಿಸಿಕೊಂಡು ಅಚ್ಚುಕಟ್ಟಾಗಿ ಬದುಕಿದ್ದವನು.

ಈತ ಹುಬ್ಬಳ್ಳಿ-ಧಾರವಾಡ ಅವಳಿನಗರಗಳೆಂಬ ಈ ಹುಲ್ಲುಗಾವಲಿನಲ್ಲಿ ತನ್ನ ಪಾಡಿಗೆ ತಾನು ಮೇಯ್ದುಕೊಂಡಿದ್ದಿದ್ದರೆ ಪ್ರಾಯಶಃ ಸಂಘಪರಿವಾರಿಗಳು ಸುಮ್ಮನಿರುತ್ತಿದ್ದರು. ಆದರೆ ಪಕ್ಕಾ ಹೊರಟ್ಟಿಯ ಶಿಷ್ಯನಾದ ಈತ ಚೆಡ್ಡಿಗಳ ಕಪಿಚೇಷ್ಟೆಗಳನ್ನು ಸಹಿಸಲಿಲ್ಲ. ಬಿಜೆಪಿ, ಭಜರಂಗದಳದಂತಹ ಸಂಘಟನೆಗಳು ಅವಳಿನಗರಗಳಲ್ಲಿ ಹೊತ್ತಿಸುತ್ತಿದ್ದ ಕೋಮುಬೆಂಕಿಗೆ ನಡುಮನಿ ನೀರು ಸುರಿಯುತ್ತಲೇ ಬಂದಿದ್ದರು. ಇವರನ್ನು ಎತ್ತಂಗಡಿ ಮಾಡಿಸುವುದಕ್ಕೆ ಈ ಹಿಂದೆ ಅದೆಷ್ಟೋ ಬಾರಿ ಚೆಡ್ಡಿಗಳು ಪ್ರಯತ್ನಿಸಿದ್ದರಾದರೂ ಅದು ಫಲಿಸಿರಲಿಲ್ಲ. ಈಗ ಯಡ್ಡಿ ಸರ್ಕಾರ ಅತ್ತ ವಿಧಾನಸೌಧದಲ್ಲಿ ತಳವೂರುತ್ತಿದ್ದಂತೆ ಇತ್ತ ನಾರಾಯಣ ನಡುಮನಿಯ ತಳ ಅಲುಗಾಡಿಸಿದ್ದಾರೆ.

ನಾರಾಯಣ ನಡುಮನಿ ಚೆಡ್ಡಿಗಳಿಗೆ ಕೊಟ್ಟ ಕಾಟ ಅಷ್ಟಿಷ್ಟಲ್ಲ. ಹಿಂದೂ ಲಾಡೆನ್ ಪ್ರಮೋದ್ ಮುತಾಲಿಕ್ ತ್ರಿಶೂಲ ದೀಕ್ಷೆಯ ಪೋದಿಂದ ಹಿಡಿದು ಮೊನ್ನೆಮೊನ್ನೆಯ ತಥಾಕಥಿತ ಶಂಕಿತ 'ಉಗ್ರ'ರ ಬಂಧನದ ತನಕ ಚೆಡ್ಡಿಗಳಿಗೆ ಅಡಿಅಡಿಗೆ ತಡೆಯೊಡ್ಡುತ್ತಾ ಬಂದಿದ್ದರು. ಅದರಲ್ಲೂ ಹುಬ್ಬಳ್ಳಿ-ಧಾರವಾಡಗಳಲ್ಲಿ ಆರ್‌ಎಸ್‌ಎಸ್, ವಿಎಚ್‌ಪಿ, ಭಜರಂಗದಳಗಳಂತಹ ಕಟ್ಟರ್ ಹಿಂದೂತ್ವವಾದಿ ಸಂಘಟನೆಗಳು ತಮ್ಮ ಸಾಮಾಜಿಕ ತಳಹದಿಯನ್ನು ವಿಸ್ತರಿಸಿಕೊಂಡಿರುವಾಗ, ಒಂದು ಡಜನ್‌ಗಿಂತಲೂ ಹೆಚ್ಚು ಬಿಜೆಪಿ ನಾಯಕರು ತಳವೂರಿಕೊಂಡಿರುವಾಗ ಚೆಡ್ಡಿಗಳ ಆಟ ನಡೆಯದಂತೆ ತಡೆಯುವುದು ಸುಲಭದ ಮಾತಲ್ಲ. ಅಂಥದ್ದೊಂದು ಕೆಲಸವನ್ನು ನಾರಾಯಣ ನಡುಮನಿ ಮಾಡಿದ್ದರು. ಅದಕ್ಕೆ ಸಂಘಪರಿವಾರ, ಬಿಜೆಪಿಗಳ ಆಕ್ರೋಶಕ್ಕೆ ತುತ್ತಾಗಿದ್ದ ನಡುಮನಿ ಈಗ ಯಡ್ಡಿ ಸರ್ಕಾರ ಭದ್ರಗೊಳ್ಳುತ್ತಿದ್ದಂತೆ ಎತ್ತಂಗಡಿಯಾಗಿದ್ದಾರೆ.

ನಡುಮನಿಯನ್ನು ಎತ್ತಂಗಡಿ ಮಾಡುವುದಕ್ಕೆ ತೀರಾ ಶ್ರಮಪಟ್ಟವರೆಂದರೆ ಪ್ರಹ್ಲಾದ್ ಜೋಷಿ ಮತ್ತು ಜಗದೀಶ್ ಶೆಟ್ಟರ್. ಅದಕ್ಕೂ ಒಂದು ಕಾರಣವಿದೆ. ಒಟ್ಟಾರೆ ಸಂಘಪರಿವಾರಕ್ಕೆ ನಡುಮನಿ ಮೇಲೆ ಇದ್ದ ದ್ವೇಷಕ್ಕಿಂತ ಈ ಇಬ್ಬರಿಗೆ ತುಸು ಜಾಸ್ತಿಯೇ ದ್ವೇಷವಿತ್ತು. ಏಕೆಂದರೆ ಈ ಹಿಂದೆ ಜಗದೀಶ್ ಶೆಟ್ಟರ್‌ನ ಖಾಸಾ ತಮ್ಮ ಪ್ರದೀಪ್ ಶೆಟ್ಟರ್ ಹೆಂಡ ಕುಡಿದು ಮೇನ್‌ರೋಡಿನಲ್ಲೇ ಯರ್‍ರಾಬಿರ್‍ರಿ ಗಾಡಿ ಓಡಿಸುತ್ತಿದ್ದಾಗ ಇದೇ ನಡುಮನಿ ಅವನನ್ನು ಹಿಡಿದು ಫೈನ್ ಹಾಕಿದ್ದರು. ಪ್ರದೀಪ್ ಶೆಟ್ಟರ್ ತಾನು ಯಾರ ತಮ್ಮ ಎಂದು ಹೂಂಕರಿಸಿದರೂ ನಡುಮನಿ ಜಗ್ಗಿರಲಿಲ್ಲ. ಹಾಗಾಗಿಯೇ, ಹೇಗಾದರೂ ಮಾಡಿ ನಡುಮನಿಯನ್ನು ಟ್ರಾನ್ಸ್‌ಫರ್ ಮಾಡಿಸಬೇಕು ಎಂದು ಪ್ರದೀಪ್ ಶೆಟ್ಟರ್ ಆವತ್ತಿನಿಂದಲೂ ಜಗದೀಶ್ ಶೆಟ್ಟರ್‌ಗೆ ದುಂಬಾಲು ಬಿದ್ದಿದ್ದ.

ಇನ್ನೊಂದೆಡೆಗೆ ಪ್ರಹ್ಲಾದ್ ಜೋಷಿ ಹಾಕಿಕೊಟ್ಟ ಮಾಸ್ಟರ್ ಪ್ಲಾನ್‌ಗಳನ್ನು ಎಬಿವಿಪಿ, ಭಜರಂಗದಳಗಳು ಜಾರಿಮಾಡಲು ಹೋದಾಗ ಇದೇ ನಡುಮನಿ ಅಡ್ಡಗಾಲಾಕುತ್ತಿದ್ದರು. ಹೀಗೆ, ಜೋಷಿ ಮತ್ತು ಶೆಟ್ಟರ್ ಕುಂಡಿ ಸುಡುವಂತೆ ಕೆಲಸ ಮಾಡಿದ್ದ ನಡುಮನಿಯನ್ನು ಎತ್ತಂಗಡಿ ಮಾಡಲು ಇವರಿಬ್ಬರೂ ಭಾರಿ ತಲೆಕೆಡಿಸಿಕೊಂಡಿದ್ದರು.

ಇನ್ನು ಪ್ರಮೋದ್ ಮುತಾಲಿಕ್‌ನಂತೂ ಬಹಳ ಹಿಂದೆಯೇ ನಡುಮನಿ ವಿರುದ್ಧ ಫತ್ವಾ ಹೊರಡಿಸಿದ್ದು ರಾಜ್ಯಾದ್ಯಂತ ಚರ್ಚೆಯಾಗಿತ್ತು. ಕೊಲೆ, ಸುಲಿಗೆ, ಕಿಡ್ನಾಪ್‌ಗಳಂತಹ ಕ್ರಿಮಿನಲ್ ಪ್ರಕರಣಗಳ ವಿಚಾರದಲ್ಲಿ ಉದಾಸೀನತೆ ತೋರುತ್ತಿದ್ದ ನಡುಮನಿ ಕೋಮುಗಲಭೆಗಳ ವಿಚಾರದಲ್ಲಿ ಸೀರಿಯಸ್ ಆಗಿಬಿಡುತ್ತಿದ್ದರು. ಸಂಘಪರಿವಾರದವರು ಎಲ್ಲಾದರೂ ಕೋಮು ಗಲಭೆ ಎಬ್ಬಿಸಲು ಪ್ರಯತ್ನಿಸುತ್ತಿದ್ದಾರೆಂಬ ವಾಸನೆ ಬಡಿದ ತಕ್ಷಣ ಭಜರಂಗಿಗಳ ಚೆಡ್ಡಿ ಕಳಚಲು ಹೋಗಿಬಿಡುತ್ತಿದ್ದರು. ಹುಬ್ಬಳ್ಳಿ ಮಸ್ಕಿ ಕೋರ್ಟ್ ಆವರಣದಲ್ಲಿ ಮುತಾಲಿಕನ ಪ್ರೇರಣೆಯಿಂದ ಬಾಂಬ್ ಬ್ಲಾಸ್ಟ್ ಆದ ತಕ್ಷಣವೇ ಕಾರ್ಯಪ್ರವೃತ್ತರಾದ ನಡುಮನಿ 14 ಜನ ಭಜರಂಗಿಗಳನ್ನು ಬಂಧಿಸಿ ಸತ್ಯ ಹೊರಗೆಡವಲು ಪ್ರಯತ್ನಿಸಿದ್ದರು. ಹುಬ್ಬಳ್ಳಿ ನಗರ ಟೆರರಿಸ್ಟ್‌ಗಳ ತಾಣವಾಗುತ್ತಿದೆ ಎಂದು ಭಜರಂಗಿಗಳು ಬೊಬ್ಬೆಯಿಟ್ಟು ಮುಸ್ಲಿಮರನ್ನು ಗುರಿ ಮಾಡುತ್ತಿದ್ದಾಗ ಇದೇ ನಡುಮನಿ ಕೊನೆತನಕ ಅದನ್ನು ಅಲ್ಲಗಳೆಯುತ್ತಾ ಬಂದಿದ್ದರು.







ಪ್ರಹ್ಲಾದ್ ಜೋಷಿ

ಇಡೀ ವ್ಯವಸ್ಥೆಯೇ ಭ್ರಷ್ಟಗೊಂಡಿರುವಾಗ ನಡುಮನಿ ಮಾತ್ರ ತುಂಬಾ ಪ್ರಾಮಾಣಿಕರಾಗಿ ಬದುಕುವುದು ಕಷ್ಟ, ಬಿಡಿ. ಆದರೆ ಇವರು ಚೆಡ್ಡಿಗಳ ನರಕತ್ತರಿಸುವಲ್ಲೂ ಅಷ್ಟೇ ಕ್ರಿಯಾಶೀಲವಾಗಿದ್ದುದು ಸಂಘಪರಿವಾರಿಗಳಿಗೆ ಸಹಿಸಲಾಗಲಿಲ್ಲ. ಈಗ ನಡುಮನಿ ಸ್ಥಾನಕ್ಕೆ ಬಂದಿರುವ ಶಿವಕುಮಾರ್ ಪಕ್ಕಾ ಚೆಡ್ಡಿಗಳ ತಾಳಕ್ಕೆ ಕುಣಿಯುವ ಹೇತ್ಲಾಂಡಿ. ಈಗ ಹುಬ್ಬಳ್ಳಿ-ಧಾರವಾಡ ಅವಳಿನಗರಗಳ ಭವಿಷ್ಯವನ್ನು ಯಾರು ಬೇಕಾದರೂ ಹೇಳಬಹುದು. ಒಂದೆಡೆ, ರಾಜ್ಯದಲ್ಲಿ ಯಡ್ಡಿ ನೇತೃತ್ವದ ಬಿಜೆಪಿ ಸರ್ಕಾರ, ಇನ್ನೊಂದೆಡೆ ಹುಬ್ಬಳ್ಳಿ-ಧಾರವಾಡದಾದ್ಯಂತ ಬೇರುಬಿಟ್ಟಿರುವ ಭಜರಂಗದಳ, ಆರ್‌ಎಸ್‌ಎಸ್, ವಿಎಚ್‌ಪಿಗಳ ಅಟ್ಟಹಾಸ, ಮಗದೊಂದೆಡೆ ಇಡೀ ಜಿಲ್ಲೆಯಾದ್ಯಂತ ಆರಿಸಿಬಂದಿರುವ ಬಿಜೆಪಿ ಎಮ್ಮೆಲ್ಲೆಗಳು, ಇವರೆಲ್ಲರ ತಾಳಕ್ಕೆ ತಕ್ಕಂತೆ ಕುಣಿಯಲು ಗೆಜ್ಜೆ ಕಟ್ಟಿಕೊಂಡು ನಿಂತಿರುವ ಶಿವಕುಮಾರ್ ಎಂಬ ಪೊಲೀಸ್ ಕಮೀಷನರ್. ಒಟ್ಟಿನಲ್ಲಿ ಹುಬ್ಬಳ್ಳಿ -ಧಾರವಾಡಗಳಲ್ಲಿ ಮೋದಿ ರಾಜ್ಯದ ಸ್ಯಾಂಪಲ್ ಪರೀಕ್ಷೆಗಳು ನಡೆಯುವುದಂತೂ ಸತ್ಯ.

■ ಹುರುಳಿಕುಪ್ಪಿ ವಿನಯ್



ಗೋಪಾಲ್ ಹೊಸೂರ್ ಬೇಕಿತ್ತಂತೆ!

ನಾರಾಯಣ ನಡುಮನಿಯನ್ನು ಅವಳಿನಗರದಿಂದ ಸಾಗಹಾಕಿದ ಮೇಲೆ ಆ ಸ್ಥಾನಕ್ಕೆ ಜೋಷಿ-ಶೆಟ್ಟರ್ ಜೋಡಿ ಆಯ್ಕೆ ಮಾಡಿದ್ದು ಬೆಂಗಳೂರಿನ ಕ್ರೈಮ್ ಬ್ರಾಂಚಿನಲ್ಲಿದ್ದ ಗೋಪಾಲ್ ಹೊಸೂರ್ ಅವರನ್ನು. ಗೋಪಾಲ್ ಹೊಸೂರ್ ಕೂಡ ಅದ್ಯಾಕೋ ಹುಬ್ಬಳ್ಳಿ-ಧಾರವಾಡಕ್ಕೆ ಹಾರಲು ಕುಕ್ಕರಗಾಲಿನಲ್ಲಿ ಕೂತಿದ್ದರಂತೆ. ಆದರೆ, ಅನಂತಕುಮಾರ್ ಬಣದಲ್ಲಿರುವ ಜೋಶಿ-ಶೆಟ್ಟರ್ ಇಬ್ಬರೂ [illegible] ಆಟ ಮುಂದುವರೆಸುವುದಕ್ಕೆ ಯಡ್ಡಿ ಬಿಡ್ತಾರಾ?

ಗೋಪಾಲ್ ಹೊಸೂರ್ ಹುಬ್ಬಳ್ಳಿಗೆ ಕಮೀಷನರ್ ಆಗಿಹೋದರೆ, ಆತ ಶೆಟ್ಟರ್ ಮತ್ತು ಜೋಷಿ ಹೇಳಿದಂತೆ ಕೇಳಲು ಆರಂಭಿಸಿಬಿಟ್ಟರೆ ಯಡ್ಡಿಯ ಕಂಟ್ರೋಲ್ ಒಂದಿಷ್ಟು ತಪ್ಪಿದಂತಾಗಿಬಿಡುತ್ತದೆ. ಅದಕ್ಕಾಗಿಯೇ ಯಡ್ಡಿ ಗೋಪಾಲ್ ಹೊಸೂರ್ ಅನ್ನು ಅಲ್ಲಿಗೆ ಹೋಗಲು ಬಿಡಲಿಲ್ಲ. ಬದಲಿಗೆ ಯಡ್ಡಿ ನಿಷ್ಠನಾಗಿರುವ ಶಿವಕುಮಾರ್‌ನನ್ನು ಕಳಿಸಲಾಗಿದೆ. ಶಿವಕುಮಾರ್ ತಕ್ಷಣ ಅಲ್ಲಿಗೆ ಹೋಗದಂತೆ ತಡೆಯಲು [illegible] ಇಬ್ಬರೂ ಪ್ರಯತ್ನಿಸಿದರು. ಆದರೆ ಯಡ್ಡಿಯ ತಂತ್ರದೆದುರು ಅವರ ಕುತಂತ್ರ ಫಲಿಸಲಿಲ್ಲ.

ಕಷ್ಟಪಟ್ಟು ನಾರಾಯಣ ನಡುಮನಿಯನ್ನು ಎತ್ತಂಗ[illegible] ಅದರ ಜಾಗಕ್ಕೆ ಬಂದಿದ್ದು ಯಡ್ಡಿ ಶಿಷ್ಯ! ಹುತ್ತಕಟ್ಟ[illegible] ಜೋಷಿ-ಶೆಟ್ಟರ್ ಪಾಡು.

ಶೃಂಗೇರಿ: ಕಪಟ ಪಾಂಡುರಂಗನಿಗೆ ಶಾರದಾಪೀಠದ ಬೆಂಬಲ!



ಈತನ ಹೆಸರು ಪಾಂಡುರಂಗ. ಶೃಂಕೋನ ಎಂಬ ತಗಡು ಪತ್ರಿಕೆಯ ಸಂಪಾದಕ ಎಂಬ ಬೋರ್ಡು ತಗಲುಹಾಕಿಕೊಂಡು ಪಾಖಂಡಿ ಕೃತ್ಯಗಳಲ್ಲಿ ತೊಡಗಿರುವ ಪುಣ್ಯಾತ್ಮ. ತನಗಾಗದವರ ಬಗ್ಗೆ, ತನ್ನ ಚೆಡ್ಡಿ ಪರಿವಾರವನ್ನು ವಿರೋಧಿಸುವವರ ಬಗ್ಗೆ ತನ್ನ ಪತ್ರಿಕೆಯಲ್ಲಿ ತುಚ್ಛವಾಗಿ ಬರೆದು ಮೈಪರಚಿಕೊಳ್ಳುವ ಖಯಾಲಿ ಇರುವವ. ವೇದಾಂತ ಬೊಗಳುತ್ತಲೇ ಗಾಳವನ್ನು ಹಾಕುವುದರಲ್ಲಿ ನಿಸ್ಸೀಮ. ಸಮಾಜ ಸೇವೆ ಅಂತ ಮಾತನಾಡುತ್ತಲೇ ಕಳ್ಳದಂಧೆ ನಡೆಸುವ ಚತುರ. ಎದುರಾಡಿದವರನ್ನು ಸಂಪಾದಕನೆಂಬ ಬೋರ್ಡು ತೋರಿಸಿಯೇ ಹೆದರಿಸಬಲ್ಲ ಚಾಣಾಕ್ಷ. ಆದರೆ, ದುರಂತ ಎಂದರೆ ಈತನ ಐಲುಪೈಲುಗಳಿಗೆ ಬೆಂಬಲಕ್ಕೆ ನಿಂತವರು ಕೇವಲ ಸಂಘಪರಿವಾರಿಗಳಲ್ಲ, ಪೊಲೀಸ್ ಅಧಿಕಾರಿಗಳೂ ಮಾತ್ರವಲ್ಲ; ಖುದ್ದು ಶಾರದಾಪೀಠದ ಆಡಳಿತಾಧಿಕಾರಿ ಗೌರಿಶಂಕರ ಎಂಬುದು ಬಹಳ ಜನಕ್ಕೆ ಗೊತ್ತಿರಲಿಕ್ಕಿಲ್ಲ!



ಪಾಂಡುರಂಗನೆಂಬ ಈ ಕಳ್ಳನಿಗೆ ಸಾಥ್ ನೀಡುತ್ತಿರುವ ಇನ್ನೊಬ್ಬ ಕಿಡಿಗೇಡಿ ಎಂದರೆ ಕಾರಂತ್. ಈ ಇಬ್ಬರೂ ಸೇರಿ ಶೃಂಗೇರಿ ಎಂಬ ಪವಿತ್ರ ಸ್ಥಳದಲ್ಲಿ ಮಾಡದೇ ಬಿಟ್ಟಿರುವ ಅಪವಿತ್ರ ಕೆಲಸಗಳೇ ಉಳಿದಿಲ್ಲ.

ಪಾಂಡುರಂಗ ಜೆಸಿ ಹೆಸರಿನಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗಿನ ಒಂದು ಶಾಲೆಯನ್ನು ತೆರೆದಿದ್ದಾನೆ. ಜೂನಿಯರ್ ಛೇಂಬರ್‌ಗೂ ತಮ್ಮ ಶಾಲೆಗೂ ಯಾವುದೇ ಸಂಬಂಧವಿಲ್ಲವೆಂದು ಹೇಳುತ್ತಾ ಈ ಭಾಗದ ವಿದ್ಯಾರ್ಥಿಗಳಿಂದ, ಪೋಷಕರಿಂದ ಸಾವಿರಾರು ರೂ. ಸುಲಿಯುತ್ತಾ ಜನಕಂಟಕನಾಗಿ ಬೆಳೆದುನಿಂತಿದ್ದಾನೆ. ಇನ್ನೊಂದೆಡೆಗೆ, ತನ್ನ ಮೇಯುವ ದಂಧೆಗೆ ಶೃಂಗೇರಿಯ ಶಾರದಾಪೀಠವನ್ನು ಬಳಸಿಕೊಳ್ಳುವುದಕ್ಕೂ ಈತ ಹೇಸುವುದಿಲ್ಲ. ಜೆಸಿ ಹೆಸರಿನಲ್ಲಿ ಶೃಂಗೇರಿ ಶಾರದಾಂಬೆಗೆ ಈತ ಮಾಡುವ ದೀಪೋತ್ಸವ ಕಾರ್ಯಕ್ರಮ ದುಡ್ಡು ಮೇಯುವ ಇವನ ಇನ್ನೊಂದು ದಂಧೆ. ಅದೆಷ್ಟು ಶಾರದೆಯ ಭಕ್ತರ ದುಡ್ಡು ಪಾಂಡುರಂಗನ ಜೇಬು ಸೇರಿದೆಯೋ ಖುದ್ದು ಆ ಶಾರದೆಗೂ ಗೊತ್ತಿರಲಿಕ್ಕಿಲ್ಲ.

ಪಾಂಡುರಂಗನ ದಗಲ್ಬಾಜಿ ದಂಧೆಗಳು ಈ ಭಾಗದ ಜನರಿಗೆ ಗೊತ್ತಿಲ್ಲವೆಂದಲ್ಲ, ಆದರೂ ಇವನ ವಿರುದ್ಧ ಸೆಟೆದು ನಿಲ್ಲಲು ಒಂದಿಷ್ಟು ಅಂಜಿಕೆಯಂತೂ ಇದ್ದೇ ಇದೆ. ಏಕೆಂದರೆ ಶಾರದಾಪೀಠದ ಆಡಳಿತಾಧಿಕಾರಿ ಗೌರಿಶಂಕರ, ಕ್ಷೇತ್ರದ ಎಮ್ಮೆಲ್ಲೆ ಜೀವರಾಜ್‌ನಂತಹ ಘಟಾನುಘಟಿಗಳೇ ಪಾಂಡುರಂಗನ ಬೆನ್ನಿಗಿದ್ದಾರೆಂದ ಮೇಲೆ ಅವನೆಷ್ಟು ಕೊಬ್ಬಿರಬಹುದು ನೀವೇ ಯೋಚಿಸಿ. ಅದೂಅಲ್ಲದೇ, ಎದುರಾಡಿದವರನ್ನು ತನ್ನ ಪತ್ರಿಕೆಯಲ್ಲಿ ತೇಜೋವಧೆ ಮಾಡುವ ಹೀನ ಪ್ರವೃತ್ತಿ ಬೇರೆ ಅವನಿಗೆ ಅಂಟಿಕೊಂಡಿದೆ. ಹೀಗಿದ್ದಮೇಲೆ ಯಾರು ತಾನೆ ಪ್ರತಿಭಟಿಸುತ್ತಾರೆ ಹೇಳಿ?

ಪಾಂಡುರಂಗನ ದಗಲ್ಬಾಜಿಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡಬಹುದು. ಕಳೆದ ತಿಂಗಳ ಕೊನೆಯಲ್ಲಿ ಸರಕಾರಿ ಸರ್ವೇ ನಂಬರ್ 167ರ ಹತ್ತಿರವಿರುವ ಹಾಗೂ ಸರ್ವೇ ನಂಬರ್ 160ರ ಹಿಡುವಳಿ ಮೇಲ್ಭಾಗದಲ್ಲಿರುವ ಪಾಂಡುರಂಗನ ತೋಟದ ಮನೆಯ ಕೊಟ್ಟಿಗೆಯಲ್ಲಿ ಸಾವಿರಾರು ರೂಪಾಯಿ ಮೌಲ್ಯದ ನಾಟಾಗಳ ಅಕ್ರಮ ದಾಸ್ತಾನನ್ನು ಅರಣ್ಯ ಇಲಾಖೆಯ ಸಿಬ್ಬಂದಿ ವಶಪಡಿಸಿಕೊಂಡಿದ್ದಾರೆ. ಅಂದರೆ, ಪಾಂಡುರಂಗ ಕೇವಲ ಶಾಲೆಯ ಡೊನೇಶನ್ ಮೂಲಕ, ಶಾರದಾಂಬೆಯ ದೀಪೋತ್ಸವದ ಮೂಲಕ ಸಾಮಾನ್ಯ ಜನರ ಜೇಬುಗಳಿಗೆ ಕೈಹಾಕುತ್ತಿದ್ದದ್ದು ಮಾತ್ರವಲ್ಲದೇ ಪಶ್ಚಿಮ ಘಟ್ಟದ ಅತ್ಯಮೂಲ್ಯ ಕಾಡನ್ನೂ ಕಡಿದು ಮರಗಳ್ಳತನವನ್ನೂ ಮಾಡುತ್ತಿದ್ದ. ವಿಪರ್ಯಾಸವೆಂದರೆ ಕಳ್ಳತನ ಮಾಡಿದ್ದು ಪಾಂಡುರಂಗ, ಆದರೆ ಸಿಕ್ಕಿಹಾಕಿಕೊಂಡಿದ್ದು ಅವನ ತೋಟದ ಮನೆಯಲ್ಲಿ ಕೆಲಸ ಮಾಡುತ್ತಿದ್ದ ರಾಜಾನಗರದ ನಿವಾಸಿ ಮಂಜಪ್ಪ ಮತ್ತು ಆನಂದ ಎಂಬ ಅಮಾಯಕರು.

ಪಾಂಡುರಂಗ ಅಕ್ರಮವಾಗಿ ಅಮೂಲ್ಯ ಕಾಡನ್ನು ಕಡಿದು ನಾಟಾಗಳನ್ನು ಸಾಗಿಸುತ್ತಿರುವ ವಿಚಾರ ಅರಣ್ಯ ಇಲಾಖೆಗೆ ಈತನಕ ಗೊತ್ತಿರಲಿಲ್ಲವೆಂದೇನಲ್ಲ. ಏಕೆಂದರೆ, ಪಾಂಡುರಂಗನ ಈ ಮರಗಳ್ಳತನ ಕಳೆದ ಹತ್ತಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಸುಳಗೋಡು, ಕಡಾವಡಿ ಮುಂತಾದ ಕಡೆಯಲ್ಲಿ ತನ್ನದೇ ಜಮೀನಿನ ಅಕ್ಕಪಕ್ಕದಲ್ಲಿರುವ ಸರ್ಕಾರಿ ಅರಣ್ಯದಲ್ಲಿ ಅರ್ಧದಷ್ಟು ಮರಗಳನ್ನು ಈತ ಖಾಲಿ ಮಾಡಿ ಹಾಕಿದ್ದಾನೆ. ಶೃಂಗೇರಿಯಲ್ಲಿರುವ ತನ್ನ ಎರಡು ಅಪಾರ್ಟ್‌ಮೆಂಟ್‌ಗಳಿಗೆ, ಖಾಸಗೀ ಶಾಲೆಗೆ, ತನ್ನದೇ ಆದ ಶೃಂಕೋನ ಎಂಬ ವಾಣಿಜ್ಯ ಸಂಕೀರ್ಣಕ್ಕೆ ಹಾಕಿರುವ ಮರಗಳೆಲ್ಲವನ್ನೂ ಈತ ಸರ್ಕಾರಿ ಅರಣ್ಯದಿಂದಲೇ ಕದ್ದು ತಂದಿದ್ದಾನೆ. ಕಾಡಿನಲ್ಲಿರುವ ಅಮೂಲ್ಯ ಮರಗಳನ್ನು ಕಡಿಯುವುದು, ಅವುಗಳನ್ನು ತೋಟದ ಮನೆಗೆ ತಂದು ಕೊರೆಸುವುದು (ಇದಕ್ಕಾಗಿ ತೋಟದ ಮನೆಯಲ್ಲಿ ಒಂದು ಚಿಕ್ಕ ಸಾಮಿಲ್ಲನ್ನೇ ಕಟ್ಟಿಕೊಂಡಿದ್ದ), ಅವುಗಳನ್ನು ಸುತ್ತಮುತ್ತಲ ಪ್ರದೇಶಗಳಲ್ಲಿ ಮಾರಾಟ ಮಾಡುವುದು – ಎಲ್ಲವೂ ಜನರಿಗಿಂತ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಚೆನ್ನಾಗಿ ಗೊತ್ತಿತ್ತು. ಆದರೆ, ಪಾಂಡುರಂಗ ತನ್ನ ಮರಗಳ್ಳತನದಲ್ಲಿ ಬಂದ ಲಾಭದಲ್ಲಿ ಒಂದು ಪಾಲನ್ನು ನೇರವಾಗಿ ಅರಣ್ಯ ಸಂರಕ್ಷಣಾಧಿಕಾರಿ ಸುಬ್ರಹ್ಮಣ್ಯನಿಗೆ ಪ್ರತೀ ತಿಂಗಳು ತಲುಪಿಸುವುದನ್ನು ಮರೆತಿರಲಿಲ್ಲ. ಹಾಗಾಗಿಯೇ ಈತನಕ ಪಾಂಡುರಂಗನ ಮೇಲೆ ಒಂದೇ ಒಂದು ಕೇಸು ದಾಖಲಾಗಿಲ್ಲ.

ಆದರೆ ಜನ ಪಾಂಡುರಂಗನ ವಂಚನೆ, ಕಳ್ಳತನದಿಂದ ರೋಸಿಹೋಗಿದ್ದರು. ಕೆಲವು ಸಂಘಸಂಸ್ಥೆಗಳಂತೂ ಈತನ ವಿರುದ್ಧ ಕಿಡಿ ಕಾರುತ್ತಿದ್ದವು. ಅವರೆಲ್ಲಾ ಸೇರಿ ಪಾಂಡುರಂಗನ ತೋಟದ ಮನೆಯಲ್ಲಿ ಅಕ್ರಮವಾಗಿ ನಾಟಾ ಸಂಗ್ರಹಿಸಿಟ್ಟಿರುವುದನ್ನು ಅರಣ್ಯ ಸಂರಕ್ಷಣಾಧಿಕಾರಿ ಸುಬ್ರಹ್ಮಣ್ಯನಿಗೆ ಹೇಳಿದರು. ಪಾಪ ಅವರಿಗೆಲ್ಲಿ ಗೊತ್ತಿತ್ತು ಸುಬ್ರಹ್ಮಣ್ಯನ ಬೆಂಬಲದಲ್ಲೇ ಪಾಂಡುರಂಗ ಈ ದಂಧೆ



ಮಾಡುತ್ತಿದ್ದಾನೆ ಎಂದು? ಯಾವಾಗ ಸುಬ್ರಹ್ಮಣ್ಯನೂ ಕ್ರಮ ಕೈಗೊಳ್ಳಲಿಲ್ಲವೋ ಸಾರ್ವಜನಿಕರು ನೇರವಾಗಿ ಕೊಪ್ಪ ವಿಭಾಗದ ಡಿ.ಎಫ್.ಓ ರವಿಯವರಿಗೆ ಮೊರೆ ಹೋದರು. ಕೂಡಲೇ ಕಾರ್ಯಪ್ರವೃತ್ತರಾದ ರವಿ ಆರ್‌ಎಫ್‌ಓ ಸುಬ್ರಹ್ಮಣ್ಯನಿಗೆ ಆದೇಶ ನೀಡಿಬಿಟ್ಟರು.

ಈಗ ಸುಬ್ರಹ್ಮಣ್ಯನಿಗೆ ಇಬ್ಬಂದಿಯ ಸ್ಥಿತಿ ಎದುರಾಗಿ ಬಿಟ್ಟಿತು. ಅಷ್ಟು ಹೊತ್ತಿಗಾಗಲೇ ಪಾಂಡುರಂಗನಿಂದ ಅಮೇಧ್ಯ ತಿಂದು ಮಲಗಿದ್ದ ಸುಬ್ರಹ್ಮಣ್ಯ ಅದ್ಹೇಗೆ ಪಾಂಡುರಂಗನನ್ನು ಅರೆಸ್ಟ್ ಮಾಡುತ್ತಾನೆ? ಕೊನೆಗೆ ಪಾಂಡುರಂಗನೇ ಒಂದು ಐಡಿಯಾ ಕೊಟ್ಟು ತನ್ನ ತೋಟದ ಮನೆಯಲ್ಲಿ ಕೆಲಸಕ್ಕಿರುವ ಆನಂದ ಮತ್ತು ಮಂಜಪ್ಪ ಎಂಬುವವರನ್ನು ಬಂಧಿಸಲು ಹೇಳಿದ್ದಾನೆ. ಸುಬ್ರಹ್ಮಣ್ಯ ಅದನ್ನು ಮಾಡಿದ್ದಾನೆ. ಅಂತೂ ಪಾಂಡುರಂಗನ ದಗಲ್ಬಾಜಿಗೆ ಮತ್ತಿಬ್ಬರು ಅಮಾಯಕರು ಬಲಿಯಾಗಿ ಕೇಸು ದಾಖಲಾಗಿದೆ. ಅಂತೆಯೇ ಪಾಂಡುರಂಗನ ಪಾಪದ ಕೊಡವೂ ತುಂಬುತ್ತಾ ಬಂದಿದೆ. ಜನರೇ ಈತನ್ನು ಬೀದಿಯಲ್ಲಿ ಬೆತ್ತಲೆ ಮಾಡಿ ಬಾರಿಸುವ ದಿನಗಳು ದೂರ ಇಲ್ಲ ಅಂತ ಕಾಣುತ್ತೆ.


■ ಅಜೀಜ್ ಕಿರಗುಂದ

ದಾವಣಗೆರೆ

ಕ್ರೈಸ್ತರ ಮೇಲೆ ಚೆಡ್ಡಿಗಳ ದಾಳಿ

ಸಂಘ ಪರಿವಾರದ ಚೆಡ್ಡಿಗಳು ಗುಜರಾತ್ ಮಾದರಿಯ ಆಡಳಿತವನ್ನು ಕರ್ನಾಟಕದಲ್ಲಿ ಅಧಿಕೃತವಾಗಿ ಜಾರಿಗೊಳಿಸುತ್ತಿರುವ ಸೂಚನೆಗಳು ದಾವಣಗೆರೆ ಜಿಲ್ಲೆಯಲ್ಲಿ ಸ್ಪಷ್ಟವಾಗಿ ಕಾಣಿಸುತ್ತಿದೆ. ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಮೇಲೆ ದಾವಣಗೆರೆ ತಾಲ್ಲೂಕು ಒಂದರಲ್ಲಿ ನಿರಂತರವಾಗಿ ಇದೇ ತಿಂಗಳ ಮೂರು ಭಾನುವಾರಗಳಂದು ಐದಾರು ಕಡೆ ಚೆಡ್ಡಿಗಳು ಕ್ರಿಶ್ಚಿಯನ್ ಪ್ರಾರ್ಥನಾ ಮಂದಿರಗಳ ಮೇಲೆ ದಾಳಿ ಮಾಡಿ ಅಲ್ಲಿನ ಪಾಸ್ಟರುಗಳ ಮೇಲೆ ಹಲ್ಲೆ ನಡೆಸಿರುವುದಲ್ಲದೆ ಬೈಬಲ್ ಇನ್ನಿತರ ವಸ್ತುಗಳನ್ನು ನಾಶಗೊಳಿಸಿ ತುಳಿದಾಡಿ ಕೇಕೆ ಹಾಕಿದ್ದಾರೆ. ಹೀಗೆ ದಾಳಿ ಮಾಡುವ ಪ್ರತೀ ಬಾರಿಯೂ 30-35 ಮಂದಿ ಸಂಘ ಪರಿವಾರದ ಗೂಂಡಾಗಳು ಭಾಗವಹಿಸಿ ಕ್ರಿಶ್ಚಿಯನ್ನರ ಮೇಲೆ ಹಲ್ಲೆ ನಡೆಸಿರುವುದಲ್ಲದೆ ಹಲ್ಲೆಗೊಳಗಾದವರನ್ನೇ ಪೊಲೀಸ್ ಠಾಣೆಗೆ ಎಳೆದೊಯ್ದು ರಾಜಕೀಯಾಧಿಕಾರವನ್ನು ಬಳಸಿಕೊಂಡು ಪೊಲೀಸರ ಮೇಲೆ ಒತ್ತಡ ಹೇರಿ ಕ್ರಿಶ್ಚಿಯನ್‌ರ ಮೇಲೇ ದೂರು ದಾಖಲಿಸುವುದರ ಮೂಲಕ ತಮ್ಮ ಕೋಮುದ್ವೇಷದ ಹಿತಾಸಕ್ತಿಯನ್ನು ಕಾಯ್ದುಕೊಂಡಿದ್ದಾರೆ.

ಆನುಗೋಡು ಚರ್ಚಿಗೆ ನುಗ್ಗಿ ದಾಂಧಲೆ



ಜುಲೈ 6ರಂದು 30-35 ಮಂದಿ ಇದ್ದ ಸಂಘ ಪರಿವಾರದ ಗೂಂಡಾಗಳು ದಾವಣಗೆರೆಗೆ 11 ಕಿ.ಮೀ ದೂರವಿರುವ ಆನುಗೋಡಿನ ಪ್ರಾರ್ಥನಾ ಮಂದಿರದೊಳಗೆ ನುಗ್ಗಿ ದಾಂಧಲೆ ಎಬ್ಬಿಸಿ ಪಾಸ್ಟರ್ ಬೈಲಾ ಅವರನ್ನು ಪೊಲೀಸರಂತೆ ಇಂಟರಾಗೇಶನ್ ಮಾಡಿ 'ಮತಾಂತರ ಮಾಡುತ್ತಿದ್ದೀಯ ನಿನ್ನನ್ನು ಜೀವಸಹಿತ ಬಿಡುವುದಿಲ್ಲ' ಎಂದು ಬೆದರಿಸಿದ್ದಾರೆ. ಪ್ರಾರ್ಥನೆಗೆ ಬಂದಿದ್ದವರನ್ನು ಹೆದರಿಸಿ, ಅವರನ್ನು ಹೊರಗೆ ಕಳುಹಿಸಿ ಪಾಸ್ಟರ್ ಬೈಲಾ ಒಬ್ಬರನ್ನೇ ಏಕಾಂಗಿಯನ್ನಾಗಿ ಮಾಡಿ ಹಲ್ಲೆ ನಡೆಸಲು ಯತ್ನಿಸಿದ್ದಾರೆ. ಆದರೆ ಬೈಲಾರವರ ಅನುಚರರು ಅಲ್ಲಿಂದ ಕದಲದೇ ಕುಳಿತಾಗ ಕೋಮುವಾದಿಗಳ ಕುತಂತ್ರವು ಫಲಿಸಿಲ್ಲ. ಹಾಗಾಗಿ ಅಂಥಿನ ಪ್ರಾರ್ಥನೆಯನ್ನು ನಿಲ್ಲಿಸಿದ್ದರ ಜೊತೆಗೆ ಪ್ರಾರ್ಥನೆಗೆ ಬಂದಿದ್ದವರಲ್ಲಿ ಭೀತಿಯ ವಾತಾವರಣವನ್ನು ಸೃಷ್ಟಿಸಿ ಮತ್ತೆ ಬರುತ್ತೇವೆಂದು ಹೇಳಿಹೋಗಿದ್ದಾರೆ.




ಉಚ್ಚಂಗಿ ದುರ್ಗದ ಪ್ರಾರ್ಥನಾಮಂದಿರ ಮೇಲೆ ದಾಳಿ?

ಜುಲೈ 13ರ ಭಾನುವಾರದಂದು ಉಚ್ಚಂಗಿದುರ್ಗದ ಪ್ರಾರ್ಥನಾ ಮಂದಿರದಲ್ಲಿ ಪ್ರಕಾಶ ನಾಯ್ಕ ಮತ್ತು ಕರಿಬಸಪ್ಪ ಎಂಬುವವರ ಮೇಲೆ ಸಂಘಪರಿವಾರದ ಗೂಂಡಾಗಳು ಹಲ್ಲೆ ನಡೆಸಿ ಬೈಬಲನ್ನು ಹರಿದುಹಾಕಿ ಸಂಗೀತದ ಪರಿಕರಗಳನ್ನು ಒಡೆದುಹಾಕಿದ್ದಾರೆ. ಸಂಘ ಪರಿವಾರದ ಗೂಂಡಾಗಳು ಕರಿಬಸಪ್ಪನ ಹಣೆಗೆ ಹೆಲ್ಮೆಟ್‌ನಿಂದ ಹೊಡೆದಾಗ ಹೆಲ್ಮೆಟ್ ಒಡೆದು ಚೂರಾಗಿದೆ! ಕರಿಬಸಪ್ಪನ ಕಣ್ಣಿನ ಮೇಲ್ಭಾಗ ಊದಿಕೊಂಡು ಆತನ ಕಣ್ಣು ದೃಷ್ಟಿ ಕಳೆದುಕೊಳ್ಳುವ ಹಂತ ತಲುಪಿದೆ. ಕೋಮುವಾದಿಗಳು ಅಲ್ಲಿಂದ ಹೊರಡುವಾಗ ಕರಿಬಸಪ್ಪನನ್ನು ನೆಲಕ್ಕೆ ಕೆಡವಿ ತುಳಿದು, ಆತನ ಮೊಬೈಲ್ ಸೆಟ್‌ನ್ನು ಕಸಿದುಕೊಂಡಿದ್ದಾರೆ.

ಹಲ್ಲೆಗೊಳಗಾದ ಪ್ರಕಾಶ ನಾಯ್ಕ ಮತ್ತು ಕರಿಬಸಪ್ಪ ಅರಸೀಕೆರೆ (ದಾವಣಗೆರೆ ಜಿಲ್ಲೆ) ಪೊಲೀಸ್ ಠಾಣೆಗೆ ದೂರು ನೀಡಲು ಹೋದಾಗ ಪೊಲೀಸರೆಲ್ಲ ಸೇರಿ ಹಲ್ಲೆಗೊಳಗಾದವರಿಗೆ ನೀತಿ ಪಾಠವನ್ನು ಬೋಧಿಸಿದ್ದಾರೆ. ದೂರು ದಾಖಲಿಸಲು ಕರಿಬಸಪ್ಪ ಒತ್ತಾಯಿಸಿದಾಗ ಇಲ್ಲಿನ ಪೊಲೀಸರು ಕಾಟಾಚಾರಕ್ಕೆ ಹಲ್ಲೆ ನಡೆಸಿದವರನ್ನು ಮರುದಿನ ಕರೆಸಿ 'ಇನ್ನೊಮ್ಮೆ ಹೀಗೆ ಮಾಡುವುದಿಲ್ಲ' ಎಂದು ಕರಿಬಸಪ್ಪನಿಗೆ ಹಿಂಬರಹ ಕೊಟ್ಟು ಕಳುಹಿಸಿದ್ದಾರೆಯೇ ಹೊರತು ಸಂಘಪರಿವಾರದ ಮೇಲೆ ದೂರು ದಾಖಲಿಸಿಲ್ಲ.

ವಿನಾಯಕನಗರದ ಪ್ರಾರ್ಥನಾ ಮಂದಿರದ ಮೇಲೆ ದಾಳಿ



ಜುಲೈ 19ರಂದು ಸಂಜೆ ಬೇವಿನಹಳ್ಳಿಯ ಪ್ರಾರ್ಥನಾ ಮಂದಿರಕ್ಕೆ ನುಗ್ಗಿ ದಾಂಧಲೆ ನಡೆಸಿದ್ದ ಸಂಘ-ಪರಿವಾರದವರು ಭಾನುವಾರ ಜುಲೈ 20ರಂದು ದಾವಣಗೆರೆಯ ವಿನಾಯಕನಗರದ ಪ್ರಾರ್ಥನಾ ಮಂದಿರದ ಮೇಲೆ ಬೆಳಗ್ಗೆ 11.30ಕ್ಕೆ ಸುಮಾರು 40 ಮಂದಿ ಇದ್ದ ಸಂಘ ಪರಿವಾರದ ಕೋಮುವಾದಿಗಳು ದಾಳಿ ಮಾಡಿ ಲಕ್ಷ್ಮಣ ನಾಯ್ಕ ಎಂಬ ಪಾಸ್ಟರ್ ಮೇಲೆ ಭೀಕರವಾಗಿ ಹಲ್ಲೆ ನಡೆಸಿದ್ದಾರೆ. ಹಲ್ಲೆಯ ತೀವ್ರತೆಗೆ ಲಕ್ಷ್ಮಣ ನಾಯ್ಕರ ಮೂಗು, ಬಾಯಿಂದ ರಕ್ತ ಸುರಿಯುತ್ತಿದ್ದಾಗ ಯಾವುದೋ ಬಟ್ಟೆಯನ್ನು ತಂದು ಲಕ್ಷ್ಮಣ ನಾಯ್ಕನಿಗೆ ಕೊಟ್ಟು ರಕ್ತವನ್ನು ಒರೆಸಿಕೊಳ್ಳಲು ಹೇಳಿದ್ದಾರೆ. ಇದಾದ ಮೇಲೆ ಆತನನ್ನು ವಿದ್ಯಾನಗರ ಪೊಲೀಸ್ ಠಾಣೆಗೆ ಎಳೆದುಕೊಂಡು ಹೋಗಿ ಲಕ್ಷ್ಮಣ ನಾಯ್ಕನ ಮೇಲೆಯೇ ದೂರು ದಾಖಲಿಸಿದ್ದಾರೆ.


ಈ ಠಾಣೆಯ ಎಸ್.ಐ. ಗೋಪಾಲನಾಯ್ಕ ಹಲ್ಲೆಕೋರರಾದ ಮಣಿಕಂಠ ಮುಂತಾದವರ ಹೆಗಲ ಮೇಲೆ ಕೈಹಾಕಿ ಭಾರಿ ಸ್ನೇಹ ಸಲುಗೆಯಿಂದ ವರ್ತಿಸಿದ್ದಾನಲ್ಲದೇ ತನ್ನ ಗಂಡನಾದ ಲಕ್ಷ್ಮಣ ನಾಯ್ಕರನ್ನು ನೋಡಲು ಬಂದಿದ್ದ ಪ್ರೇಮಾಬಾಯಿಯನ್ನು ಪೊಲೀಸ್ ಠಾಣೆಯೊಳಗೆ ಇಣುಕಿ ನೋಡಲು ಸಹ ಅವಕಾಶ ಮಾಡಿಕೊಡದೆ ತೀರಾ ನೀಚವಾಗಿ ಬಯ್ಯುತ್ತಾ ಹೆದರಿಸಿ ಓಡಿಸಿದ್ದಾನೆ. ಲಕ್ಷ್ಮಣ ನಾಯ್ಕರನ್ನು ತಹಸೀಲ್ದಾರ್ ಕಚೇರಿಗೆ ಕರೆದುಕೊಂಡು ಹೋಗುವ ಮುನ್ನ ಲಕ್ಷ್ಮಣ ನಾಯ್ಕನ ಕೈಗೆ ಬೈಬಲನ್ನು ಕೊಟ್ಟು ಫೋಟೋ ತೆಗೆಸಿದ್ದಾರೆ. ಅಂದು ಭಾನುವಾರವೆಂದು ಗೊತ್ತಿದ್ದರೂ ಪೊಲೀಸರು ವಿನಾಕಾರಣ ತಹಶೀಲ್ದಾರರ ಕಚೇರಿಯ ಹತ್ತಿರ ಕರೆದುಕೊಂಡು ಹೋಗಿ ರಾತ್ರಿ 10 ಗಂಟೆವರೆಗೂ ಕಾಯಿಸಿದ್ದಾರೆ. ರಾತ್ರಿ 11 ಗಂಟೆಗೆ ತಹಸೀಲ್ದಾರ್ ಜಾಮೀನಿನ ಮೇಲೆ ಲಕ್ಷ್ಮಣನಾಯ್ಕರನ್ನು ಬಿಡುಗಡೆ ಮಾಡಿದ್ದಾರೆ. ಲಕ್ಷ್ಮಣನಾಯ್ಕರ ಪತ್ನಿ ಪ್ರೇಮಾಬಾಯಿ ಒತ್ತಾಯದಿಂದಾಗಿ ಪೊಲೀಸರು ಹಲ್ಲೆ ನಡೆಸಿದವರ ಮೇಲೆ ಅನಿವಾರ್ಯವಾಗಿ ಎಫ್‌ಐಆರ್ ದಾಖಲಿಸಿದ್ದಾರೆ.

ಅದೇ ದಿನ ಸಂಜೆ ದಾವಣಗೆರೆಗೆ 6 ಕಿ.ಮೀ ದೂರವಿರುವ ಪುಟಗನಾಳ್ ಗ್ರಾಮದ ಪ್ರಾರ್ಥನಾ ಮಂದಿರದ ಹತ್ತಿರ 25-30 ಮಂದಿ ಸಂಘ ಪರಿವಾರದವರು ಹೋಗಿ ಎಡ್ವಿನ್ ರವಿ ಹಾಗೂ ನಾರಾಯಣ್‌ರವರ ಮೇಲೆ ಹಲ್ಲೆ ನಡೆಸಲು ಪ್ರಯತ್ನಿಸಿದ್ದಾರೆ. ಆದರೆ ಸಂಘಪರಿವಾರದವರ ಸುಳಿವನ್ನು ಅರಿತ ಅಲ್ಲಿನ ಜನರು ಈ ಇಬ್ಬರನ್ನೂ ಬೇರೆ ರಸ್ತೆಯಿಂದ ಊರ ಹೊರಗೆ ಕಳುಹಿಸಿ ಬಚಾವ್ ಮಾಡಿದ್ದಾರೆ. ಅದೇ ದಿನ ಭಗತ್‌ಸಿಂಗ್ ನಗರದ ಚಂದ್ರನಾಯ್ಕ ಎಂಬುವವರ ಮನೆಗೆ ನುಗ್ಗಿ ಸಂಘಪರಿವಾರದವರು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದಿದ ಈತನ ಮೇಲೆ ಮತಾಂತರ ಮಾಡುತ್ತಿರುವ ಆರೋಪ ಹೊರಿಸಿ ಈತನನ್ನು ಎಳೆದಾಡಿ ಪ್ರಾರ್ಥನೆ ಮಾಡಕೂಡದೆಂದು ಹೆದರಿಸಿ ಹೋಗಿದ್ದಾರೆ.



ಪ್ರೇಮಾ


ದಾವಣಗೆರೆಯ ಬಂಬೂ ಬಜಾರ್, ವಿನೋಬನಗರ ಹಾಗೂ ಗಾಂಧಿನಗರ ವಾಸಿಗಳಾದ ಕೆಲವು ಯುವಕರ ಮನಸ್ಸನ್ನು ಕೆಡಿಸಿರುವ ಸಂಘಪರಿವಾರಿಗಳು ಇವರನ್ನು ಕ್ರೈಸ್ತರ ಮೇಲಿನ ದಾಳಿಗಳಿಗೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಮೂರು ವಾರಗಳಿಂದ ನಿರಂತರವಾಗಿ ಕ್ರೈಸ್ತರ ಮೇಲೆ ದಾಳಿಗಿಳಿದಿರುವ ಕೋಮುವಾದಿಗಳು ಇಂತಹ ದಾಳಿ ಹಾಗೂ ಹಲ್ಲೆಗಳನ್ನು ನಡೆಸಿ ಸರ್ಕಾರಿ ಯಂತ್ರಾಂಗವನ್ನು ಹೇಗೆ ಬಳಸಿಕೊಳ್ಳಬಹುದೆಂಬ ತರಬೇತಿಯನ್ನು ಪಡೆದುಕೊಳ್ಳುತ್ತಿದ್ದಾರೆ.



ಪ್ರಕಾಶ್ ನಾಯ್ಕ

ಸಂಘಪರಿವಾರದ ಕೋಮುವಾದಿಗಳನ್ನು ಹೀಗೆಯೇ ಬೆಳೆಯಲು ಬಿಟ್ಟರೆ ಇವರ ದಾಳಿಗಳು ಕೇವಲ ಅಲ್ಪಸಂಖ್ಯಾತರ ಮೇಲಷ್ಟೇ ಅಲ್ಲದೇ ದಲಿತರು, ಪ್ರಗತಿಪರರು ಹಾಗೂ ಜಾತ್ಯತೀತ ಶಕ್ತಿಗಳ ಮೇಲೂ ಕೇಂದ್ರೀಕೃತಗೊಳ್ಳುತ್ತವೆಂಬುದನ್ನು ಕರ್ನಾಟಕ ಸೌಹಾರ್ದಪ್ರಿಯರು ಎಚ್ಚರಗೊಂಡು ಕೋಮುವಾದಿಗಳ ಕುತಂತ್ರಗಳಿಗೆ ತಡೆಯೊಡ್ಡಬೇಕಾಗಿದೆ.

■ ಚಂದ್ರಶೇಖರ ತೋರಣಘಟ್ಟ



ಗಂಧರ್ವರಾ ಸೀಮೆಯಾಯಿತು ಕ್ಷಣದೊಳು ಕಾಡಿನಾ ನಾಡು

ಬೇಂದ್ರೆಯವರ ಈ ಹಾಡು ಕೇವಲ ಬೆಳಗನ್ನಷ್ಟೇ ವರ್ಣಿಸುವುದಿಲ್ಲ, ಅದಕ್ಕಿಂತ ಬೇರೆಯಾದ ಬೇರೇನನ್ನೋ ಹೇಳುತ್ತದೆ ಎಂದು ಒಬ್ಬ ವಿದ್ವಾಂಸರು ಹೇಳಿದ್ದಾರೆ. 'ಇದು ಬರಿ ಬೆಳಗಲ್ಲೋ ಅಣ್ಣ' ಎಂಬ ಕವಿತೆಯ ಕೊನೆಯ ಸಾಲು ಅದನ್ನೇ ಸೂಚಿಸುತ್ತದೆ ಎಂಬುದು ಅವರ ಅಭಿಪ್ರಾಯ. ಅದು ಬೇರೆ ಇನ್ನೇನನ್ನು ಹೇಳುತ್ತದೋ ಗೊತ್ತಿಲ್ಲ. ಆದರೆ ಅದರ ಒಂದು ಸಾಲು ನನ್ನ ಸಂದರ್ಭದಲ್ಲಿ ದಕ್ಕಿದ್ದು ಹೀಗೆ.

ಡಾ. ವಾಸು ಎಚ್.ವಿ.

'ಮೂಡಲ ಮನೆಯಾ ಮುತ್ತಿನ ನೀರಿನ ಎರಕಾವಾ ಹೊಯ್ದಾ ನುಣ್ಣನೆ ಎರಕಾವಾ ಹೊಯ್ದಾ'.... ನಟಿ ಕಲ್ಪನಾ ಬೆಳ್ನೋಡ ಸಿನೆಮಾದಲ್ಲಿ ಕೈಯಲ್ಲಿ ಸಣ್ಣ ಬುಟ್ಟಿಯನ್ನು ಹಿಡಿದು, ಬೆಳಗಿನ ಸೂರ್ಯನ ಎಳೆ ಕಿರಣಗಳಲ್ಲಿ ತೋಯುತ್ತಾ ಈ ಹಾಡನ್ನು ಹಾಡಿರುವುದನ್ನು ನೀವು ಕೇಳಿರುತ್ತೀರಿ. ದ.ರಾ.ಬೇಂದ್ರೆಯವರು ಬರೆದ ಈ ಗೀತೆ ಬೆಳಗಿನ ಕುರಿತಾಗಿ ಇದುವರೆಗೆ ಬಂದಿರುವ ಅದ್ಭುತವಾದ ಗೀತೆಗಳಲ್ಲಿ ಒಂದು. ಪುಟ್ಟಣ್ಣ ಕಣಗಾಲರ ಸಿನೆಮಾಕ್ಕಾಗಿ ವಿಜಯ ಭಾಸ್ಕರ್ ಅವರು ರಾಗ ಸಂಯೋಜನೆ ಮಾಡಿರುವ ಈ ಹಾಡು, ಕ್ಯಾಮೆರಾಮನ್ ಆರ್.ಎನ್.ಕೆ.ಪ್ರಸಾದ್ ಅವರ ಅದ್ಭುತವಾದ ಕೌಶಲ್ಯದ ಕಾರಣದಿಂದ ನಮ್ಮ ಮನಸ್ಸಿನಲ್ಲಿ ಅಚ್ಚರಿ ಮತ್ತು ಉಲ್ಲಾಸವನ್ನು ಉಂಟು ಮಾಡುತ್ತದೆ.

ಮೊದಲಿಗೆ ಈ ಹಾಡನ್ನು ದೂರದರ್ಶನದಲ್ಲಿ ನೋಡಿದಾಗ ನನಗೆ ಅದು ಬಹುವಾಗಿ ಮೆಚ್ಚುಗೆಯಾಗಿತ್ತು, ಆ ನಂತರ ಸುಮಾರು 15 ವರ್ಷಗಳ ಮೇಲೆ ಇದೇ ಗೀತೆಯನ್ನು ಪಿ.ಕಾಳಿಂಗರಾಯರು ಹಾಡಿರುವುದನ್ನು ಪ್ರಸಾರ ಭಾರತಿಯ ಸಿಡಿಯಲ್ಲಿ ಕೇಳಿದೆ. ಇದು 2005ರಲ್ಲಿ, ಕಾಳಿಂಗರಾಯರು ಈ ಹಾಡನ್ನು ವಿಜಯಭಾಸ್ಕರ್ ಅವರ ರಾಗಸಂಯೋಜನೆಗಿಂತ ಬಹಳ ಬೇರೆ ರೀತಿಯಲ್ಲಿ ಹಾಡಿದ್ದಾರೆ. ಆ ಅದ್ಭುತ ಗೀತೆಯ ಚೆಂದವನ್ನು ಕಾಳಿಂಗರಾಯರು ಕೆಡಿಸಿದ್ದರು, ವಿಜಯಭಾಸ್ಕರ್ ಸರಿ ಮಾಡಿದರು ಎಂದು ಕೆಲವರು ಹೇಳುವುದನ್ನು ಕೇಳಿದ್ದೇನೆ. ಅದೇನೇ ಇದ್ದರೂ, ಈ ಎರಡೂ ರಾಗಸಂಯೋಜನೆಗಳು ನನ್ನೊಳಗೆ ಎರಡು ಬೇರೆ ಬೇರೆ ರೀತಿಯ ಸಂವೇದನೆಗಳನ್ನು ಉಂಟುಮಾಡಿದ್ದಂತೂ ನಿಜ.

ಈ ಹಾಡಿನ ಒಂದು ಚರಣ ಹೀಗಿದೆ:

ಗಿಡಗಂಟೆಗಳ ಕೊರಳೊಳಗಿಂದ ಹಕ್ಕಿಗಳ ಹಾಡೂ, ಹೊರಟಿತು ಹಕ್ಕಿಗಳಾ ಹಾಡು

ಗಂಧರ್ವರಾ ಸೀಮೆಯಾಯಿತು ಕಾಡಿನ ನಾಡೂ, ಕ್ಷಣದೊಳು ಕಾಡಿನ ನಾಡು

ಹಾಡಿನ ಎರಡು ಬೇರೆ ಬೇರೆ ರಾಗಗಳು ಬೇರೆ ಬೇರೆ ರೀತಿಯ ಸಂವೇದನೆಗಳನ್ನು ಉಂಟು ಮಾಡುತ್ತಿದ್ದಂತೆ, ಈ ನಿರ್ದಿಷ್ಟ ಸಾಲು ಎರಡು ಬೇರೆ ಬೇರೆ ರೀತಿಯ ಅರ್ಥಗಳನ್ನೂ ನನ್ನೊಳಗೆ ಧ್ವನಿಸುತ್ತಿತ್ತು, ಬಹುಶಃ ಅವತ್ತಿನ ಸಂದರ್ಭವೂ ಅದಕ್ಕೆ ಕಾರಣವಿರಬಹುದು. ಈ ಚರಣದ ಎರಡನೆಯ ಸಾಲು, ನಮ್ಮ ಸಮಕಾಲೀನ ಚಳವಳಿಯೊಂದರ ಮಹತ್ವ ಮತ್ತು ಮಿತಿಗಳೆರಡನ್ನೂ ಸಮರ್ಥವಾಗಿ ಸೂಚಿಸಬಲ್ಲದು ಎಂದು ಯಾಕೋ ತೋರಿತು.

ಕಾಡಿನಲ್ಲಿ ಗಂಧರ್ವರು ಎಂದರೆ ಬೇಂದ್ರೆ ಏನೆಂದು ಕೊಂಡಿರಬಹುದು? ಗೊತ್ತಿಲ್ಲ. ಆದರೆ, ಈಗೊಂದೆರಡು ವರ್ಷಗಳ ಹಿಂದೆ, ಈ ನಾಡಿನಲ್ಲಿ ನಕ್ಸಲೈಟರು ದಿನಬೆಳಗಾಗುವುದರೊಳಗೆ ಕಾಡಿನ ಗಂಧರ್ವರಂತೆ ಕಂಡಿದ್ದಂತೂ ನಿಜ. 2004ರ ನಂತರ ಒಂದು ವರ್ಷ ಕಾಲ ಕರ್ನಾಟಕದಲ್ಲಿ ನಿರಂತರವಾಗಿ ಅದರ ಸುತ್ತ ಚರ್ಚೆ ನಡೆಯಿತು. ಆಂಧ್ರದ ಸರ್ಕಾರ ಅಲ್ಲಿನ ನಕ್ಸಲೈಟರ ಜೊತೆ ಮಾತುಕತೆ ನಡೆಸಿದ್ದುದನ್ನು ಅನುಸರಿಸಿ, ಇಲ್ಲಿನ ಧರ್ಮಸಿಂಗ್ ಸರ್ಕಾರವೂ ನಕ್ಸಲೈಟರ ಜೊತೆ ಮಾತುಕತೆ ನಡೆಸುತ್ತೇವೆಂದು ಘೋಷಿಸಿತ್ತು. ಅಂತಹ ಯಾವುದೇ ಮಾತುಕತೆಯೂ ನಡೆಯದಿದ್ದರೂ ಕರ್ನಾಟಕದಲ್ಲಿ ನಕ್ಸಲೈಟ್ ಚಳವಳಿಯ ವಿಚಾರ ಸಾಕಷ್ಟು ಚರ್ಚೆಯನ್ನುಂಟುಮಾಡಿತ್ತು.

ಆ ವರ್ಷ ಕರ್ನಾಟಕದ ಎಲ್ಲಾ ದಿನಪತ್ರಿಕೆಗಳಲ್ಲಿ, ವಾರಪತ್ರಿಕೆಗಳಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಅದರ ಸುತ್ತ ಚರ್ಚೆ ನಡೆಯಿತು. ಮಲೆನಾಡಿನೊಳಗಂತೂ ಜನಮಾನಸದ ನಡುವೆ ಈ ವಿಷಯ ಯಾವ್ಯಾವುದೋ ರೀತಿಯಲ್ಲಿ ಗುನುಗಾಡುತ್ತಿತ್ತು. ಶಿವಮೊಗ್ಗದ ಗೆಳೆಯರೊಬ್ಬರು ಹೇಳಿದ್ದು: ಈ ಭಾಗದ ಹಳ್ಳಿ/ಪೇಟೆಗಳಲ್ಲಿ ಯಾವುದಾದರೂ ಮದುವೆಗೆ ಹೋದರೂ ಇದೇ ಚರ್ಚೆ ಮಾರಾಯ. ಅದೇ ಸಂದರ್ಭದಲ್ಲಿ ಚಿಕ್ಕಮಗಳೂರಿನಲ್ಲೋ, ಹಾಸನದಲ್ಲೋ ಮತ್ತ್ಯಾರೋ ಸರ್ಕಾರೀ ಕಚೇರಿಗೆ ಪತ್ರವೊಂದನ್ನು ಬರೆದು 'ಈ ನಮ್ಮ ಬೇಡಿಕೆ ಈಡೇರಿಸದಿದ್ದರೆ ಹುಷಾರ್' ಎಂದು ಹೇಳಿ ಕೆಳಗೆ 'ನಕ್ಸಲೀಯರು' ಎಂದು ಬರೆದಿದ್ದರು! ಹೆಬ್ರಿಯೋ, ನಾರಾವಿಯೋ ಎಲ್ಲೋ ಒಂದು ಕಡೆ ಶೌಚಾಲಯದ ಗೋಡೆಗಳ ಮೇಲೂ ಇದೇ ಬರಹ. ಬೆಂಗಳೂರಿನಲ್ಲಿ ಕನ್ನಡ ಸಂಘಟನೆಯೊಂದರಿಂದ ಈ ಚಳವಳಿಯ ಬಗ್ಗೆ ವಿಚಾರ ಸಂಕಿರಣ. ಅದರಲ್ಲಿ ಸಕಲೇಶಪುರದ ಅಂದಿನ ಶಾಸಕ ವಿಶ್ವನಾಥ್ ಹೇಳಿದ ಮಾತು ಇಂದಿಗೂ ನೆನಪಿದೆ 'ಇವತ್ತು ನಮ್ಮಲ್ಲಿನ ಪರಿಸ್ಥಿತಿ ಎಲ್ಲಿಗೆ ಬಂದಿದೆಯೆಂದರೆ ಚಳವಳಿಯವರು ಹೋಗಲಿ, ಈ ರೋಟರಿ ಕ್ಲಬ್ ಲಯನ್ಸ್ ಕ್ಲಬ್‌ಸಂಘದವರೂ ಸಹ ನಮ್ಮ ಬೇಡಿಕೆ ಈಡೇರಿಸದಿದ್ದರೆ ನಾವು ನಕ್ಸಲೀಯರಾಗಬೇಕಾಗುತ್ತದೆ ಹುಷಾರ್- ಎನ್ನುವಂತಾಗಿದೆ'. ಬಹುಶಃ ಈ ಪರಿಯ ಮಾತುಗಳು ಮತ್ತು ಪರ-ವಿರೋಧದ ಚರ್ಚೆಗಳು ಇಂದಿಗೂ ಬೇರೆ ಬೇರೆ ರೂಪದಲ್ಲಿ ಅಲ್ಲಲ್ಲಿ ಕೇಳುತ್ತಲೇ ಇರುತ್ತವೆ. ನಕ್ಸಲೀಯರು ಮಲೆನಾಡಿನ ಕೆಲವು ಹಳ್ಳಿಗಳಲ್ಲಿ ಓಡಾಡಿದ್ದೂ ಸಹ ಪತ್ರಿಕೆಗಳಲ್ಲಿ ಸುದ್ದಿಯೇ. ಗಂಧರ್ವರ ಸುದ್ದಿ.

ಈ ಕವನದ ಎರಡು ರಾಗಗಳಲ್ಲೂ 'ಗಂಧರ್ವರ ಸೀಮೆಯಾಯಿತು ಕಾಡಿನಾ ನಾಡೂ' ಎಂದು ಬಂದು ನಂತರ 'ಕ್ಷಣದೊಳು' ಎಂದು ಒಂದು ಸಣ್ಣ ಮೌನ ಕೊಟ್ಟು ಮತ್ತೆ 'ಕಾಡೀನಾ ನಾಡು' ಎಂದು ಗಾಯಕರು ಮುಂದುವರೆಸುತ್ತಾರೆ. ನಕ್ಸಲೈಟರ ವಿಚಾರದಲ್ಲೂ ಈ ಕ್ಷಣದೊಳಗೆ ಒತ್ತು ಕೊಟ್ಟು ಒಮ್ಮೆ ಯೋಚಿಸಿ. ಆ ಇಡೀ ಕಾಡು ಬಹು ಬೇಗ ನಕ್ಸಲೀಯರ ಕಾಡಾಗಿ ಬಿಟ್ಟದ್ದು ಹೌದಲ್ಲವೇ? ಹಾಗೇನೇ ಅವರುಗಳು ಅಷ್ಟು ಬೇಗ ಗಂಧರ್ವರಾಗಿದ್ದೂ ನಿಜವಲ್ಲವೇ?

ಮೇಲೆ ಹೇಳಿದ ಎಲ್ಲಾ ಅಂಶಗಳಲ್ಲಿ ನಕ್ಸಲೀಯ ಚಳವಳಿಯು ಬಹುಬೇಗ ಪ್ರಸಿದ್ಧಿಗೂ, ಯಾವುದೋ ಅಮೂರ್ತ ಭರವಸೆಯಾಗಿಯೂ, ಕುತೂಹಲದ ಅಂಶವಾಗಿಯೂ ಕಂಡುಬಂದುದು ವ್ಯಕ್ತವಾಗುತ್ತದೆ. ಅದಕ್ಕೆ ಕಾರಣವೇನು ಎಂದು ಯೋಚಿಸಿದರೆ, ಇವು ನಕ್ಸಲೀಯ ಚಳವಳಿಯ ಯಶಕ್ಕಿಂತಲೂ ಈ ವ್ಯವಸ್ಥೆಯ ವೈಫಲ್ಯವನ್ನು ಮತ್ತು ಅದು ಇಂದು ನಾಡನ್ನಾಳುತ್ತಿರುವ ಪ್ರಭುತ್ವದ ಕುರಿತು ಜನರಲ್ಲಿ ಮೂಡಿರುವ ಭಾವನೆಯನ್ನು ಸರಿಯಾಗಿ ಬಿಂಬಿಸುತ್ತದೆಯೆಂದು ನನಗನ್ನಿಸುತ್ತದೆ. ಇನ್ನೊಂದು ಉದಾಹರಣೆಯನ್ನು ನೋಡಿ.

ಕುದುರೆಮುಖ ರಾಷ್ಟ್ರೀಯ ಉದ್ಯಾನದಲ್ಲಿನ ಆದಿವಾಸಿಗಳನ್ನು ಎತ್ತಂಗಡಿ ಮಾಡಬಾರದೆಂಬುದು ನಕ್ಸಲೀಯರ ಪ್ರಮುಖ ಒತ್ತಾಯಗಳಲ್ಲಿ ಒಂದಾಗಿತ್ತು, ಅದುವರೆಗೆ ಇದೇ ವಿಚಾರವನ್ನು ಇಟ್ಟುಕೊಂಡು ಸುಮಾರು ಆರು ವರ್ಷಗಳ ಕಾಲ ಕಾನೂನುಬದ್ಧ ಹೋರಾಟ ನಡೆದಿತ್ತು, ಅದಕ್ಕೆ ನಾಯಕತ್ವ ಕೊಟ್ಟು ಮುನ್ನಡೆಸಿದ್ದ ಕಲ್ಕುಳಿ ವಿಠಲ ಹೆಗ್ಡೆಯವರು ಒಮ್ಮೆ ಯಾವುದೋ ಚರ್ಚೆಯಲ್ಲಿ ಒಂದು ಮಾತನ್ನು ಹೇಳಿದ್ದರು: ನಾವು ಇಷ್ಟು ದಿನ ಸಾವಿರಾರು ಜನರನ್ನು ಸೇರಿಸಿ ಹೋರಾಟ ಮಾಡಿದೆವು. ಮೇಧಾ ಪಾಟ್ಕರ್ ಅವರಂಥವರೇ ನಮ್ಮ ಚಳವಳಿಗೆ ಬಂದು ಹೋದರು. ಅದೆಷ್ಟೋ ಬಾರಿ ಶೃಂಗೇರಿ, ಚಿಕ್ಕಮಗಳೂರು, ಬೆಂಗಳೂರುಗಳಿಗೆ ಹೋಗಿ ಬಂದೆವು. ಒಮ್ಮೆಯೂ ಈ ಸರ್ಕಾರ ನಮಗೆ ಸರಿಯಾಗಿ ಓಗೊಟ್ಟು ಮಾತನಾಡಿಸಲಿಲ್ಲ, ಅದು ಹೋಗಲಿ ಎಂದರೆ ಕರ್ನಾಟಕದ ನಾಗರಿಕ ಸಮಾಜವೂ ಅದಕ್ಕೆ ಅಷ್ಟಾಗಿ ಸ್ಪಂದಿಸಲಿಲ್ಲ. ಈಗ ಒಂದ್ಹತ್ತು ಹುಡುಗರು ಕೋವಿ ಹಿಡಿದುಕೊಂಡು ಕಾಡಿನಲ್ಲಿ ತಿರುಗಾಡಿದ ಕೂಡಲೇ ಸರ್ಕಾರವು ಅವರನ್ನು ಮಾತುಕತೆಗೆ ಕರೆಯುತ್ತೇನೆಂದು ಹೇಳುತ್ತಿದೆ. ಎಲ್ಲಿ ನೋಡಿದರೂ ಅವರದೇ ಚರ್ಚೆ. ವಿಠಲ ಹೆಗ್ಡೆಯವರ ಮಾತಿನಲ್ಲಿ ಸೋಜಿಗ ಮತ್ತು ಬೇಸರಗಳೆರಡೂ ಎದ್ದು ಕಾಣುತ್ತಿತ್ತು.

ನಕ್ಸಲೀಯರು 'ಕ್ಷಣದೊಳು' ಗಂಧರ್ವರಾಗಿದ್ದಕ್ಕೂ ಮತ್ತು ಪ್ರಭುತ್ವವು ಯಾವುದಕ್ಕೆ ಹೇಗೆ ಸ್ಪಂದಿಸುತ್ತಿದೆ ಎಂಬುದಕ್ಕೂ ಇದು ಇನ್ನೊಂದು ಉದಾಹರಣೆಯಷ್ಟೆ. ಆಂಧ್ರದಲ್ಲಿ ವೈ.ಎಸ್. ರಾಜಶೇಖರರೆಡ್ಡಿಯ ಸರ್ಕಾರ ನಕ್ಸಲೈಟರನ್ನು ಮಾತುಕತೆಗೆ ಕರೆದಾಗ ನಕ್ಸಲೈಟ್ ನಾಯಕ ರಾಮಕೃಷ್ಣರವರು ಉಳಿದುಕೊಂಡಿದ್ದ ಗೆಸ್ಟ್‌ಹೌಸ್ ಮುಂದೆ ದೊಡ್ಡ ಕ್ಯೂ ಇತ್ತು. ಪತ್ರಿಕೆಗಳಲ್ಲಿ ಬಂದಿರುವಂತೆ ತಮ್ಮ ಸಮಸ್ಯೆ ಪರಿಹರಿಸಿಕೊಡಿ ಎಂದು ಎರಡು ದಿನಗಳಲ್ಲಿ ಬಂದ ಮನವಿ ಪತ್ರಗಳ ಸಂಖ್ಯೆ ಕೆಲವು ಸಾವಿರಗಳಲ್ಲಿ ಇತ್ತು. ಈ ಚಳವಳಿಯನ್ನು ದಮನ ಮಾಡಿಯೇ ತೀರುತ್ತೇವೆಂದು ಹೊರಡುವ ಸರ್ಕಾರಗಳು ಮೊದಲು ಇದನ್ನು ಯೋಚಿಸಬೇಕು. ಸರ್ಕಾರವನ್ನು ಖಂಡತುಂಡವಾಗಿ ತಿರಸ್ಕರಿಸಿ ಅದನ್ನು ಉಡಾಯಿಸಿ ಹೊಸದೊಂದು ವ್ಯವಸ್ಥೆ ತರುತ್ತೇವೆಂದು ಹೊರಡುವವರು ಜನರ ಕಣ್ಣಿನಲ್ಲಿ ಇಷ್ಟು ಬೇಗ ಗಂಧರ್ವರಂತೆ ಕಾಣುತ್ತಾರೆಂದರೆ ಅದಕ್ಕೇನು ಕಾರಣ? ಜನರು ಕೇವಲ ಕುತೂಹಲದಿಂದಷ್ಟೇ ಈ ಆಸಕ್ತಿ ತೋರುತ್ತಿರುವುದಲ್ಲಾ, ಇಷ್ಟೆಲ್ಲಾ ವರ್ಷಗಳಲ್ಲಿ ನಮ್ಮನ್ನಾಳಿದ ಸರ್ಕಾರಗಳಿಗೆ ಬೇರೆ ರೀತಿಯ ಪರ್ಯಾಯಗಳನ್ನು ಜನರು ಬಯಸುವಷ್ಟು ಪ್ರಭುತ್ವವು ಜನವಿರೋಧಿಯಾಗಿದೆ. ಪ್ರಜಾಪ್ರಭುತ್ವವೆಂಬುದು ಕೇವಲ ತೋರಿಕೆಯ ಮಾತು ಅಷ್ಟೆ. ಪ್ರಜೆಗಳಿಗೆ ಈ ಪ್ರಭುತ್ವದಲ್ಲಿ ನಾಮಮಾತ್ರದ ಪಾತ್ರವಿದ್ದು ದರೋಡೆಕೋರರೆಂದು ಕರೆಯಬಹುದಾದವರು ಪ್ರಭುತ್ವದಲ್ಲಿ ಮುಖ್ಯ ಫಲಾನುಭವಿಗಳಾಗಿದ್ದಾರೆ.

'ಗಂಧರ್ವರಾ ಸೀಮೆಯಾಯಿತು ಕ್ಷಣದೊಳು ಕಾಡಿನಾ ನಾಡು'

ಹೀಗ್ಗೀಗೆ ಬೇಂದ್ರೆಯವರ ಕವನದ ಒಂದು ರಾಗ ನನ್ನಲ್ಲಿ ಈ ಒಂದು ಭಾವವನ್ನು ಮೂಡಿಸಿತು.

ಅಚ್ಚರಿಯೆನಿಸುವ ಅಂಶವೆಂದರೆ ನಕ್ಸಲೀಯರ ಚಳವಳಿಯ ಮುಖ್ಯವಾದ ಮಿತಿಯನ್ನೂ ಇದೇ ಸಾಲು ಧ್ವನಿಸುತ್ತದೆ.

ಗಂಧರ್ವರು, ಸಂತರು, ತ್ಯಾಗಿಗಳು ಆಗುವುದು ಅಷ್ಟು ಸುಲಭದ ಸಂಗತಿಯೇನಲ್ಲ, ಅದಕ್ಕಾಗಿ ನಕ್ಸಲೀಯರ ಬಗ್ಗೆ ನನಗೆ ಮೆಚ್ಚುಗೆಯೂ, ಗೌರವವೂ ಇದೆ. ಆದರೆ ಅಷ್ಟು ಮಾತ್ರ ಆಗುವುದರಿಂದ ಅವರು ತಮ್ಮದೇ ಘೋಷಿತ ಗುರಿಯನ್ನಾದರೂ ಸಾಧಿಸುತ್ತಾರೆಯೇ ಎಂಬುದೇ ಪ್ರಶ್ನೆ. ಇಂದು ಕೊಳೆತು ನಾರುತ್ತಿರುವ ಈ ವ್ಯವಸ್ಥೆಯನ್ನು ಬಿಡಿಬಿಡಿಯಾಗಿ ಬದಲಿಸಬೇಕೆಂದರೂ ಮೊದಲು ಅದನ್ನು ಇಡಿಯಾಗಿ ತಲೆಕೆಳಗು ಮಾಡದೆ ಸಾಧ್ಯವಿಲ್ಲ ಎಂಬುದನ್ನು ನಕ್ಸಲೀಯರು ಪ್ರತಿಪಾದಿಸುತ್ತಾರೆ. ಅದಕ್ಕಾಗಿ ಸಶಸ್ತ್ರ ಚಳವಳಿಯ ಅಗತ್ಯವನ್ನು ಅತ್ಯಂತ ದೃಢವಾಗಿ ನಂಬಿಕೊಂಡಿದ್ದಾರೆ. ಅದರ ಜೊತೆಯಲ್ಲೇ ಇಡೀ ದೇಶದ ಜನತೆಯನ್ನು ತಾವು ಕ್ರಾಂತಿಯೆಡೆಗೆ ಮುನ್ನಡೆಸುತ್ತೇವೆ ಮತ್ತು ಜನರು ಹಾಲಿ ವ್ಯವಸ್ಥೆಯಿಂದ ತೀವ್ರ ಭ್ರಮನಿರಸನ ಹೊಂದಿದ್ದು ಅವರೆಲ್ಲರೂ ತಮ್ಮ ಸಶಸ್ತ್ರ ಚಳವಳಿಯಿಂದ ಸ್ಫೂರ್ತಿಗೊಂಡಿದ್ದಾರೆ ಎಂದು ಅವರು ಭಾವಿಸಿದ್ದಾರೆ. ಸಮಸ್ಯೆ ಕಾಣುವುದೇ ಇಲ್ಲಿ.

ಕರ್ನಾಟಕದ ಮಟ್ಟಿಗಂತೂ ನಕ್ಸಲೀಯರದ್ದು ಒಂದು ಚಳವಳಿ, ಅದೊಂದು ರಾಜಕೀಯ ಪಕ್ಷ ಎಂಬುದು ಸಾರ್ವತ್ರಿಕ ತಿಳಿವಳಿಕೆಯಲ್ಲ. ಶ್ರೀಮಂತರನ್ನು ದೋಚಿ, ಬಡವರಿಗೆ ನೀಡುವ 'ಒಳ್ಳೆಯವರಾದ, ಧೈರ್ಯಶಾಲಿಗಳ' ಒಂದು ಗುಂಪು ಎಂಬುದೇ ಜನಸಾಮಾನ್ಯರ ತಿಳಿವಳಿಕೆ. ಅದರಾಚೆಗೆ ಅದಕ್ಕೊಂದು ವ್ಯವಸ್ಥಿತವಾದ ಸಿದ್ಧಾಂತವಿದೆ (ನಾವು ಒಪ್ಪಬಹುದು ಅಥವಾ ಬಿಡಬಹುದು), ಇಡೀ ಪ್ರಪಂಚದಲ್ಲಿ ಕಮ್ಯುನಿಸಂ ಬರಬೇಕೆಂದು ಅವರು ಹೋರಾಟ ಮಾಡುತ್ತಿದ್ದಾರೆ ಎಂಬುದು ಬಹಳ ಸೀಮಿತ ಜನವಿಭಾಗಕ್ಕೆ ಮಾತ್ರ ಗೊತ್ತಿದೆ. ಬಹುಶಃ ಈಗಲೂ ಅದು ಬಹಳ ಜನರಿಗೆ ಗೊತ್ತಿಲ್ಲ. ಇನ್ನು ಆ ಸಶಸ್ತ್ರ ಚಳವಳಿಯಿಂದ ಸ್ಫೂರ್ತಿಗೊಳ್ಳುವುದು, ಅದರ ಸಕ್ರಿಯ ಪಾಲುದಾರರಾಗುವ ಮಾತಂತೂ ದೂರವೇ ಉಳಿಯಿತು.

ಹೀಗೆ ಜನರನ್ನು ಕೇವಲ ಪ್ರೇಕ್ಷಕರನ್ನಾಗಿಸಿ ಕೆಲವೇ ಧೀರೋಧಾತ್ತ ವ್ಯಕ್ತಿಗಳು ಈ ಸಮಾಜವನ್ನು ಬದಲಾಯಿಸಲು ಸಾಧ್ಯವೇ? ಈ ಸಮಾಜಕ್ಕೆ ನಿಜವಾದ ಅರ್ಥದಲ್ಲಿ ನಾಯಕರಾಗುವುದು ಮತ್ತು ಗಂಧರ್ವರಾಗುವುದು ಎರಡೂ ಬೇರೆ ಬೇರೆ ಅಲ್ಲವೇ? ಗಂಧರ್ವರನ್ನು ಜನರು ಕುತೂಹಲದಿಂದ, ಅಭಿಮಾನದಿಂದ ನೋಡಬಹುದಾದರೂ ತಾವೇ ಹಾಗಾಗಬೇಕೆಂದು ಬಯಸುವವರು ಎಷ್ಟು ಮಂದಿ ತಾನೇ ಇದ್ದಾರು? ಇಂತಹ ಪ್ರಶ್ನೆಗಳನ್ನು ನಕ್ಸಲೀಯ ಚಳವಳಿ ಹಾಕಿಕೊಳ್ಳಬೇಕಿದೆ.

ಮೇಲೆ ಹೇಳಿದ ಸಾಲು ಈ ಗಂಧರ್ವರ ಚಳವಳಿಯ ಮತ್ತೊಂದು ಮಿತಿಯನ್ನೂ ತೋರಿಸಿಕೊಡುತ್ತದೆ. ಗಂಧರ್ವರ ಸೀಮೆಯಾಗಿದ್ದು, ಕಾಡು ಮಾತ್ರವೇ ಆಗಿದೆ. ಬಹಳಷ್ಟು ಜನರಿಗೆ ನಕ್ಸಲೈಟರನ್ನು ಕಾಡಿನಿಂದಾಚೆ ಕಲ್ಪಿಸಿಕೊಳ್ಳುವುದೇ ಆಗಿಲ್ಲ. ಈ ಹಿಂದಿನ ಕಾಂಗ್ರೆಸ್ ಸರ್ಕಾರದಲ್ಲಿ ಅರಣ್ಯ ಮಂತ್ರಿಯಾಗಿದ್ದ ಕೆ.ಎಚ್.ರಂಗನಾಥ್ ಅವರು ಬಾಲಿಶವಾದ ಹೇಳಿಕೆಯೊಂದನ್ನು ಒಮ್ಮೆ ನೀಡಿದ್ದರು. ನಕ್ಸಲೈಟರು ಕರ್ನಾಟಕಕ್ಕೆ ಹೇಗೆ ಬಂದರು ಎಂಬುದು ಹಲವರಿಗೆ ಪ್ರಶ್ನೆ. ಕರ್ನಾಟಕದ್ದೇ ಹಲವು ನಕ್ಸಲೈಟ್ ಸಂಗಾತಿಗಳನ್ನು ಪೋಲೀಸರು ಎನ್‌ಕೌಂಟರ್ ಎಂಬ ಹೆಸರಿನಲ್ಲಿ ಕೊಂದು ಹಾಕುವವರೆಗೆ ಇಲ್ಲಿರುವವರೆಲ್ಲಾ ಆಂಧ್ರದಿಂದ ಬಂದವರು ಎಂದೇ ಸರ್ಕಾರವೂ ಹೇಳುತ್ತಿತ್ತು. ಅರಣ್ಯ ಮಂತ್ರಿಯಾಗಿದ್ದ ರಂಗನಾಥ್ ಅವರು ಪತ್ರಕರ್ತರಿಗೆ ಒಂದು ರೂಟ್ ಮ್ಯಾಪನ್ನೂ ಕೊಟ್ಟರು.

ಆಂಧ್ರದಿಂದ ಕರ್ನಾಟಕಕ್ಕೆ ಬಂದಿರುವ ನಕ್ಸಲೈಟರು ಚಿತ್ರದುರ್ಗ, ಬಳ್ಳಾರಿಯ ನಡುವಿರುವ ಕುರುಚಲು ಕಾಡಿನಿಂದ ಪ್ರವೇಶಿಸಿ, ಚನ್ನಗಿರಿಯ ಮೂಲಕ ಹೊನ್ನಾಳಿ ಶಿಕಾರಿಪುರಗಳನ್ನು ಹಾದು ಮಲೆನಾಡಿನ ಕಾಡು ಸೇರಿಕೊಂಡಿದ್ದಾರೆ ಎಂದು ಅವರು ಹೇಳಿದ್ದರು. ಒಂದು ವೇಳೆ ಆಂಧ್ರದಿಂದಲೇ ಬಂದಿದ್ದರೂ, ಬಸ್ಸು ಹತ್ತಿ ಬರಲು ಸಾಧ್ಯ ಎಂಬುದೂ ಸಹ ಅವರಿಗೆ ಹೊಳೆದಿರಲಿಲ್ಲ. ಈ ನಾಡಿನ ಜನತೆಯ ವಿಮೋಚನೆಗಾಗಿ ಪ್ರಾಣವನ್ನೂ ಕೊಡಲು ಸಿದ್ಧರಾಗಿ ಹೋರಾಟ ಮಾಡುತ್ತಿರುವ ಈ ಚಳವಳಿಗಾರರು ಇದನ್ನು ತಮಾಷೆಯೆಂದು ಲೇವಡಿ ಮಾಡಿ ಸುಮ್ಮನಾಗಿಬಿಡಬಹುದು. ಆದರೆ ನಕ್ಸಲೈಟರು ಕಾಡುಗಳಲ್ಲಿ ಮಾತ್ರ ಗಂಧರ್ವರಂತೆ ಇರಲು ಸಾಧ್ಯ ಎಂಬಂತೆ ಆಗಿರುವುದನ್ನು ಗಮನಿಸಬೇಕು. ಈ ಹೋರಾಟವು ಬಹಳ ಪ್ರಾಬಲ್ಯವನ್ನು ಹೊಂದಿ, ಸಮಾಜದ ಎಲ್ಲಾ ಜನವರ್ಗಗಳನ್ನು ಪ್ರಭಾವಿಸುವ ಮಟ್ಟಕ್ಕೆ ಬೆಳೆದಿದ್ದ ಭಾರತದ ಬೇರೆ ಕೆಲವು ರಾಜ್ಯಗಳಲ್ಲೂ ಈಗೀಗ ಕಾಡಿಗೆ ಮಾತ್ರ ಸೀಮಿತವಾಗಲು ಕಾರಣವೇನು ಎಂಬುದೂ ಸಹ ಮುಖ್ಯವಾದ ಸಂಗತಿಯೇ.

ಬೇಂದ್ರೆಯವರ ಈ ಹಾಡು ಕೇವಲ ಬೆಳಗನ್ನಷ್ಟೇ ವರ್ಣಿಸುವುದಿಲ್ಲ, ಅದಕ್ಕಿಂತ ಬೇರೆಯಾದ ಬೇರೇನನ್ನೋ ಹೇಳುತ್ತದೆ ಎಂದು ಒಬ್ಬ ವಿದ್ವಾಂಸರು ಹೇಳಿದ್ದಾರೆ. 'ಇದು ಬರಿ ಬೆಳಗಲ್ಲೋ ಅಣ್ಣ' ಎಂಬ ಕವಿತೆಯ ಕೊನೆಯ ಸಾಲು ಅದನ್ನೇ ಸೂಚಿಸುತ್ತದೆ ಎಂಬುದು ಅವರ ಅಭಿಪ್ರಾಯ. ಅದು ಬೇರೆ ಇನ್ನೇನನ್ನು ಹೇಳುತ್ತದೋ ಗೊತ್ತಿಲ್ಲ. ಆದರೆ ಅದರ ಒಂದು ಸಾಲು ನನ್ನ ಸಂದರ್ಭದಲ್ಲಿ ದಕ್ಕಿದ್ದು ಹೀಗೆ. ■

ಅಪ್ಪನೂ ಮಗನೂ, ಮಾಯಾವತಿ ಮನೆತಕ್ಕೋಗಿದ್ರಂತೆ!

ಮನಮೋಹನ್‌ಸಿಂಗ್ ಲೋಕಸಭೆಯಲ್ಲಿ ವಿಶ್ವಾಸ ಮತ ಗೆದ್ದಿದ್ದು, ಮತ ಹಾಕದೆ ಇದ್ದವರು ಉಚ್ಚಾಟನೆಗೊಂದಿದ್ದು ಇತ್ಯಾದಿ ಗದ್ದಲದ ಸುದ್ದಿಯ ನಿಜವಾದ ಕಾರಣಗಳು ಕಾಳಮಾವನಿಗೆ ವಿನೊಂದೂ ಅರ್ಥವಾಗಿರಲಿಲ್ಲ; ಆದ್ದರಿಂದ ರಾಜಕೀಯ ವಿಷಯಗಳಲ್ಲಿ ತನಗಿಂತ ಹೆಚ್ಚಿಗೆ ವಿಷಯ ತಿಳಿದುಕೊಂಡಿದ್ದಾನೆಂದು ಭಾವಿಸಿದ್ದ ಸೀರನನ್ನೇ ಕೇಳಲು ತೀರ್ಮಾನಿಸಿ,

"ಅದೇನ್ಲ ಲೋಕಸಭೆ ಗಲಾಟ?" ಎಂದ.

"ಗಲಾಟೇನುಯಿಲ್ಲ, ಅಮೆರಿಕದೋರು ಬಂದು

ಬಯಲು ಸೀಮೆಯ

ಕಟ್ಟೆಪುರಾಣ

■ ಬಿ. ಚಂದ್ರೇಗೌಡ

ನಾವು ನೀವು ಸೇರಿ ಬಾಂಬು ತಯಾರು ಮಾಡನ ಅಂತ ಕೇಳಿದ್ರಂತೆ"

"ಯಾರ್‍ನಾ?"

"ಮನಮೋಹನ್‌ಸಿಂಗನ ಕರದ್ರಂತೆ. ಅದಕಿವುನು ಒಪ್ಪಿಗಂಡು ಆಯ್ತು, ತಯಾರು ಮಾಡನ ಅದಕೇನು ಅಂದನಂತೆ. ಅದ್ಕೆ ಬಿಜೆಪಿಗಳು ಅಮೆರಿಕದೋರು ಜ್ವತೆ ಸೇರಿಕಬ್ಯಾಡ, ಅವುರು ದೇಂಜರ್‍ರು ಅಂತ ಗಲಾಟ ಮಾಡಿದರಂತೆ."

"ಬಾಂಬ ಅವುರೇ ತಯಾರು ಮಾಡಕ್ಕಾಗದಿಲವೆ?"

"ಅಂತಾ ತಲೆ ಇಲವಂತೆ ಅವುರಿಗೆ. ಅದ್ಕೆ ನೀವು ನಾವು ಸೇರಿಕಂಡು ಮಾಡನ, ಮಾಡಿದ್ರಲ್ಲಿ ನಿಮಿಗರ್ದ ನಮಿಗರ್ದ ಅಂತ ಬಂದಿದ್ರಂತೆ. ಅದ್ಕೆ ಇರೋದ ಪಕ್ಷದೋರು ಅಮೆರಿಕದೋರು ಮಾತಿಗೆ ತಪ್ಪೊ ಜನ. ಮಾಡಿದ್ಮೆಲ್ಲ ಅವುರೆ ತಗಂಡೋಗಿ ಕಡಿಗೆ, ಆ ಬಾಂಬ ಪಾಕಿಸ್ತಾನದ ಸಾಬರಿಗೋ, ಚೀನಾದೇಸದೋರಿಗೊ ಮಾರಿ ತಿರಗ ನಮ್ಮ ಮ್ಯಾಲೆ ಬಾಂಬಾಕ್ತರೆ ಅಂತ ಏಟೇ ಹೇಳಿದ್ರು ಕೇಳ್ಳಿಲವಂತೆ ಸಿಂಗ."

"ಇವುನು ವಳ್ಳೆ ಉರಿಸಿಂಗನೆ ಅಂಗರೆ."

"ವಯಿಸಾದ ಮ್ಯಾಲೆ ಮುದುಕ್ರು ಹಟ ಮಾಡದಿಲವೆ, ಅಂಗೆ ಇವುನು ಹಟ ಮಾಡಿದ. ಅದ್ಕೆ ಇವುನ್ನ ಇಳಿಸೇಬುಡನ ಅಂತ ಓಟು ಮಾಡಿದ್ರಂತೆ. ಅದರಲ್ಲಿ ಸಿಂಗನೆ ಗೆದ್ದವುನೆ, ಇದಕೇನೇಳ್ತೀ?"

"ಆದಳತ ಮಾಡೋ ಪಕ್ಷದೋನಲವೆ, ಗೆದ್ದವುನೆ" ಎಂದು ಕಾಳಮಾವ ಹೇಳುವಾಗ ಉಗ್ರಿ, ಜುಮ್ಮಿ ಬಂದರು.

"ಎಲ್ಲಿಗೋಗಿದ್ರೀ?" ಎಂದ ಸೀರ.

"ಎಲ್ಲೂ ಹೋಗಿರಲಿಲ್ಲ, ಆ ಮುದ್ದಣ್ಣಾರ ಮಂಜ, ಪುಡಸಮ್ಮಿ, ಪಾಪ ಇವುರ್‍ಯಲ್ಲ ಜಗ್ಗೇಸನ ತಿತಿಗೋಗಿದ್ರಂತೆ. ಅದ್ನೆ ಹೇಳತಾಯಿದ್ರು, ಕೇಳಿಕಂಡು ನಿಂತಿದ್ವೊ"

"ಅಂಗರೆ ಜಗ್ಗೇಸ ತೀರೋದ್ನೆ?"

"ತೀರೋಗಿಲ್ಲ ಕಣಮಾವ. ಅವುನು ಕಾಂಗ್ರೆಸ್ ಬುಟ್ಬು ಬಿಜೆಪಿ ಸೇರಿದ್ನಲ್ಲಾ, ಅದ್ಕೆ ಕಾಂಗ್ರೆಸ್‌ನೋರು ತಿಥಿ ಮಾಡಿಕಂಡು ಉಂಡರಂತೆ" ಎಂದಳು ಜುಮ್ಮಿ.

"ಅಂಗರೆ ಜಗ್ಗೇಸ ಸತ್ರೆ ತಿಥಿ ಮಾಡಂಗೇಯಿಲ್ಲ?"

"ಅದು ಅವುನ ವಾರಸುಗಾರ್‍ರಿಗೆ ಸೇರಿದ ಮಾತು, ತುರುವೇಕ್ಯರೆ ತಾಲ್ಲೋಕಲಂತು ಸುಮಾರು ಊರಲ್ಲಿ ತಿಥಿ ಮಾಡಿಕಂಡು ಉಂಡ್ರಂತೆ" ಎಂದ ಉಗ್ರಿ.

"ಇವುರು ತಿಥಿ ಮಾಡಿಕಂಡು ಉಂಡ್ರೆ ಉಂಡುದ್ದೆ ಬತ್ತಪ್ಪ, ಅವುನಿಗೇನು ಲಾಸಾಯ್ತು?" ಎಂದ ಕಾಳಮಾವ.

"ಲಾಸೇನು ಆಗದೆಯಿದ್ರು, ಮರಿಯಾದಿ ಹೋಯ್ತೊ?"

"ಮರಿಯಾದಿ ಇದ್ರೆ ತಾನೆ. ಆ ನನ ಮಗನಿಗೆ ಮರಿಯಾದಿ ಇದ್ರೆ ಇಂತ ಕ್ಯಲಸ ಮಾಡತಿದ್ನೆ?" ಎಂದ ಸೀರ.

"ತುರುವೇಕ್ಯರೆ ಜನ ಮಾರಿಕಳೊ ಜನ ಅಂತ ತಿಳಕಂಡು ಬುಟ್ಟಿದ್ದ ಅವುನು. ಈಗ ಗೊತ್ತಾಯ್ತುಯಿರ ಬವುದು" ಎಂದ ಕಾಳಮಾವ.

"ಗೊತ್ತಾಗದೇನು, ಅವುನೇನಾರ ತುರುವೇಕ್ಯರಿಗೆ ಬಂದ್ರೆ ಹುಚ್ಚ ನಾಯಿಗ್ವಡದಂಗೆ ಓಡಿಸ್ಯಾಡಿಕಂಡು ವಡಿತರೆ" ಎಂದ ಉಗ್ರಿ.

"ಯಾರಿಗೊ ಉಗ್ರಿ ಓಡಿಸ್ಯಾಡಿಕಂಡು ವಡಿಯದು?" ಎಂದುಕೊಂಡು ವಾಟಿಸ್ಸೆ ಬಂದ.



"ಜಗ್ಗೇಸನಿಗೆ ಕಣೊ."

"ಅವುನೆಲ್ಲಿ ಸಿಕ್ತನೆ ವಡಿಯಕ್ಕೆ? ಯಲಕ್ಷನ್ನಲಿ ಗೆದ್ದ ಮಾರಿ ಕಂಡ, ದುಡ್ಡು ತುಂಬಿಕಂಡು ಗಾಂಧಿನಗರಕ್ಕೋದ. ಇನ್ನೇನಿದ್ರು 'ಬುಟ್ರು ಸಿಕ್ಕ' 'ಕೈಕೊಟ್ಟ ಖದೀಮ', 'ನೋಟು ಮ್ಯಾಲೆ ಸೀಟು' ಅನ್ನೊ ಸಿನುಮ ತಕ್ಕಂಡು ಬದ್ದಿರತನೆ!"

"ಅದು ನಿಜವೆ ಬುಡು. ಅದ್ಕೆ ಕಣೊ ಅಂಬುರೀಸ ಇವುನ್ನ 'ಲೇ ಸ್ಲಮ್ಮು' ಅಂತ ಕರಿತಿದ್ದಾ!" ಎಂದ ಉಗ್ರಿ.

"ಅಂಬುರೀಸನಿಗೆ ಇಂಥೋರನ ಯಂಗೆ ಮಾತಾಡುಸ್‌ಬೇಕು ಅನ್ನದು ಗೊತ್ತು ಕಣೊ ಉಗ್ರಿ. ಅಂತು ವಳ್ಳೆ ಹೆಸರಿಟ್ಟಿದ್ದ ಇವುನಿಗೆ."

"ಆಗೊಂದು ಸತಿಯ ಜಯಲಲ್ತ ವಾಜಪೇಯಿಗೆ ಕೈಕೊಟ್ಟು ಕೆಡಗಕ್ಕೋಗಿದ್ಲು, ಇದೇ ಮನಮೋಹನ ಸಿಂಗನಂಗೆ ವಾಜಪೇಯಿನು ವಿಶ್ವಾಸಮತ ಕೇಳಿದ್ದ. ಅಂಬುರೀಸ ಒಂದೋಟಾಕಿದ್ರೆ ವಾಜಪೇಯಿ ಗೆದ್ದು ಬುಡೋನು. ಕೋಟಿಗಟ್ಲೆ ದುಡ್ಡೀಸಗಂಡು ಅಂಬುರೀಸ ಓಟು ಮಾಡಬವುದಿತ್ತು, ಆದ್ರು ಅಂತ ಕ್ಯಲಸ ಮಾಡ್ಲಿಲ್ಲ ಕಣೊ ವಾಟಿಸ್ಸೆ" ಎಂದ ಉಗ್ರಿ.

"ಅದು ನಿನಿಗಿಂತ ಚನ್ನಾಗಿ ನನಿಗೂ ಗೊತ್ತು ಕಣೊ ಉಗ್ರಿ. ಇದೇ ದ್ಯಾವೇಗೌಡ ಈಗೇನು ಮಾಡಿದ ಗೊತ್ತೆ? ಒಂದೊಟು ಮಡಿಕಂಡು ಮನಮೋಹನ ಸಿಂಗನತ್ರ ವ್ಯವಹಾರಕ್ಕೋಗಿದ್ನಂತೆ. ಆಗ ಸೋನಿಗಾಂಧಿ 'ಉಸಾರು, ದ್ಯಾವೇಗೌಡ ಮೋಸ್ಸು ದೇಂಜರ್‍ರು' ಅಂದಲಂತೆ. ಆ ಸಿಂಗ ದ್ಯಾವೇಗೌಡ್ರು ಏನು ಮಾತಾಡಿದ್ರು ಕಿವುಡನಂಗಾ

ಜ್ಯೋತಿಷಿ ಬದಲಾಯಿಸಲು ಕರೆ!

ಇದು ಚಾಣಕ್ಯ ತಂತ್ರ!

ಯಾವುದದು?

ಇತರೆ ಪಕ್ಷಗಳ ಶಾಸಕರನ್ನು ತಮ್ಮ ಪಕ್ಷಕ್ಕೆ ಸೆಳೆಯುವುದು!

ಮನೆಹಾಳು ಕೆಲಸವಲ್ಲವೆ ಇದು? ಹಾಗೆಂದು ಹೇಳಿದ ಧೂರ್ತ ಯಾರು? ಕರ್ನಾಟಕದ ಮುಖ್ಯಮಂತ್ರಿಯವರು!

ಇರಲಾರದು. ಪ್ರಜಾಪ್ರಭುತ್ವದ ಮೇಲಿನ ಹಲ್ಲೆ ಇದು. ಒಬ್ಬ ಮುಖ್ಯಮಂತ್ರಿ ಹೀಗೆ ಹೇಳಲು ಸಾಧ್ಯವೇ ಇಲ್ಲ,

ಹೇಳಿದ್ದಾರಲ್ಲ!

ಇದಕ್ಕೇನು ಪುರಾವೆ?

ಅವರ ಮಾತಿಗೆ ತಲೆದೂಗುತ್ತ ನಿಂತಿದ್ದ ಗಡ್ಡದ ಪಡ್ಡೆಹೈದ.

ನಂಬಲಾಗುತ್ತಿಲ್ಲ, ತತ್ವ; ಸಿದ್ಧಾಂತಗಳ ಬಿಟ್ಟು ನಡೆದರೆ ಮೆಚ್ಚನಾ ಪರಮಾತ್ಮನು ಅನ್ನುವ ಪಕ್ಷದ ವರಿಷ್ಠರೇನು ಮಾಡುತ್ತಿದ್ದರು?

ಅವರ ನವರಂಧ್ರಗಳಿಗೂ ಫೆವಿಕಾಲ್ ಹಾಕಿ ಭದ್ರಗೊಳಿಸಲಾಗಿತ್ತು!

ಇವು ಬಾವಿ ಒಳಗಿನ ಕಪ್ಪೆ, ದಾರಮಂದದ ಮೀನುಗಳನ್ನ ನುಂಗೇ ಬ್ರಹ್ಮಾಂಡವನ್ನೇ ನುಂಗಿದಂತೆ. ಸಂಭ್ರಮಿಸಿದರು. ನುಂಗುವ ಭರಾಟೆಯಲ್ಲಿ ಸಮುದ್ರ ಅಂತ ಒಂದಿದೆ, ಅಲ್ಲಿ ತಿಮಿಂಗಿಲಗಳೇ ಇರ್‍ತವೆ, ಭಾರಿಭಾರಿ ಮೀನುಗಳನ್ನೇ ನುಂಗಿ 'ಭಾಜಪ ಜೀರ್ಣೋಭವ' ಅನ್ನಿಸುತ್ತವೆ ಅಂತ ನೆನಪಿಗೇ ಬರಲಿಲ್ಲ,

ದೃಶ್ಯ ಬದಲಾಯಿತು.

'ಪ್ರಜಾಪ್ರಭುತ್ವದ ಕಗ್ಗೊಲೆ'


ಆರ್ಭಟಿಸಿದರು ತತ್ವ; ಸಿದ್ಧಾಂತಗಳ ವರಿಷ್ಠರು!

ಅಬ್ಬಾ ಬಾಯಿ ತೆರೆದರಲ್ಲಾ! "ಮೂಕಂ ಕರೋತಿ ಊಚಾಲಂ' ಮಾಡಿದ ದುಷ್ಕೃತ್ಯ ಯಾವುದು?

ಸಂಸದರಿಗೆ ಹಣ ನೀಡಲಾಗಿತ್ತು!

ಆಶ್ಚರ್ಯ! ಪ್ರಶ್ನೆ ಕೇಳಲೇ ಹಣ ಪಡೆಯುವ ಸಂಸದರು ಇರುವ ಪಕ್ಷ ಅದು. ಹಣ ನೀಡಿದ್ದರೆ ಹಾದರದ ತರಹ ಮುಚ್ಚು ಮರೇಲಿ ನಡೆಸಬೇಕೇ ಪರಂತು ಹೀಗೆ ಹಾದಿರಂಪ ಬೀದಿರಂಪ ಮಾಡುವುದು ಉಂಟೆ ಅಂದರೆ ಅದಕ್ಕಲ್ಲವಂತೆ ಹಣ ನೀಡಿದ್ದು, ವಿಶ್ವಾಸಮತದ ಪರವಾಗಿ ಮತ ನೀಡಲು ಅಂತೆ! ಅಧು ಹೇಗೆ ಪ್ರಚಾರಗೊಂಡಿತು ಅಂದರೆ ತತ್ವ, ಸಿದ್ಧಾಂತಗಳ ಮೂರ್ತರೂಪವೇ ಆಗಿದ್ದ ಮೂವರು ಮಾನಧನ ಭಾಜಪ ಸಂಸದರು ಕೋಟಿ ಹಣ ತುಂಬಿದ್ದ ಚೀಲವನ್ನೇ ಸಂಸತ್ತಿಗೆ ಹೊತ್ತು ತಂದು ಕಂತೆಕಂತೆ ಹಣವನ್ನು ಪ್ರದರ್ಶಿಸಿ ಇದು ತಮಗೆ ಸಮಾಜವಾದಿ ಪಕ್ಷ ಮತದಾನದಿಂದ ಗೈರುಹಾಜರಾಗಲು ನೀಡಿದ್ದ ಮುಂಗಡ ಹಣ ಎಂದು ಸಾರಿದರು!

ಇದು ಅಸಂಸದೀಯ ನಡವಳಿಕೆ; ಸಮಾಜವಾದಿ ಪಕ್ಷ ಹಣ ನೀಡಿದ್ದೇ ಆಗಿದ್ದರೆ ಈ ವಿಷಯವನ್ನು ಸ್ಪೀಕರ್ ಅವರ ಗಮನಕ್ಕೆ ತರಬೇಕಿತ್ತು; ಹಣ ನೀಡಿದವರ ಮೇಲೆ ಕ್ರಮ ಜರುಗಿಸಲು ಕೋರಬೇಕಾಗಿತ್ತು ಎಂದು ಕೆಲವರು



ಭಾವಿಸಬಹುದಾದರೂ, ಹೀಗೆ ಮಾಡಿದ್ದರೆ ಇಡೀ ಪ್ರಸಂಗಕ್ಕೆ ರೋಚಕತೆ ಇರುತ್ತರಲಿಲ್ಲ; ನಾಟಕೀಯ ತಿರುವು ಬರುತ್ತಿರಲಿಲ್ಲ ಎಂಬುದನ್ನು ಮಾನಧನರಾದ ಸಂಸದರು ಅರಿತವಾದ್ದರಿಂದ ಹೀಗೆ ಮಾಡಿರಬಹುದು!

ಇಲ್ಲಿ ಒಂದು ವಿಷಯವನ್ನು ಪ್ರಸ್ತಾಪಿಸಲೇಬೇಕು. ಸಂಸದರ ಬೆಲೆ ಬರೇ ಮೂರು ಕೋಟಿ ರೂಪಾಯಿಯಂತೆ. ಅದೂ ಮುಂಗಡವಾಗಿ ಕೊಟ್ಟಿದ್ದು ಒಂದು ಕೋಟಿ ಅಂತೆ. ವಿಶ್ವಾಸಮತದ ನಂತರ ಇನ್ನೆರಡು ಕೋಟಿ ರೂಪಾಯಿ ನೀಡುವ ವಾಗ್ದಾನ ಮಾಡಿದ್ದರಂತೆ. ಮೂರು ಕೋಟಿ ರೂಪಾಯಿಗಳನ್ನು ಯಾಕೆ ಒಮ್ಮೆಲೆ ನೀಡಲಿಲ್ಲ ಅಂದರೆ ಅವರ ಬಳಿ ಹಣದ ಬರಾ ಅಂತ ಅಲ್ಲವಾದರೂ ಮಾನಧನ ಸಂಸದರು ಅಷ್ಟು ನಂಬಿಕಾರ್ಹರು! ಅವರ ಈ ತರಹದ ನಡವಳಿಕೆಯಿಂದ ಭಾಜಪ ಸಂಸದ ವಿಶ್ವಾಸಾರ್ಹತೆಯನ್ನೇ ಪ್ರಶ್ನಿಸುವಂತೆ ಆಗುತ್ತದಲ್ಲಾ ಅನ್ನುವ ಪ್ರಶ್ನೆ ಅವರ ಮಂದ ಬುದ್ಧಿಗೆ ಹೊಳೆದಿರಲಾರದು. ಅದು ಹಾಗಿರಲಿ. ಒಟ್ಟಾರೆ ವ್ಯವಹಾರ ಎಲ್ಲಿಗೆ ಬಂತು ಅಂದ್ರೆ ತತ್ವಕ್ಕೆ ಒಂದೂವರೆ ಸಿದ್ಧಾಂತಕ್ಕೆ ಒಂದೂವರೆ ಕೋಟಿ ಅನ್ನುವಲ್ಲಿಗೆ ಬಂದು ನಿಂತಿತು. ಅವರಿಗಿಂತ ನಮ್ಮ ಶಾಸಕರೇ ವಾಸಿ. ಏನೋ ಒಬ್ಬ ಶಾಸಕರು ಸಿಕ್ಕಿದ್ದೇ ಸೀರುಂಡೆ ಅಂತ ಕೊಳಚೆ ಮಂಡಳಿ ಅಧ್ಯಕ್ಷನಾಗಿದ್ದೇ ಪಂಚಾಕ್ಷ ಪರಭೋಜನ ಸಿಕ್ಕಿದಂಗಾಯ್ತು ಅಂತ ಭಾಜಪ ಗಣಿಗೆ ಬಿದ್ದರು. ಇನ್ನು ಮೂವರು ಮಂತ್ರಿ ಪದವೀನೆ ತತ್ವ ಸಿದ್ಧಾಂತ ಅಂತ ಚಂಡಿ ಹಿಡಿದು ಪಡಕೊಂಡರು. ಜಗ್ಗೇಸಣ್ಣಾರು ಜಾತಿಗೆಟ್ಟರೂ ಸುಖ ಉಂಡರು. ಹದಿನೈದು ಕೋಟಿ ಹೊಡೆದುಕೊಂಡರಂತೆ. ತತ್ವಕ್ಕೆ ಐದು, ಸಿದ್ಧಾಂತಕ್ಕೆ ಐದು, ಕ್ಷೇತ್ರ ಅಭಿವೃದ್ಧಿಗೆ ಐದು ಇರಬೇಕು! ಒಬ್ಬನೇ ಒಬ್ಬ ಜಗ್ಗೇಸ ಐವರು ಸಂಸದರಿಗೆ ಸಮ ಅಂದ ಹಾಗಾಯಿತು!

ವಿಶ್ವಾಸಮತದ ವಿರೋಧ ಇದ್ದ ಎಲ್ಲ ಪಕ್ಷಗಳ ಶಾಸಕರ ಮುಂದೆ ಹೀಗೆ ಹಣದ ಚೀಲ ಹಿಡಿದಿದ್ದರಾ ಅಂದರೆ ಅಲ್ಲೂ ಲಘು ಬಿಗು ನೋಡಿದ್ದರಂತೆ. ಪ್ರಕಾಶ್ ಕಾರಟ್ ಹೇಳುವಂತೆ ಅವರ ಪಕ್ಷದ ಸಂಸದರ ತಂಟೇಗೆ ಯಾರೂ ತಲೆ ಹಾಕಿಲ್ಲವಂತೆ, ಯಾಕೆಂದರೆ ಅವರಾರೂ ಹಣದ ಆಮಿಷಕ್ಕೆ ಒಳಗಾಗುವರಲ್ಲವಂತೆ. ಅಂದರೆ ಏನಾಯಿತು, ಭಾಜಪ ಸಂಸದರು ಇಂತಹದಕ್ಕೆಲ್ಲ ತಯಾರು ಅಂತ ಸಂಬಂಧಿಸಿದವರಿಗೆ ಢಾಣಾ ಡಂಗೂರ ಹೊಡೆದ ಹಾಗೆ ನಡೆದುಕೊಂಡಿರಬೇಕು!

ಒಳ್ಳೇನು ಒಳ್ಳೇನು ಅಂದದ್ಕೆ, ಅದು ಯಾವ್ವೋನೋ ಒಳ್ಳೇಲಿ ಉಚ್ಚೆ ಹುಯ್ದನಂತೆ. ಹಂಗೆ ಮಾಡಿಬುಟ್ಟರಲ್ಲಾ ಈ ಮನ್‌ಮೋಹನ್ ಸಿಂಗ್‌ಜೀ ಅಂತ ಕೆಲವರು ಪೇಚಾಡ್ತಾ ಇದಾರಂತೆ. ಅವರು ಹಸುವಿನಂತೋರು ಇಂತಹವಕ್ಕೆಲ್ಲ ಕನಸಿನಲ್ಲೂ ಒಪ್ಪೋರಲ್ಲ ಅನ್ನೋದು ಕೆಲವು ಕಾಂಗ್ರೆಸ್ಸಿನವರ ವಾದ. ಆಯ್ತಪ್ಪಾ ಸಂಸತ್ತಿನಲ್ಲಿ ಚೆಲ್ಲಾಡಿದ ಹಣಕ್ಕೇನು ಹೇಳ್ತೀರಿ ಅಂದ್ರೆ 'ಅದೆಲ್ಲ ಭಾಜಪ ಕುತಂತ್ರ! ಪ್ರಧಾನಿಗೆ ಕೆಟ್ಟ ಹೆಸರು ತರಲು ಈ ರೀತಿ ಮಾಡಲಾಗಿದೆ. ಇಂತಹದರಲ್ಲಿ ಅವರು ನಿಸ್ಸೀಮರು' ಅಂತಾರೆ! ಲಲ್ಲೂಪ್ರಸಾದ್ ಯಾದವ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ' ಇವರನ್ನೆಲ್ಲ ಮಂಪರು ಪರೀಕ್ಷೆಗೆ ಒಳಪಡಿಸಬೇಕು; ಅಂದಿದ್ದಾರೆ. ಇದೂ ಘನವಾದ ಸಲಹೆನೇ. ಸಂಸತ್ ಭವನದ ಒಂದು ಮೂಲೆಯಲ್ಲಿ 'ಮಂಪರು ಪರೀಕ್ಷಾ ಕೊಠಡಿ' ಸ್ಥಾಪಿಸಲು ಯೋಚಿಸ ಬಹುದಾಗಿದೆ!

ಮುಲಾಯಂಸಿಂಗ್ ಯಾದವ್ ತಾಂತ್ರಿಕ ಕಾರಣ ಎತ್ತಿದ್ದಾರೆ. ಅವರು ತಂದಿರುವ ಚೀಲಗಳೆಲ್ಲ ಬಹಳ ಚಿಕ್ಕವು. ಅದರಲ್ಲಿ ಒಂದು ಕೋಟಿ ರೂಪಾಯಿ ಇಡಲು ಸಾಧ್ಯವೇ ಇಲ್ಲ ಎನ್ನುವುದು ಅವರ ವಾದ. ಸೂಟ್‌ಕೇಸು, ಬ್ರೀಫ್‌ಕೇಸಿನಲ್ಲಿ ಇಂತಹ ಹಣ ನೀಡುವುದು ಮಾಮೂಲು. ಅವರು ಯಾಕೆ ಚೀಲದಲ್ಲಿ ತುಂಬಿಕೊಟ್ಟರು, ಇವರ ಯೋಗ್ಯತೆ ಇಷ್ಟೆ ಅನ್ನುವುದಕ್ಕೆ ಇರಬಹುದಾ! ಅಲ್ಲ ಆ ಸಂಸದರು ತರುವುದು ತಂದರು. ದೊಡ್ಡ ಚೀಲಗಳನ್ನಾದರೂ ತರಬಾರದಿತ್ತಾ ಅನ್ನುವುದು ಕೆಲವು ವಿರೋಧಿಗಳ ಕುಹಕ! ಇದರ ಕುರಿತು ತನಿಖೆ ಅಂತ ಆದರೆ ಅಂತಹ ಚೀಲಗಳಲ್ಲಿ ಎಷ್ಟು ಹಣ, ಯಾವ ದಿನಾಮಿನೇಷನ್ನು ತುಂಬಬಹುದು ಅನ್ನೋ ಕುತೂಹಲ ತಣಿಸಿಕೊಳ್ಳಬಹುದು!

ಈ ಎಲ್ಲ ಬೆಳವಣಿಗೆಗಳಿಂದ ತೀವ್ರ ಮುಖಭಂಗ ಆಗಿರುವುದು ದೇವೇಗೌಡರಿಗಂತೆ. 'ಅಣು ಒಪ್ಪಂದದ ಪರವೋ ವಿರೋಧವೋ' ಅಂತ ಕೇಳಿದಾಗ ಗೌಡರು 'ನನಗೆ ಕಾಂಗ್ರೆಸ್‌ನವರೂ ಮೋಸ ಮಾಡಿದಾರೆ, ಬಿಜೆಪಿನೂ ಮೋಸ ಮಾಡಿದೆ ಅಂದರಂತೆ! ಅವರ ಉತ್ತರದಿಂದ ದಂಗಾದ ಪತ್ರಕರ್ತರು 'ಅಣುಒಪ್ಪಂದದ ಬಗ್ಗೆ ಸಾರ್'

ಅಣಕ

■ ಎಚ್.ಎಲ್. ಕೇಶವಮೂರ್ತಿ

ಅಂತ ಕೇಳಲಾಗಿ ನೋವು ಬಂದ ಬಸರಿ ತರಹ ನರಳುತ್ತಾ 'ಪಕ್ಷದ ಮುಖಂಡರು ಕುಳಿತು ತೀರ್ಮಾನ ತಗೊಳ್ತೇವೆ ಅಂದರಂತೆ ನರಳುತ್ತಲೇ ಹೋಗಿ ಪ್ರಧಾನಿ ಕಂಡರಂತೆ. ತಮ್ಮ ಬೇಡಿಕೆಗಳೆಂಬ ಪರತ್ತನ್ನು ಅವರ ಮುಂದೆ ಇಟ್ಟರಂತೆ. ಮಾಮೂಲಿನ ಸಮಾಧಸ್ಥ ಸ್ಥಿತಿಯಲ್ಲೇ ಇದನ್ನು ಆಲಿಸಿದ ಪ್ರಧಾನಿಯವರು ಗುರುಗೋವಿಂದಸಿಂಗ್‌ರೇ ಬಂದರೂ ಇವೆಲ್ಲವನ್ನು ಪೂರೈಸಲಾರರು ಎಂಬುದನ್ನು ಬಗೆದು 'ಅಚ್ಛಾ ಅಚ್ಛಾ' ಅಂದರಂತೆ. ಗೌಡರಿಗೆ ಅದು 'ಹುಚ್ಚಾ ಹುಚ್ಚಾ' ಅಂದಂಗೆ ಕೇಳಿಸಿತಂತೆ. ಅಲ್ಲಿಂದ ಕೆಲವೇ ನಿಮಿಷಗಳಿಂದ ಹೊರಬಂದ ಗೌಡರಿಗೆ ಮಾಧ್ಯಮದವರು ತಗುಲಿಕೊಂಡರು. ಇನ್ನೂರ ಎಪ್ಪತ್ತೆರಡು ಸಂಸದರೂ ತಮ್ಮ ಹಿಂದೆ ಇದ್ದಾರೆ ಎಂಬ ಭಾವನೆಯನ್ನು ಮುಖದಲ್ಲಿ ಮೂಡಿಸಿಕೊಂಡು ಗಂಭೀರವದನರಾದರಂತೆ. ಗಡಿಯಾರ ನೋಡಿದರಂತೆ. ಇನ್ನೂ ಜ್ಯೋತಿಷಿ ನಿಗದಿಪಡಿಸಿದ ಶುಭ ಮುಹೂರ್ತ ಬಂದಿರಲಿಲ್ಲ. ಗೌಡರ ಬಾಯಿಂದ ಯಾವ

ಠನಂತೆ. ಅದ್ಕೆ ದ್ಯಾವೇಗೌಡ ಮಗನ್ನ ಕರಕಂಡು ಮಾಯಾವತಿ ನೋಕ್ಕೊವನಂತೆ."

"ಅಂಗರೆ ಮಾಯಾವತಿತಕ್ಕೊದ್ನೆ?" ಎಂದ ಸೀರ.

"ಊ ಚಿಗಪ್ಪ, ದ್ಯಾವೇಗೌಡ್ರು ಮಾಯಾವತಿ ಮನೆ ಬಾಗಲಿಗೆ ೀವೇಟಿಗೆ ಅವ್ರುಳಿಗಂತೂ ಅವುರಪ್ಪನೆ ಬಂದಂಗಾಯ್ತಂತೆ. 'ಆಯಿಯೇ ಜಿ' ಅಂತ ಕರೆದು ಕೂರಿಸಿಗಂಡ್ರಂತೆ. ಇನ್ನ ಕುಮಾರಸ್ವಾಮಿ ನೋಡಿದೇಟಿಗೆ, ಳ್ಳೆ ತಮ್ಮನ್ನೇ ನೋಡಿದಂತಾಗಿ 'ಆಯಿಯೇ ಭಯ್ಯ, ಕ್ಯಾವ್ರೋನ? ಾಯಿ ವ್ರೋನ ಬಾಯ್? ಪೀತೆ ಹೈ ಕ್ಯಾ?" ಅಂತ ಆದರ ಮಾಡಿದ್ಲಂತೆ" ಮ ವಾಟಿಸ್ಸೆ ಹೇಳುವಾಗ ತಟ್ಟನೆ ಜುಮ್ಮಿ,

"ಏನಂದ್ಲಾ ನೀನು?" ಎಂದಳು.

"ಸತ್ಕರಸಿದ್ಲು ಅಂತೆ ಕಣಕ್ಕ."

"ಓ, ಸಿಂದಿಸ್ನಾಕೆ ತಗದಾಕಿದ್ಲು ಅಂತ ಈಗ ಗೊತ್ತಾಯ್ತು ಬುಡ್ರಿ" ದ ಸೀರ ಏನೊ ಹೊಳೆದಂತೆ ಕಣ್ಣುಬಿಟ್ಟ.

"ಅಂತು ಅಪ್ಪ ಮಕ್ಕಳು ಡೆಲ್ಲಿಗೆ ಸಿಪ್ಪಾದ್ರು ಅನ್ನು" ಎಂದ ಉಗ್ರಿ.

"ಅಂಗೆ ಆಯ್ತು. ಇಲ್ಲೇನು ಕ್ಯಲಸಿಲ್ಲ, ಇನ್ನ ಎಂಟತ್ತು ತಿಂಗಳಲ್ಲಿ ಲಕ್ಷನ್ ಬತ್ತದೆ. ಈಗಿರೊ ದುಡ್ಡು ಖರ್ಚು ಮಾಡಿ ಹತ್ತದನ್ನೈದು ು ಬಂದ್ರೆ ತರಡಪ್ಪೊರ್ಸ ಉಪಯೋಗ್ಸಿ ತಿರಗ ಪ್ರಧಾನಿಯಾಗನ ಅಂತ ಟವ್ರುನೆ."

"ಮಾಯಾವತಿ ಬುಡಬೇಕಲ್ಲ ಹೇಳು?" ಎಂದ ಉಗ್ರಿ.

"ಮಾಯಾವತಿನೂ ಮುಟ್ಟಿನೋಡಿ ಕಳಂಗೆ ಏನ್ನಾರ ಮಾಡ್ತನೆ ವೇಗೌಡ."

"ಎಲ್ಲಿಗೆ ಬತ್ತು ನೋಡು ರಾಜಕಾರಣ. ಒಂದು ಸತಿ ಾನಿಯಾಗಿದ್ದೊನತ್ರಕೆ ಮಾಯಾವತಿ ಅಂಥೋರು ಬರಬೇಕೊ, ಇವುರೆ ್ರಳ ಮನೆತಕ್ಕೊಗಬೇಕೊ, ಹೇಳು?"

"ದ್ಯಾವೇಗೌಡ್ರಿಗೆ ಅಂತ ಭೇದಭಾವ ಇಲ್ಲ ಕಣೊ. ಎಲ್ಲಿಗಾದ್ರು ೀಯ್ತರೆ, ಎಲ್ಲಿಗಾದ್ರು ಬತ್ತರೆ, ಅದರಲ್ಲೂ ತಿಥಿ ಊಟಕಂತೂ ಎಲ್ಲಿದ್ರು ್ತರೆ. ಮುಖ್ಯ ತಿಥಿಯಿಂದ ಏನಾದ್ರು ವರ್ಕೌಟಾಗಬೇಕು ಅಷ್ಟೆ" ಎಂದು ಟಿಸ್ಸೆ ಹೇಳುವಾಗ ಕಾಳಮಾವ ಅವನನ್ನ ಅಸಹನೆಯಿಂದ ನೋಡಿದ. ವಾಟಿಸ್ಸೆ,

"ಸಾರಿ ದ್ವಡಪ್ಪ!" ಎಂದ.

■

ರ್ಕಾರ ಹೊರಬರುವುದೋ ಎಂಬ ಕಾತುರ ಮಾಧ್ಯಮದವರಿಗೆ. ಕೊನೆಗೂ ತರು ಬಾಯಿಬಿಟ್ಟರಂತೆ.

'ನಾವು ವಿಶ್ವಾಸಮತದ ವಿರೋಧ ಮತ ನೀಡುತ್ತೇವೆ!'

ಹೌದು ನಾವು ಅಂದರೆ ಎಷ್ಟು ಜನ?

ಗ್ರೇಟ್ ತ್ರೀ ಮೆಂಬರ್ಸ್!

ಅದರಲ್ಲಾಗಲೇ ಒಂದು ಹೊರಗಡೆ ಕಾಲಿಟ್ಟಿತ್ತು. ಪರ ಅಂದಿದ್ದರೆ ಇವರ ಕ್ಕೆ ಇದ್ದವರೇ ಇಬ್ಬರು. ವಿರೋಧ ಅಂದರೆ ಮೂವರು!

ಆದರೆ ನಡದದ್ದೇನು?

ಶಿವಣ್ಣ ಪರವಾಗಿ ಮತ ನೀಡಿದ್ದರು!

ಭಗವಂತ ಕೈಕೊಟ್ಟ. ಶಿವಣ್ಣ ಅದನ್ನ ಗೌಡರಿಗೆ ಕೊಟ್ಟರು!

ದೇವೇಗೌಡರು ಜ್ಯೋತಿಷಿ ಹೇಳಿದ್ದ ಸಮಯಕ್ಕಾಗಿ ಕಾಯ್ದರು ಅಂತ ಳಿದೆನಲ್ಲಾ, ಈಗ ಅದು ನೆನಪಾಯಿತು. ಪ್ರಧಾನಿಯವರು ಅಡ್ವಾಣಿಗೆ ಡಿಸಿದ್ದು ಹಾಗಿರಲಿ. ಅವರು ಮುತ್ತಿನಂತಹ ಒಂದು ಮಾತು ಹೇಳಿದರು- ಡ್ವಾಣಿಯವರೇ ನೀವು ಮೂರು ಸಲ ಅವಿಶ್ವಾಸ ನಿರ್ಣಯ ತರಲು ಈ ಲ್ಕು ವರ್ಷ ಅವಧಿಯಲ್ಲಿ ಪ್ರಯತ್ನಿಸಿದಿರಿ. ಆದರೆ ಯಾವುದೂ ಶಸ್ವಿಯಾಗಲಿಲ್ಲ, ನೀವು ನಿಮ್ಮ ಜ್ಯೋತಿಷಿಯನ್ನು ಬದಲಾಯಿಸಿ.'

ಹೌದು ರಾಜಕಾರಣಿಗಳೆಲ್ಲ ಅವರ ಜ್ಯೋತಿಷಿಗಳನ್ನು ಬದಲಾಯಿಸಿದರೆ ತ್ತಮ. ಹಾಳಾದ ಗೌಡರ ಜ್ಯೋತಿಷಿ 'ಅಣುಒಪ್ಪಂದದ ಪರವಾಗಿ ಮತ ಿದರೆ ನಿಮ್ಮ ಅಭ್ಯುದಯ ಖಾತರಿ' ಅಂತ ಹೇಳಿದ್ದರೆ ಅವರು ಹಾಗೇ ಡುತ್ತಿದ್ದರು! ಈಗ ನೋಡಿ ತುಪ್ಪದ ರೊಟ್ಟಿ ಜಾರಿ ಕೊಚ್ಚೆಗೆ ಬಿದ್ದಿದೆ!


ವಿಶ್ವಾಸಮತ ಕುರಿತ ಚರ್ಚೆಯನ್ನು ದೂರದರ್ಶನದಲ್ಲಿ ನೇರ ಪ್ರಸಾರ ೀಡಿ ಮಾರನೆ ಬೆಳಿಗ್ಗೆ ಪತ್ರಿಕೆ ಕೈಗೆತ್ತಿಕೊಂಡರೆ ಇವರನ್ನು ಹಿಡಿದುಕೊಂಡು ಪ್ಪ ಬಿಡೋಣ ಅನ್ನೊ ಸಿಟ್ಟು ಬರದಿದ್ದರೆ ಕೇಳಿ. ಸಪ್ಪೆ ಭಾಷಣ ಮಾಡುತ್ತಾ ನು ಯಾಕಪ್ಪಾ ಮಾತನಾಡ್ತನೆ, ಬೇಗ ನಿಲ್ಲಿಸಿದರೆ ಸಾಕಲ್ಲಪ್ಪಾ ಅನ್ನೊ ವನೆ ಮೂಡಿಸಿದವನು ಮಾರನೆ ಬೆಳಿಗ್ಗೆ ಪತ್ರಿಕೆಗಳಲ್ಲಿ ಅದ್ಭುತ ಷಣಕಾರನಾಗುತ್ತಿದ್ದ! ಉತ್ತಮವಾಗಿ ವಿಷಯ ಪ್ರಸ್ತಾಪಿಸಿದವರ ಹೆಸರೇ ಲ್ಲ! ಇದು ಪತ್ರಿಕಾ ಹಣ ಧರ್ಮವೋ ಏನೋ!

ಲಲ್ಲೂ ಪ್ರಸಾದ್ ಯಾದವ್ ಅದ್ಭುತ ಭಾಷಣಕಾರ. ವ್ಯಂಗ್ಯ ಹಾಸ್ಯಭರಿತ ಷಣ ಕೇಳಲೇ ಒಂದು ಚಂದ. ವಿಶ್ವಾಸಮತದ ಪರವಾಗಿ ಮಾತನಾಡುತ್ತಾ ದು ವಿಷಯ ಪ್ರಸ್ತಾಪಿಸಿದರು! ಅಣುಒಪ್ಪಂದದಿಂದ ಭಾರತೀಯರು ರಿಕದ ಎದುರು ಎರಡನೆ ದರ್ಜೆಯವರಾಗ್ತೀವಿ ಅಂತ ಹೇಳ್ತಿದೀರಿ. ರಿಕದೊಂದಿಗಿನ ಎಲ್ಲಾ ಸಂಬಂಧವನ್ನೂ ಕಡಿದುಕೊಳ್ಳೋಣ. ನಾವು ರತೀಯರು ತಾನೇ. ಅಮೆರಿಕದಲ್ಲಿ ತಯಾರಾದ ನಿಮ್ಮ ವಾಚುಗಳನ್ನು ಿ. ಅಲ್ಲಿ ಐಷಾರಾಮಿ ಜೀವನ ನಡೆಸುತ್ತಿರುವ ನಿಮ್ಮ ಮಕ್ಕಳನ್ನು ಹಿಂದಕ್ಕೆ . ನಿಮಗೆ ಅಮೆರಿಕದ ವಸ್ತುಗಳು ಬೇಕು. ನಿಮ್ಮ ಮಕ್ಕಳಿಗೆ ಅಮೆರಿಕದಲಿ ಪ್ರಮೀಬೇಕು. ಇದು ಎಂತಹ ಭಾರತೀಯತೆ ಅಂದಾಗ ಭಾಷಣದ ನಡುನಡುವೆ ಷ್ಟಿ ಎಬ್ಬಿಸುತ್ತಿದ್ದ ಸದಸ್ಯರು ಅಂದುಸುಟ್ಟ ಬೆಕ್ಕಿನಂತೆ ನಿಶ್ಶಬ್ದರಾಗಿ ಕುಳಿತರು. ನೆನಪಿಗೆ ಬಂದದ್ದು ಎಂದರೆ ಕನ್ನಡ ಕನ್ನಡ ಅಂತ ಹರಿದುಕೊಳ್ಳುವ ಹಿರಿಯ ಸಾಹಿತಿಗಳು. ಅವರು ಮಕ್ಕಳನ್ನೆಲ್ಲ ಇಂಗ್ಲಿಷ್ ಮಾಧ್ಯಮದ ಗಳಲ್ಲಿ ಓದಿಸಿ ಅಮೆರಿಕಕ್ಕೆ ಅಟ್ಟುತ್ತಾರೆ. ಇಲ್ಲಿ ಮಾತ್ರ ಕನ್ನಡ ಕನ್ನಡ ಅಂತ ಬಾಯಿ ತರಹ ಆಡ್ತಾರೆ.

ಲಲ್ಲೂ ಮಾತನ್ನ ಅವರು ಕೇಳಿಸಿಕೊಂಡಿದ್ದರೆ ಚೆನ್ನಿತ್ತು! ■

ಮಾತು ಮೀರಿದ ದುಗುಡ

ಮರೆಯುವ ಮುನ್ನ



ಪಿ. ಲಂಕೇಶ್ ಅಕ್ಟೋಬರ್ 14,1990

ಮಂಡೇಲಾ ಅವರಿಗೆ ಭಾರತರತ್ನ ನೀಡಲಾಗಿದೆ. ಗರ್ಬಚೋವ್ ನೊಬೆಲ್ ಬಹುಮಾನ ಪಡೆದಿದ್ದಾರೆ. ಮನುಷ್ಯ ಹೇಗೆ ಕ್ರಮೇಣ ಆತ್ಮಗೌರವ, ನಾಚಿಕೆ, ಮಾನವನ್ನೆಲ್ಲ ಕಳೆದುಕೊಳ್ಳಾನೆ... ಎಂಬುದನ್ನು ಬರೆಯಬೇಕೆಂದಿದ್ದೆ, ಅನೇಕ ವಿಷಯಗಳಿದ್ದವು. ಈಚೆಗೆ ನಾನು ಒಂದೆರಡು ಪುಸ್ತಕಗಳ ಬಗ್ಗೆ ಬರೆಯಬಹುದಿತ್ತು, ಆದರೆ ಇಡೀ ಭಾರತವನ್ನು ಆವರಿಸುತ್ತಿರುವ ರಥಯಾತ್ರೆಯ ನೀಚತನ, ರಾಷ್ಟ್ರೀಯ ರಂಗ ಸರ್ಕಾರದ ಭಂಡತನ, ಕರ್ನಾಟಕದಲ್ಲಿ ಆದ ಆತ್ಮವಂಚನೆ ಮತ್ತು ಮಿತ್ರದ್ರೋಹ- ಇದನ್ನು ಬಿಟ್ಟು ಮಂಡೇಲ, ಗರ್ಬಚೋವ್ ಬಗ್ಗೆ ಬರೆಯುವುದು ತಪ್ಪೆನಿಸಿತು. ಮಂಡೇಲ ಅವರಿಗೆ ಭಾರತರತ್ನ ಸಿಕ್ಕಿದ್ದು ಸರಿ; ಆದರೆ ಭಾರತೀಯರಲ್ಲದವರಿಗೆ ಭಾರತರತ್ನ ಕೊಡುತ್ತಾ ಹೋದರೆ ಅದಕ್ಕೆ ಕೊನೆ ಎಲ್ಲಿ; ಗಡಿನಾಡು ಗಾಂಧಿ ಭಾರತೀಯರೇ ಎಂದು ನನ್ನ ಅಭಿಪ್ರಾಯ. ಅಲ್ಲದೆ ನೆಲ್ಸನ್ ಮಂಡೇಲ ಅವರಂಥ ವ್ಯಕ್ತಿಗೆ ಭಾರತರತ್ನ ಕೊಡುವಲ್ಲಿ ಕೂಡ ಅದೊಂದು ಗೆಸ್ಚರ್, ಪೂಸಿ ಮಾಡುವ ರೀತಿ ಎನ್ನುವಂತೆ ಆದದ್ದು ವ್ಯಸನಕರ.




ನಾಲ್ಕು ದಿನ ಇಡೀ ದೇಶದ ಪರಿಸ್ಥಿತಿಯ ಬಗ್ಗೆ ಬೇಸರಗೊಂಡ ನಾನು ಶನಿವಾರ ರಥಯಾತ್ರೆ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಟಿಪ್ಪಣಿ ಮಾಡಿದೆ. ಅಲ್ಲಿ ಮರೆತದ್ದು ಇದೆ. ಬಿಜೆಪಿಗಳ ನೆರವು ಪಡೆದು ಕೇಂದ್ರ ಸರ್ಕಾರ ರಚಿಸಿದೊಡನೆ ಹುಟ್ಟಿಕೊಂಡಿದ್ದು ರಾಮಜನ್ಮಭೂಮಿ ಬಿಕ್ಕಟ್ಟು ಎಂಬುದು ಅನೇಕರಿಗೆ ಗೊತ್ತಿಲ್ಲ, ಪಂಜಾಬ್‌ನಲ್ಲಿ ಪುರೋಹಿತಶಾಹಿಯ ವಿರುದ್ಧ ಇರುವ ಸಿಟ್ಟು, ಕಾಶ್ಮೀರದಲ್ಲಿ ಆರೆಸ್ಸೆಸ್‌ಗಳ ಬಗ್ಗೆ ಇರುವ ಆತಂಕ ಕೂಡಾ ಅನೇಕರಿಗೆ ತಿಳಿಯದು. ವಿ.ಪಿ. ಸಿಂಗ್ ಪಕ್ಷವೊಂದನ್ನು ಕಟ್ಟತೊಡಗಿದಾಗ ಈ ಬಿಜೆಪಿ ಬೆಂಬಲದ ಬಗ್ಗೆ, ಭ್ರಷ್ಟ ಜನತಾದವರ ಸಹಕಾರದ ಬಗ್ಗೆ ನಾವು ಎಚ್ಚರಿಕೆ ನೀಡಿದ್ದು ನಿಮಗೆ ನೆನಪಿರಬಹುದು. ನಮ್ಮ ಎಚ್ಚರಿಕೆಯನ್ನು ಕೇಂದ್ರದವರು ಹೇಗೆ ಗಮನಿಸಲು ಸಾಧ್ಯ?

ಅದಿರಲಿ, ಬಿಜೆಪಿಗಳ, ಆರೆಸ್ಸೆಸ್‌ಗಳ ಕಷ್ಟ ರಾಷ್ಟ್ರೀಯರಂಗದ ಸರ್ಕಾರದ ಕಷ್ಟಗಳಂತೆಯೇ ಇವೆ. ಆದ್ದರಿಂದ ಇವರು ಸಂಧಾನ ಮಾಡಿಕೊಂಡು ರಥಯಾತ್ರೆ ನಿಲ್ಲಿಸಿ ಮುಂದುವರೆಯುವುದು ಖಂಡಿತ; ಹಾಗೆಯೇ ದೇಶವನ್ನು ಇನ್ನೂ ದುರಂತದತ್ತ ಒಯ್ಯುವುದೂ ನಿಶ್ಚಿತ. ಇಲ್ಲದಿದ್ದರೆ ಏನಾಗುತ್ತದೆ ಎಂಬುದನ್ನು ಬಲ್ಲಿರಿ. ಬೇರೆ ಪಕ್ಷಗಳ ಸಹಕಾರವಿಲ್ಲದೆ ಜನತಾದಳವಾಗಲಿ, ಕಮ್ಯುನಿಸ್ಟ್ ಪಕ್ಷವಾಗಲಿ ಗೆಲ್ಲುವುದು ಸಾಧ್ಯವಿಲ್ಲ, ಈಗ ಸರ್ಕಾರ ಉರುಳಿದರೆ ಮತ್ತೆ ಇವರು ಒಟ್ಟಾಗಿ ಹೋಗಿ ಜನರನ್ನು ವಂಚಿಸುವುದು ಕೂಡ ಸಾಧ್ಯವಿಲ್ಲ, ಆದ್ದರಿಂದಲೇ ಸರ್ಕಾರ ಬೀಳುವ ಬಗ್ಗೆ ಇವರೆಲ್ಲರಿಗೂ ಭಯವಿದೆ.

ಹಾಗಾದರೆ ಕಾಂಗ್ರೆ ಈ ದೇಶಕ್ಕೆ ಅಂಟಿಕೊಂಡಿರುವ ಕ್ಯಾನ್ಸರ್. ನೆಹರೂ ಕುಟುಂಬದ ಆಲ್ಸೇಶಿಯನ್‌ಗೆ ಕೂಡ ಕೈಮುಗಿವ ಪಕ್ಷದಿಂದ ಈ ದೇಶದ ವಿನಾಶವನ್ನು ಮಾತ್ರ ನಿರೀಕ್ಷಿಸುವುದು ಸಾಧ್ಯ. ಕಾಂಗ್ರೆಗೆ ದೇಶದ ಜನರ ಶಿಕ್ಷಣವಾಗಲಿ, ಏಳ್ಗೆಯಾಗಲಿ ಬೇಕಿಲ್ಲ; ಈ ದೇಶದ ಜನ ಒಂದಾಗಿ ಬಾಳುವುದೂ ಬೇಕಿಲ್ಲ, ಕುರ್ಚಿಯನ್ನು ಪೂಜಿಸುವುದೇ ಸಿದ್ಧಾಂತವಾಗಿರುವ ಕಾಂಗ್ರೆಸ್ ಕಳೆದ 40 ವರ್ಷದಲ್ಲಿ ದೇಶವನ್ನು ಆರ್ಥಿಕವಾಗಿ, ನೈತಿಕವಾಗಿ ದಿವಾಳಿ ಎಬ್ಬಿಸಿದೆ. ಬಿಜೆಪಿ, ಜನತಾದಳ, ಕಮ್ಯೂನಿಸ್ಟ್‌ರನ್ನು ನೋಡಿದರೆ ಈ ಹುಳುಗಳ ಪಕ್ಷ ಕೂಡ ಸಹನೀಯ ಅನ್ನಿಸುವುದು ನಮ್ಮೆಲ್ಲರ ದುರಂತ.

ಇಷ್ಟೆಲ್ಲ ಮನಸ್ಸಿನಲ್ಲಿದ್ದಾಗ ದುಗುಡ ನನ್ನನ್ನು ಸುಲಭವಾಗಿ ಬರೆಯಲು ಬಿಡುವುದು ಸಾಧ್ಯವೇ?

ಪೃಷ್ಠ



ತುಂಟಾಟ ಕುರಿತು. ನೂರಾರು ಜನ ಗೆಳೆಯರು "ತುಂಟಾಟದ ಜೊತೆಗೆ ಕೆಟ್ಟದಲ್ಲದ ಫೋಟೋ ಹಾಕುವುದರಲ್ಲಿ ತಪ್ಪೇನಿಲ್ಲ..... ಚೆನ್ನಾಗಿದೆ" ಅಂದರೆ ಕೆಲವರು ಆಕ್ಷೇಪಣೆ ಎತ್ತಿದ್ದಾರೆ. ಶಿವಮೊಗ್ಗೆಯ ನಮ್ಮ ಏಜೆಂಟ್, "ನನ್ನ ಗೆಳೆಯರೆಲ್ಲ ಟೀಕಿಸಿದ್ದಾರೆ" ಅಂದಿದ್ದಾನೆ. ನಾನು ಈ ಸಲದಿಂದಲೇ ಅದನ್ನು ನಿಲ್ಲಿಸಬಲ್ಲೆ, ಆದರೆ ನಮ್ಮ ಮಧ್ಯಮ ವರ್ಗದ ಅಂತರಂಗ, ಬಹಿರಂಗ ಪರೀಕ್ಷಿಸಲು ನನಗೆ ಇಷ್ಟ. ನಾನು ಹೆಚ್ಚು ಸಿನಿಮಾಗಳನ್ನು ನೋಡುವುದಿಲ್ಲ, ಆದರೆ ಈ ಚಲನಚಿತ್ರಗಳಲ್ಲಿ, ಅವುಗಳ ಭಿತ್ತಿಪತ್ರಗಳಲ್ಲಿ ಎಂತೆಂಥ ಅಧ್ವಾನದ ದೃಶ್ಯ, ಚಿತ್ರ ಇರುತ್ತವೆಂದು ನೀವು ಬಲ್ಲಿರಿ. ಬೇಲೂರು, ಕೊನಾರಕ್, ಅಜಂತಾ ಚಿತ್ರಗಳ ಬಗ್ಗೆ ನೀವು ಕೇಳಿರಬಹುದು. ವಾತ್ಸಾಯನನವರೆಗೂ ಹೋಗದೆ ದೇವಸ್ಥಾನದ ಗೋಡೆಗಳ ಮೇಲಿನ ಶಿಲಾಬಾಲಿಕೆಯರು ಮತ್ತು ಲೈಂಗಿಕ ಆಸನಗಳು, ವೈಚಿತ್ರಗಳ ಬಗ್ಗೆ ಯೋಚಿಸಿ. ಇದರಿಂದೆಲ್ಲ ನಾನು ಸಮರ್ಥಿಸಿಕೊಳ್ಳುತ್ತೇನೆಂದು ತಿಳಿಯಬೇಡಿ.

ಹೋದ ಸಲ ಬಂದ ಹೆಣ್ಣಿನ ಪೃಷ್ಠದ ಬಗ್ಗೆ ಒಂದು ಮಾತು. ಇದಕ್ಕಿಂತ ವಯಸ್ಸಾದ ಹೆಣ್ಣು ಮಗಳೊಬ್ಬಳನ್ನು ಸಾಲ್ವಡಾರ್ ಡಾಲಿ ಒಮ್ಮೆ ಸಂಧಿಸಿದ. ಕೈಯಲ್ಲಿ ಕ್ಯಾಮರಾ ಇತ್ತು, "ದಯವಿಟ್ಟು ಸ್ವಲ್ಪ ಲಂಗ ಎತ್ತುತ್ತೀರಾ?" ಎಂದು ಕೇಳಿದ. ಆಕೆಯ ಹಿಂಭಾಗದ ಫೋಟೊ ತೆಗೆದು, ಆಮೇಲೆ ಅದರಿಂದ ವರ್ಣಚಿತ್ರ ಬಿಡಿಸಿದ. ಫೋಟೋ ಮತ್ತು ಚಿತ್ರ ಎರಡೂ ಜಗದ್ವಿಖ್ಯಾತವಾದವು.

ನಮ್ಮ ಜನ ಲೈಂಗಿಕ ನೀತಿಯಲ್ಲಿ ಎಷ್ಟು ಕೆಟ್ಟಿದ್ದಾರೆಂದರೆ, ಸಿಲ್ಕ್‌ಸ್ಮಿತಾ ದೃಶ್ಯಕ್ಕಾಗಿ ಕಾಯುತ್ತಾರೆ, ಆದರೆ ಅದಕ್ಕಿಂತ ಸುಂದರ, ನೀತಿವಂತ ಚಿತ್ರ ಕಂಡರೆ ಇಷ್ಟಪಡದಿರುವಂತೆ ವರ್ತಿಸುತ್ತಾರೆ. ಸ್ವಲ್ಪ ರಸಿಕತೆಯ ಚಿತ್ರ, ಫೋಟೋಗಳುಳ್ಳ ಪುಸ್ತಕ ಅವರ ಕೈಗೆ ಸಿಕ್ಕಲಿ- 'ಛೆ' ಎಂದು ಹೀಯಾಳಿಸುವ ಅವರು ಮತ್ತು ಅವರ ಗೆಳೆಯರು ಅದು ಬಳಕೆಯಿಂದ ಚಿಂದಿಯಾಗಿ ಕಣ್ಮರೆಯಾಗುವಂತೆ ಮಾಡದಿದ್ದರೆ ಕೇಳಿ! ಲೈಂಗಿಕತೆಯ ಬಗ್ಗೆ ಪಾತಕಿಗಳು, ಕ್ರಿಮಿನಲ್ ಚಟುವಟಿಕೆಗಳು, ವಿಕೃತಿಗಳು ಹುಟ್ಟುವುದು ಅಂಥ ನಡವಳಿಕೆಯಿಂದಲೇ.

ಈ ಪೃಷ್ಠದ ಚಿತ್ರ ನೋಡಿದ ಗೆಳೆಯನೊಬ್ಬ ಜೋರಾಗಿ ನಕ್ಕು "ಆ ಪುಟದ ಮುಖಗಳ ನಡುವೆ ಅದು.... ಎಷ್ಟು ಚೆನ್ನಾಗಿದೆ" ಎಂದು ಕುಣಿಯತೊಡಗಿದ.

ಸಾಯಿಬಾಬಾ ಕಣ್ತೆರೆದ

ಗೊಬ್ಬರ ಕೇಳಲು
ರೈತರು ಇಳಿದರು ಬೀದಿಗೆ
ಅಬ್ಬರಿಸಿ ಕೆಡವಿದವು
ಗುಂಡುಗಳು ಎದೆಗೆ
ಹೊಲದಲಿ ದುಡಿವ ರೈತ
ವೃತ್ತದಲ್ಲಿ ಪುತ್ಥಳಿಯಾದ
ಕಣ್ಮುಚ್ಚಿಕೊಂಡೆವು ನಾವೆಲ್ಲ,
ಬಾಬಾ ಮಾತ್ರ ಕಣ್ತೆರೆದ

ಶಾಸನಗಳ ಸಂಪತ್ತು
ದುಶ್ಯಾಸನರ ಸಂಪತ್ತು
ಹರಿದು ತಂದಿತ್ತು
ವಿಶ್ವಾಸಮತಕ್ಕೆ ಆಪತ್ತು
ಕಳ್ಳರ ಗುಂಪಿನ ಕದನ
ಕಪ್ಪಾಯಿತು 'ಲೋಕ ಸದನ'
ಕಣ್ಮುಚ್ಚಿಕೊಂಡೆವು ನಾವೆಲ್ಲ
ಬಾಬಾ ಮಾತ್ರ ಕಣ್ತೆರೆದ

ಅಣು ಒಪ್ಪಂದ
ಎಡಪಂಥೀಯರ ಚಕ್ಕಂದ
ಬಲಪಂಥೀಯರ ಸ್ವಚ್ಛಂದ
ಸಿಂಗ್‌ಗಳ ಕೈಗೆ ಕೊಟ್ಟೋನೆ
ವಿಶ್ವದ ದೊಡ್ಡಣ್ಣ-
ಡಾಲರ್‌ಗಳ ಚಿಕ್ಕೊಂದ
'ಬಡತನ-ವಿದ್ಯುತ್-ಶಕ್ತಿಶಾಲಿ ರಾಶಿ
ನಿದ್ರೆ ಇಲ್ಲದವರಿಗೆ ಮತ್ತಷ್ಟು ಕನಸು
ಕಣ್ಮುಚ್ಚಿಕೊಂಡೆವು ನಾವೆಲ್ಲ,
ಬಾಬಾ ಮಾತ್ರ ಕಣ್ತೆರೆದ



■ ದಾದಾಪೀರ್ ತರೀಕೆರೆ

ಪ್ರಜಾವಾಣಿ-ಜನ ಕಲಿತಿದ್ದು ಜಗದೀಶ್ ಮರೆತಿದ್ದು



ಮುಖ್ಯಮಂತ್ರಿ ಯಡಿಯೂರಪ್ಪನವರ ಪತ್ರಿಕಾ ಕಾರ್ಯದರ್ಶಿ ಆರ್.ಪಿ. ಜಗದೀಶ್ ಬಗ್ಗೆ ಒಂದೆರಡು ಮಾತು ಹೇಳಬೇಕಿದೆ.

ದಶಕಗಳ ಕಾಲ ಪ್ರಜಾವಾಣಿಯೊಂದಿಗೆ ಜಗದೀಶರ ಪತ್ರಿಕಾ ವೃತ್ತಿಜೀವನ ಬೆಸೆದುಕೊಂಡಿತ್ತು. ನಿವೃತ್ತಿಯ ನಂತರ ಈಗವರು ಬಿಜೆಪಿಗಳೊಂದಿಗೆ ಇದ್ದಾರೆ. ಅದಕ್ಕೆ ಜಾತಿ, ಅವಕಾಶ(ವಾದ)ಗಳೇ ಪ್ರಮುಖ ಕಾರಣ, ಇರಲಿ....

ಇತ್ತೀಚೆಗೆ ನಮ್ಮ ಕಚೇರಿಯಲ್ಲೊಂದು ಆಹ್ವಾನ ಪತ್ರಿಕೆ ಕಾಣಿಸಿತು. ಇತ್ತೀಚೆಗೆ ವಿಜಯನಗರ ಲೈಬ್ರರಿ ಆವರಣದಲ್ಲಿ ಆಗಸ್ಟ್ ಮೂರಕ್ಕೆ ಅರೆಂಜ್ ಆಗಿರುವ 'ಶ್ರೀ ಗುರುಪೂಜೋತ್ಸವ'ದ ಕಾರ್ಯಕ್ರಮದ ಪತ್ರಿಕೆ. ಅದು.

ಅದರಲ್ಲಿ ಅಧ್ಯಕ್ಷತೆ ಆರ್.ಪಿ. ಜಗದೀಶ್, ಪೂರ್ವ ಪ್ರಧಾನ ಸಂಪಾದಕರು, ಪ್ರಜಾವಾಣಿ ದಿನಪತ್ರಿಕೆ ಎಂದಿತ್ತು, ಮತ್ತು ಅತೀ ಮುಖ್ಯವಾಗಿ ಈ ಗುರುಪೂಜೋತ್ಸವ ನಡೆಸುತ್ತಿರುವವರು ಆರ್‌ಎಸ್‌ಎಸ್‌ನವರು.


ಇಲ್ಲಿ ನಮ್ಮ ಅನುಮಾನ ಇಷ್ಟೆ.

ಜಗದೀಶ್ ದಶಕಗಳ ಕಾಲ ಪ್ರಜಾವಾಣಿಯಲ್ಲಿ ಇದ್ದವರು. ಆ ಪತ್ರಿಕೆಗಿರುವ ಪರಂಪರೆ ನಮಗೆಲ್ಲಾ ಗೊತ್ತಿದೆ. ಸಾಮಾಜಿಕ ನ್ಯಾಯ, ಪೂರ್ವಗ್ರಹವಿರದ ವಸ್ತುನಿಷ್ಠ ಬರಹ, ಬರಹದಲ್ಲಿ ಗಾಂಭೀರ್ಯ, ಸಮಚಿತ್ತತೆ ಪ್ರಜಾವಾಣಿಗಿದ್ದ ವೈಶಿಷ್ಟ್ಯ. ಆಧುನಿಕ ಕನ್ನಡದ ಬಹುತೇಕ ಬರಹಗಾರರಿಗೆ ಆಗ ಪ್ರಜಾವಾಣಿಯೇ ವೇದಿಕೆ, ಪ್ರಜಾವಾಣಿಯ ಲಕ್ಷಾಂತರ ಓದಗರೂ ಸಹ ಈ ಮೌಲ್ಯಗಳನ್ನು ಕಲಿತರು.

ಆದರೆ ಜಗದೀಶ್‌ರೊಳಗೆ ಇದು ನಿಜಕ್ಕೂ ಇಳಿದಿತ್ತಾ? ಪ್ರಜಾವಾಣಿಯೊಳಗೆ ಇದ್ದು, ಅದನ್ನೇ ಉಸಿರಾಡುತ್ತಾ ಬದುಕಿದ ಜಗದೀಶ್ ಇವತ್ತು ಹಿಂದೂ ಕೋಮುವಾದಿಗಳ ಚಿಲ್ಲರೆ ಚಟುವಟಿಕೆಗಳಲ್ಲಿ ಶಾಲಾ ಬಾಲಕನಂತೆ ಹೋಗಿ ಕೂರುತ್ತಾರೆಂದರೆ ಏನು ಹೇಳಬೇಕು.

ಇದು ಬರೀ ಮೌಲ್ಯದ ಪ್ರಶ್ನೆಯಲ್ಲ, ಕಾನೂನಿನ ಪ್ರಶ್ನೆಯೂ ಇದರಲ್ಲಿದೆ. ಏಕೆಂದರೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಗುರುಪೂಜೋತ್ಸವ ಕಾರ್ಯಕ್ರಮ ನಡೆಯಲಿರುವುದು ಸಾರ್ವಜನಿಕ ಲೈಬ್ರರಿ ಕಟ್ಟಡದ ಆವರಣದಲ್ಲಿ, ಅಂದರೆ ಇದು ಯಾವುದೋ ಖಾಸಗಿ ಸ್ಥಳ ಅಲ್ಲ, ಸಾರ್ವಜನಿಕರು ಹಾಗೂ ಸರ್ಕಾರಕ್ಕೆ ಸೇರಿದ್ದು. ಅಂತಲ್ಲಿ ಹಿಂದೂ ಕೋಮುವಾದಿ ಸಭೆ ನಡೆಸುವುದು ತಪ್ಪಲ್ಲವಾ?

ಜಗದೀಶ್ 'ಮೌಲ್ಯ'ಗಳನ್ನು ತ್ಯಜಿಸಿರುವ ಮಾತು ಬಿಡಿ. ಆದರೆ ಕನಿಷ್ಠ ಈ ನೆಲದ ಕಾನೂನನ್ನಾದರೂ ಗೌರವಿಸಲಿ.



Ten Tiny Toes ಎಂಬ ನಾಟಕ

ಈಗ ಇಂಗ್ಲೆಂಡಿನಲ್ಲಿ ಬಹಳ ಪ್ರಶಂಸೆಗೊಳಗಾಗಿರುವ ಒಂದು ನಾಟಕ ಇದು.

'Love' ಸಬ್ಜೆಕ್ಟ್ ಇಟ್ಟುಕೊಂಡು ಒಂದು ನಾಟಕ ಬರೆಯಲು ತಯಾರಾಗಿದ್ದ ಮಿಸೆಸ್ ವಿಲ್ಸನ್ ಎಂಬಾಕೆ ಆಕಸ್ಮಾತ್ತಾಗಿ ಒಮ್ಮೆ ಕೆಲವು 'ಅಮ್ಮಂ'ದಿರನ್ನು ಭೇಟಿಯಾಗುತ್ತಾಳೆ. ಇರಾಕ್ ಯುದ್ಧಕ್ಕೆ ತಮ್ಮ ಮಕ್ಕಳನ್ನು ಕಳುಹಿಸಿ ಸದಾ ಆತಂಕದಲ್ಲಿ, ಎಲ್ಲಿ ಮಕ್ಕಳ ಸಾವಿನ ಸುದ್ದಿ ಕೇಳಬೇಕಾಗಿ ಬರುತ್ತದೊ ಎಂಬ ಭೀತಿಯಲ್ಲಿ ದಿನ ಕಳೆಯುತ್ತಿರುವ ತಾಯಂದಿರವರು. ಬರಹಗಾರರಿರುವ ಸಹಜ ಕುತೂಹಲದಿಂದ ವಿಲ್ಸನ್ ವಿಚಾರಿಸಿದಾಗ ಹೃದಯವಿದ್ರಾವಕ ವಿವರಗಳೆಲ್ಲಾ ಹೊಸಬೀಳುತ್ತವೆ.

ಈಗ ಇರಾಕ್ ಹಾಗೂ ಅಫಘಾನಿಸ್ತಾನದಲ್ಲಿ ಹೆಚ್ಚು ಸಂಖ್ಯೆಯಲ್ಲಿರುವುದೇ ಅಮೆರಿಕನ್ ಹಾಗೂ ಬ್ರಿಟಿಷ್ ಸೈನಿಕರು. ಇದೊಂದು ಅನ್ಯಾಯದ ದಮನಕಾರಿ ಯುದ್ಧ ಎಂಬುದು ನಮಗೆಲ್ಲಾ ಗೊತ್ತಿದೆ. ಈ ತಾಯಂದಿರೂ ಸಹ **'Military Families Against The War'** ಎಂಬ ಗುಂಪು ಕಟ್ಟಿ ಈ ಯುದ್ಧಗಳನ್ನು ವಿರೋಧಿಸುತ್ತಿದ್ದಾರೆ. 'ನಮ್ಮ ಮಕ್ಕಳು ಮಹೋನ್ನತ ಧ್ಯೇಯಕ್ಕಾಗಿ ಪ್ರಾಣ ತೆತ್ತರೆಂಬ ಹೆಮ್ಮೆಯೂ ನಮಗೆ ಉಳಿಸದಂಥ ಯುದ್ಧ ಇದು' ಎನ್ನುತ್ತಿದ್ದಾರೆ. ಅಷ್ಟೇ ಅಲ್ಲ,



ಇರಾಕ್‌ನಲ್ಲಿರುವ ಇಂಗ್ಲಿಷ್ ಸೈನಿಕರು ತಮ್ಮ ಬ್ರಿಟನ್ ಸರ್ಕಾರದಿಂದ ಎಷ್ಟು ನಿರ್ಲಕ್ಷ್ಯಕ್ಕೀಡಾಗಿದ್ದಾರೆಂದರೆ ಅವರಿಗೆ ಸರಿಯಾದ ಬೂಟ್ಸ್‌ಗಳಿಲ್ಲ, ನೀರಿಲ್ಲ, ಸೋಪ್ ಇಲ್ಲ, ಟೀ-ಶರ್ಟ್ ಇಲ್ಲ, ಟಾಯ್ಲೆಟ್ ಪೇಪರ್‌ಗಳಿಲ್ಲ, ಆತ್ಮರಕ್ಷಣಾ ಪರಿಕರಗಳಿಲ್ಲ.....

ಈ ಸೈನಿಕರಲ್ಲಿ ಬಹುತೇಕರು ಇಂಗ್ಲಿಷ್ ಸಮಾಜದ ಕೆಳವರ್ಗದವರು ಹೊಟ್ಟೆಪಾಡಿಗಾಗಿ ಸೇನೆ ಸೇರಿರುವವರು. ಇವತ್ತು ಇರಾಕ್‌ನಲ್ಲಿರುವ ಇಂಗ್ಲಿಷ್ ಸೈನಿಕರಿಗೆ ಅನ್ಯ ದೇಶಗಳ ಸೈನಿಕರು ಏನೆಂದು ಗೇಲಿ ಮಾಡುತ್ತಿದ್ದಾರಂತೆ ಗೊತ್ತೆ?

Borrowers. ಅಂದರೆ ಎರವಲು ಪಡೆಯುವವರು ಎಂದು.

ಇದು ಯಾವ ಹಂತಕ್ಕೆ ಹೋಗಿದೆಯೆಂದರೆ ಈ ಸೈನಿಕರ ಅಮ್ಮಂದಿರು ಕಾಸಿಗೆ ಕಾಸು ಉಳಿಸುತ್ತಾ ಶೂಸ್-ಬಟ್ಟೆ ಇತ್ಯಾದಿಗಳನ್ನು ಇರಾಕ್‌ಗೆ ಕಳುಹಿಸಿ ಕೊಡುತ್ತಿದ್ದಾರೆ. ಯುದ್ಧ ಗೆಲ್ಲಲೆಂದಲ್ಲ, ತಮ್ಮ ಮಕ್ಕಳ ಬಗೆಗಿನ ಮಮಕಾರದಿಂದ!

ವಿಲ್ಸನ್‌ಳ **Ten Tiny Toes** ನಾಟಕದ ಕಥಾವಸ್ತು ಇದೇನೆ.

ಇದೇ ಸಂದರ್ಭದಲ್ಲಿ ನಾವು ಇನ್ನೊಂದು ಅತಿರೇಕವನ್ನು ಹೋಲಿಸಿ ನೋಡಬಹುದು.

ಅದು ಬಿ.ಎಂ. ಶ್ರೀಯವರ ಪ್ರಸಿದ್ಧ 'ಇಂಗ್ಲಿಷ್ ಗೀತೆಗಳು' ಕವನ ಸಂಕಲನದಲ್ಲಿದೆ.


ಅದರಲ್ಲಿನ 'ಆಳೌ ಬ್ರಿಟಾನಿಯ' 'ಜಾನ್ ಮೂರ್ ಸತ್ತಿದ್ರು' ಎಂಬ ಪದ್ಯಗಳು 19ನೇ ಶತಮಾನದ ಇಂಗ್ಲಿಷ್ ಸೇನಾಧಿಕಾರಿಗಳ ಧೈರ್ಯ ಸಾಹಸ, ತ್ಯಾಗ ಬಲಿದಾನಗಳನ್ನು ಕೊಂಡಾಡುತ್ತವೆ. ಬಿ.ಎಂ. ಶ್ರೀ ಎಂಥ ಬ್ರಿಟಿಷ್ ಸೇವಕರೆಂದರೆ ಚೂರೂ ಸಂಕೋಚವಿಲ್ಲದೆ ಇಂಗ್ಲಿಷ್ ಆಳುವ ವರ್ಗಗಳ ಶೋಕ ಕನ್ನಡಿಗರ ಶೋಕವೂ ಹೌದೆಂಬಂತೆ ಈ ಪದ್ಯಗಳನ್ನು ಅನುವಾದಿಸಿ ಪ್ರಕಟಿಸಿದ್ದರು.

ಆದರೆ ಈಗ ಏನಾಗಿದೆ ನೋಡಿ. ಇರಾಕ್‌ನಲ್ಲಿ ಇಂಗ್ಲಿಷ್ ಕೂಲಿ ಸೈನಿಕರು ನರಳುತ್ತಿದ್ದರೆ, ಹತ್ಯೆಗೀಡಾಗುತ್ತಿದ್ದರೆ ತಾಯಂದಿರು ನೋವನ್ನು ಅನುಭವಿಸುತ್ತಿದ್ದಾರೆಯೆ ಹೊರತು ಸ್ವತಃ ಬ್ರಿಟಿಷ್ ಸರ್ಕಾರ, ಚೂರೂ ತಲೆ ಕೆಡಿಸಿಕೊಳ್ಳುತ್ತಿಲ್ಲ,

ಬಹುಶಃ ದೇಶರಕ್ಷಣೆಯ ಹೆಸರಲ್ಲಿ ನಡೆಯುವ ಬಹುತೇಕ ಯುದ್ಧಗಳ ಹಣೆಬರಹ ಇಷ್ಟೇ ಏನೊ?

ಹೆಗ್ಗಡೆಯ ಚೆಂ(ಗಲು)ನುಡಿ

"ಸಾತ್ವಿಕ ಆಹಾರ ಸೇವಿಸುವವರು ಸಜ್ಜನರಾಗಿ ರೂಪುಗೊಳ್ಳುತ್ತಾರೆ. ತಾಮಸ ಆಹಾರ ಸೇವನೆ ಮಾಡುವವರು ದುರ್ಜನರಾಗಿ ಸಮಾಜಕ್ಕೆ ಕಂಟಕಪ್ರಾಯರಾಗಿ ಬದುತ್ತಾರೆ..."



ಇದು ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯ ಆಹಾರ ಸಂಶೋಧನೆ. ವಿಜಯ ಕರ್ನಾಟಕ ಪತ್ರಿಕೆಯಲ್ಲಿ 'ಚೆನ್ನುಡಿ' ಎಂಬ ಅಂಕಣ ಬರೆಯುವ ಹೆಗ್ಗಡೆ ಜುಲೈ 22 ರ ಸಂಚಿಕೆಯಲ್ಲಿ ಆಹಾರವೇ ಸ್ವಭಾವಕ್ಕೆ ಮೂಲ ಎನ್ನುವ ಐಟಂ ಬರೆಯುತ್ತಾ ಹೀಗೆಂದು ಅಪ್ಪಣೆ ಕೊಡಿಸಿದ್ದಾರೆ.

ಇಲ್ಲಿ ಸಾತ್ವಿಕ ಆಹಾರ ಎಂದರೇನೆಂದು ಲಿಸ್ಟ್ ಮಾಡಲು ಬಹಳ ಕಷ್ಟ ಪಡಬೇಕಿಲ್ಲ, ಸಸ್ಯಹಾರ ಎನ್ನುವುದನ್ನೆ ಹೆಗಡೆ ಸಾತ್ವಿಕ ಅಂದಿದ್ದಾರೆ. ಇನ್ನು ತಾಮಸಕ್ಕೆ ಕನ್ನಡ ನಿಘಂಟಿನಲ್ಲಿ ಕತ್ತಲೆ, ಅಜ್ಞಾನ, ಜಡತೆ, ನೀಚ, ಶಿವನ ಒಬ್ಬ ಅನುಚರ..... ಎಂಬಿತ್ಯಾದಿ ವಿವರಣೆ ನೀಡಲಾಗಿದೆಯಾದರೂ ಈ ಹೆಗಡೆ ಕೈ ಬೆರಳು ಮಾಂಸಾಹಾರದತ್ತ ತೋರುತ್ತಿದೆ ಎನ್ನುವುದರಲ್ಲಿ ಸಂಶಯವಿಲ್ಲ,

ನಾವಿಲ್ಲಿ ಮಾಂಸಾಹಾರ ಎಷ್ಟು ಮುಖ್ಯ, ಸೊಪ್ಪು, ತರಕಾರಿಗಳಷ್ಟೇ ಅದೂ ಪುಷ್ಟದಾಯಕ ಎಂದು ವಿಶೇಷವಾಗಿ ವಿವರಿಸಬೇಕಿಲ್ಲ, ಹೆಗ್ಗಡೆ ತರದವರು ಎಷ್ಟೇ ಬಾಯಿಬಡಿದುಕೊಂಡರೂ ನಾವು ಮಾಂಸಾಹಾರ ಬಿಡಬೇಕಾಗೂ ಇಲ್ಲ. ಆದರೆ ಹೆಗ್ಗಡೆ, ಮನುಷ್ಯನ ವ್ಯಕ್ತಿತ್ವ ಮತ್ತು ಸ್ವಭಾವ ಅವರ ಆಹಾರಭ್ಯಾಸದಿಂದ ರೂಪುಗೊಳ್ಳುತ್ತದೆ ಎನ್ನುವುದೇ ಕುಚೋದ್ಯಕರವಾಗಿ ಕಾಣುತ್ತದೆ.

ಉದಾಹರಣೆಗೆ ನಮ್ಮ ಸಮಾಜದ ಪುರೋಹಿತಶಾಹಿಗಳು ಶತಶತಮಾನಗಳಿಂದಲೂ ಅನ್ನ, ಬೇಳೆ, ಹಲ್ವಾ, ತೊವ್ವೆ, ಪಾಯಸ, ಕೂಟುಗಳನ್ನೇ ತಿನ್ನುತ್ತಾ ಬಂದಿದ್ದರೂ ಈ ವರ್ಗದ ಜನರಿಗೆ ಸಜ್ಜನಿಕೆ ಬರಲಿಲ್ಲ ಏಕೆ?

'ನಾನು ಶ್ರೇಷ್ಠ ಬೇರೆಯವರು ಕನಿಷ್ಠ ಇನ್ನೊಬ್ಬ ಅಸ್ಪೃಶ್ಯ' ಎನ್ನುವುದು ಸಾತ್ವಿಕತನವಾ? ಸ್ತ್ರೀ ಎರಡನೇ ದರ್ಜೆ ಪ್ರಜೆ ಎಂದು ದಮನಿಸುವುದು, ದೇವರ ಹೆಸರೇಳಿ ಮುಗ್ಧರನ್ನು ವಂಚಿಸಿ ದುಡ್ಡು ಕಸಿಯುವುದು, ಸಂಸ್ಕೃತಿ ಹೆಸರಲ್ಲಿ ಕಂದಾಚಾರ ಬೆಳೆಸುವುದೆಲ್ಲಾ ಸಾತ್ವಿಕ ಗುಣಗಳಾ ಇಲ್ಲಾ ತಾಮಸತನವಾ?


ಜೀನಿಬಿ ಕತೆ

ಮಠದಲ್ಲಿ ವಾಸ ಮಾಡುತ್ತಾ ವಿದ್ಯಾಭ್ಯಾಸ ಪಡೆದರೆ ತಾವು ತತ್ವಜ್ಞಾನಿಗಳಾಗುತ್ತೇವೆ ಎಂದು ನಂಬಿ ಮಠವನ್ನು ಸೇರಲು ಬರುತ್ತಿದ್ದವರಿಗೆ ಗುರುಗಳು ನೀಡುತ್ತಿದ್ದ ಹಿತವಚನ:

"ಪುಸ್ತಕಗಳಿಂದ ಜ್ಞಾನ ಪಡೆಯಲು ನೀವು ಗ್ರಂಥಾಲಯದಲ್ಲಿ ವಾಸಿಸಬೇಕಿಲ್ಲ"

ಅದನ್ನೇ ಗುರುಗಳು ಇನ್ನೊಂದು ರೀತಿಯಲ್ಲೂ ಹೇಳುತ್ತಿದ್ದರು:

"ಗ್ರಂಥಾಲಯಕ್ಕೆ ಕಾಲಿಡದೆಯೂ ನೀವು ಪುಸ್ತಕಗಳನ್ನು ಓದಬಹುದು. ಹಾಗೆಯೇ ದೇವಸ್ಥಾನಗಳಿಗೆ ಭೇಟಿ ನೀಡದೆಯೂ ಧಾರ್ಮಿಕ ಜೀವನವನ್ನು ನಡೆಸಬಹುದು."





ಮಾವ: ಲೇ ಬ್ರೋಕರ್, ನನ್ನ ಮಗನಿಗೆ ಎಂಥಾ ಮದುವೆ ಮಾಡಿಸಿದೆಯೋ ನೀನು? ನನ್ನ ಸೊಸೆ ಮದುವೆಯಾದ ಮಾರನೆ ದಿನಾನೇ ವಾಂತಿ ಮಾಡಿಕೊಳ್ಳೋದಕ್ಕೆ ಶುರು ಮಾಡಿದಾಳೆ!

ಬ್ರೋಕರ್: ಅದೇ ನಾನು ನಿಮಗೆ ಮೊದಲೇ ಹೇಳಿದ್ದು. ಹುಡುಗಿಗೆ 21 ವರ್ಷ, ಮೂರು ತಿಂಗಳು ಅಂತ....!

* * * * * *



ಸೆಕ್ಸ್ ಬಾಂಬ್ ಮಲ್ಲಿಕಾ ಶೆರಾವತ್‌ಳ ಫೋಟೋ ಅನ್ನು ಅಂಚೆಚೀಟಿಯ ಮೇಲೆ ಮುದ್ರಿಸಲು ಭಾರತದ ಸರ್ಕಾರ ನಿರ್ಧರಿಸಿತು.

ಆದರೆ ಆ ನಿರ್ಧಾರದಿಂದ ಭಾರತೀಯ ಪುರುಷರು ಒಂದು ದೊಡ್ಡ ಸಮಸ್ಯೆಯನ್ನು ಎದುರಿಸುವಂತಾಗಿದೆ. ಅವರಿಗೆ ಅಂಚೆ ಚೀಟಿಯ ಯಾವ ಕಡೆ ನೆಕ್ಕುವುದು ಎಂದೇ ಗೊತ್ತಾಗುತ್ತಿಲ್ಲ!

* * * * * *

ಔಷಧಿ ಅಂಗಡಿಗೆ ಹೋದ ದ್ರೌಪದಿ 105 ನಿರೋಧ್‌ಗಳು ಬೇಕೆಂದಳು.



ಇದರಿಂದ ಅಚ್ಚರಿಗೊಂಡ ಅಂಗಡಿಯವ ತನ್ನ ಹುಬ್ಬೇರಿಸಿದ.

ಅದನ್ನು ಅರ್ಥ ಮಾಡಿಕೊಂಡ ದ್ರೌಪದಿ: "ಬೋಳಿಮಕ್ಕಳು, ಆ ಪಾಂಡವರು, ಕೌರವರು ಈಗ ರಾಜಿ ಆಗಿದ್ದಾರೆ" ಎಂದಳು.



ಗಣೇಶನ 'ಸರ್ಕಸ್' ಆರಂಭ!



'ಗೋಲ್ಡನ್ ಸ್ಟಾರ್' ಗಣೇಶ್ ಅವರ 'ಸರ್ಕಸ್' ಶುರುವಾಗಿದೆ. ಇದನ್ನು ಆರಂಭಿಸುತ್ತಿರುವವರು ನಿರ್ದೇಶಕ ದಯಾಳ್. ಬರುವ ಆಗಸ್ಟ್ ಎರಡರಂದು ಸೆಟ್ಟೇರುತ್ತಿರುವ ಈ ಚಿತ್ರದ ನಾಯಕಿಯನ್ನು ದಯಾಲ್ ಮುಂಬೈನಿಂದ ಕರೆದುಕೊಂಡು ಬಂದಿದ್ದಾರೆ. ಈಕೆಯ ಹೆಸರು ಅರ್ಚನಾ ಗುಪ್ತಾ.

ಗಣೇಶ್ ಜೊತೆ ಈತನಕ ಎರಡು ಬಾರಿ ನಟಿಸಿರುವ ನಟಿಯರೆಂದರೆ 'ತುಂಟಾಟ'ದ ರೇಖ ಮತ್ತು 'ಮುಂಗಾರು ಮಳೆ'ಯ ಪೂಜಾ ಗಾಂಧಿ. ಉಳಿದಂತೆ ಪ್ರತಿ ಚಿತ್ರಕ್ಕೂ ಗಣೇಶ್ ತನ್ನ ನಾಯಕಿಯನ್ನು ಬದಲಾಯಿಸುತ್ತಾ ಹೋಗಿದ್ದಾರೆ.

ಈ ಚಿತ್ರದ ನಿರ್ದೇಶಕ ದಯಾಲ್ ಕೂಡ ವಿಚಿತ್ರ ಮನುಷ್ಯ. ಏನೇ ಮಾಡಿದರೂ ಸುದ್ದಿ ಮಾಡುವ ದಯಾಲ್‌ರ ಮೊದಲ ಚಿತ್ರ 'ಓಕೆ ಸಾರ್ ಓಕೆ' ತೋಪೆದ್ದಿತ್ತು. ಆದರೆ ಆ ನಂತರ ಬಂದ 'ಬಾ ಬಾರೋ ರಸಿಕ' ಗಾಂಧಿನಗರದವರ ಗಮನ ಸೆಳೆದಿತ್ತು. ಅಲ್ಲಿಂದಾಚೆಗೆ ಕ್ವಿಕಿ ಸಿನಿಮಾಗಳನ್ನೇ ಮಾಡಿದ ದಯಾಲ್, ರಾಕ್‌ಲೈನ್ ವೆಂಕಟೇಶಗಾಗಿ ಮಾಡಿದ 'ಸಖಾಸಖಿ', ಕೆ.ಸಿ.ಎನ್. ಚಂದ್ರುಗಾಗಿ ಮಾಡಿದ 'ಮಸಾಲೆ' ಎರಡೂ ಕೈಕೊಟ್ಟಿದ್ದವು.

ಇದಾದನಂತರ 'ಗಾಳಿಪಟ' ಚಿತ್ರಕ್ಕೆ ದಯಾಲ್ ನಿರ್ಮಾಪಕರಾಗಿದ್ದರು. ಇದೀಗ ಗಣೇಶನನ್ನು ಹಾಕಿಕೊಂಡು ನಿರ್ದೇಶನದಲ್ಲಿ ತಿರುಗಿರುವ ದಯಾಲ್ 'ಸರ್ಕಸ್' ಮಾಡಲು ಹೊರಟಿದ್ದಾರೆ.

ಕ್ರಿಯಾಶೀಲತೆಗೆ ಯಡ್ಡಿಯ ತೆರಿಗೆ ನೀತಿಯ ತೊಡಕು

ಮೊನ್ನೆ ಮೊನ್ನೆ ತನಕ ಈ ವರ್ಷದ ಮೊದಲ ಆರು ತಿಂಗಳಲ್ಲಿ 'ಮುಸ್ಸಂಜೆ ಮಾತು' ಎಂಬ ಒಂದೇ ಒಂದು ಚಿತ್ರ ಬಾಕ್ಸಾಫೀಸಿನಲ್ಲಿ ಗೆದ್ದಿತ್ತು. ಇದರ ಬಗ್ಗೆ ಎಲ್ಲರೂ ಕೊರಗುತ್ತಿರುವಾಗ ನಿನ್ನೆ 'ಮೊಗ್ಗಿನ ಮನಸು', ಇಂದು 'ತಾಜ್‌ಮಹಲ್' ಎಂಬ ಎರಡು ಚಿತ್ರಗಳು ಹಿಟ್ ಆಗುವ ಸೂಚನೆಗಳನ್ನು ನೀಡಿವೆ. ಇದು ಸಹಜವಾಗಿಯೇ ಗಾಂಧಿನಗರದಲ್ಲಿ ಮತ್ತೆ ಉಲ್ಲಸಿತವಾದ ವಾತಾವರಣವನ್ನು ಸೃಷ್ಟಿಸಿದೆ.



ಈ ಮೂರು ಚಿತ್ರಗಳ ಯಶಸ್ಸಿನ ಮುಖ್ಯ ಗುಟ್ಟು ಏನು ಗೊತ್ತಾ? ಹೊಸ ನಿರ್ದೇಶಕರುಗಳು ಹೊಸ ಚಿಂತನೆಯೊಂದಿಗೆ ಈ ಚಿತ್ರಗಳನ್ನು ನಿರೂಪಿಸಿರುವುದು. 'ಮುಸ್ಸಂಜೆ ಮಾತು' ನಿರ್ದೇಶಕ ಮಹೇಶ್ ಇದೇ ಮೊದಲ ಬಾರಿ ನಿರ್ದೇಶನಕ್ಕೆ ಕೈಹಾಕಿರುವುದು. ಇನ್ನು 'ಮೊಗ್ಗಿನ ಮನಸು' ಶಶಾಂಕ್‌ರವರ ಎರಡನೆ ಚಿತ್ರ. ಇದೀಗ ಬಿಡುಗಡೆಗೊಂಡಿರುವ 'ತಾಜ್‌ಮಹಲ್' ಕೂಡ ನಿರ್ದೇಶಕ ಚಂದ್ರುರವರ ಮೊದಲ ಯತ್ನ. ಅಷ್ಟೇ ಮುಖ್ಯವಾದ ವಿಷಯವೆಂದರೆ, ಈ ಮೂರೂ ಚಿತ್ರಗಳಲ್ಲಿ ಲಾಂಗು, ಮಚ್ಚು, ದ್ವಂದ್ವಾರ್ಥ ಸಂಭಾಷಣೆಗಳಿಲ್ಲದಿರುವುದು.





ಈ ಮೂರೂ ಚಿತ್ರಗಳ ನಡುವಿನ ಇನ್ನೊಂದು ಸಾಮ್ಯತೆ ಯಾವುದೆಂದರೆ ಅವುಗಳಲ್ಲಿ ನಟಿಸಿರುವವರೆಲ್ಲ ಹೊಸಬರು. ಉದಾಹರಣೆಗೆ 'ಮೊಗ್ಗಿನ ಮನಸು' ಚಿತ್ರದಲ್ಲಿ ಯಾವ ದೊಡ್ಡ ಸ್ಟಾರ್ ಇಲ್ಲ. ಈ ಚಿತ್ರದ ನಾಯಕಿಯರಾದ ರಾಧಿಕಾ ಪಂಡಿತ್‌ಗೆ ಇದು ಮೊದಲ ಚಿತ್ರ, ಶುಭಾ ಪೂಂಜಾಗೆ ಎರಡನೇ ಚಿತ್ರ. ಆದರೂ ಚಿತ್ರಕ್ಕೆ ಒಳ್ಳೆಯ ಓಪನಿಂಗ್ ಸಿಕ್ಕಿತು.



ಇನ್ನು ಇತ್ತೀಚೆಗೆ 'ತಾಜ್ ಮಹಲ್' ಚಿತ್ರದ ನಾಯಕ ಅಜಯ್ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಾಗಿದ್ದ. ಆದರೆ ಈ ಚಿತ್ರದಲ್ಲಿ ಆತನ ನಟನಾ ಪ್ರತಿಭೆಯನ್ನು ತೋರಿಸಿ ಸೈ ಅನ್ನಿಸಿಕೊಂಡಿದ್ದಾನೆ. ಈ ಚಿತ್ರ ಬಿಡುಗಡೆಯಾದ ದಿನ ಬೆಂಗಳೂರಿನಲ್ಲಿ ಭಾರೀ ಮಳೆ ಬೀಳುತ್ತಿದ್ದರೂ ಬೆಳಗ್ಗೆ ಎಂಟೂವರೆಗೇ ಚಿತ್ರಮಂದಿರದ ಎದುರು ಹೌಸ್‌ಫುಲ್ ಬೋರ್ಡು ಬಿದ್ದಿತ್ತು.

ನಿರ್ದೇಶಕರ ತರಹವೇ ಹೊಸ ಸಂಗೀತ ನಿರ್ದೇಶಕರು ಕೂಡಾ ಉದ್ಯಮಕ್ಕೆ ಲಗ್ಗೆ ಇಟ್ಟು ಯಶಸ್ಸು ಕಾಣುತ್ತಿದ್ದಾರೆ. ಉದಾಹರಣೆಗೆ 'ಮುಸ್ಸಂಜೆ ಮಾತು' ಚಿತ್ರದ ಹಾಡುಗಳೆಲ್ಲಾ ಹಿಟ್ ಆಗಿವೆ. ಇದರ ಸಂಗೀತ ನಿರ್ದೇಶನ ಮಾಡಿದವರು ಶ್ರೀಧರ್ ಎಂಬ ಅನಾಮಿಕ. ಈ ಒಂದೇ ಚಿತ್ರದಿಂದಾಗಿ ಎಲ್ಲರೂ ತನ್ನತ್ತ ನೋಡುವಂತೆ ಮಾಡಿದ್ದಾನೆ.

'ತಾಜ್‌ಮಹಲ್' ಯಶಸ್ಸಿನಲ್ಲೂ ಸಂಗೀತ ನಿರ್ದೇಶಕ ಅಭಿಮನ್‌ರವರ ಕೊಡುಗೆ ಇದೆ. ಇದು ಆತನ ಎರಡನೇ ಚಿತ್ರ. ಈ ಮೊದಲು 'ಪೂಜಾರಿ' ಚಿತ್ರದ ಮೂಲಕ ಆತ ಸ್ವತಂತ್ರ ಸಂಗೀತ ನಿರ್ದೇಶಕನಾಗಿದ್ದ. ಮುಂಬರುವ ದಿನಗಳಲ್ಲಿ ಅಭಿಮನ್‌ಗೆ ಸಿಕ್ಕಾಪಟ್ಟೆ ಬೇಡಿಕೆ ಬಂದರೆ ಅಚ್ಚರಿ ಇಲ್ಲ.

ಹಾಗೆಯೇ ಸದ್ಯದಲ್ಲೇ ಬಿಡುಗಡೆಯಾಗಲಿರುವ 'ಸೈಕೋ' ಚಿತ್ರದ ರಘು ದೀಕ್ಷಿತ್ ಕೂಡಾ ಈಗ ಕರ್ನಾಟಕದ ಮನೆಮಾತಾಗಿದ್ದಾರೆ. ಆ ಚಿತ್ರದ 'ನಿನ್ನಾ ಪೂಜೆಗೆ ಬಂದೇ ಮಹದೇಶ್ವರಾ....' ಹಾಡು ಆತನಿಗೆ ಗಾಂಧಿನ್ನಗರಕ್ಕೆ ಗಾಯಕನಾಗಿಯೂ, ಸಂಗೀತ ನಿರ್ದೇಶಕನಾಗಿಯೂ ಭರ್ಜರಿ ಎಂಟ್ರಿ ಕೊಟ್ಟಿದೆ.


ಗಾಂಧಿನಗರ ಎಂಬ ಮಾಯಾಲೋಕದಿಂದ ಹಳಬರು ನಿಧಾನವಾಗಿ ಮಾಯವಾಗುತ್ತಿದ್ದಾರೆ. ಹೊಸಬರು ಅವರ ಸ್ಥಾನವನ್ನು ಆಕ್ರಮಿಸುತ್ತಾ ವಿಜೃಂಭಿಸಲು ಆರಂಭಿಸಿದ್ದಾರೆ.

ಕನ್ನಡ ಚಿತ್ರರಂಗಕ್ಕೆ ಎಪ್ಪತ್ತೈದು ವರ್ಷ ತುಂಬುತ್ತಿರುವಾಗಲೇ ಅದೀಗ ದ್ದಿನದಿಂದ ದಿನಕ್ಕೆ ತಾರುಣ್ಯವನ್ನು ಮತ್ತೆ ಮೈಗೂಡಿಸಿಕೊಳ್ಳುತ್ತಿದೆ.

ಇಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪನವರ ಗಮನಕ್ಕೆ ಒಂದು ವಿಷಯವನ್ನು ತರಲೇಬೇಕಿದೆ: ಈ ಮೂರು ಚಿತ್ರಗಳನ್ನು ಅವರು ನೋಡಬೇಕಿದೆ. ಕನ್ನಡದಲ್ಲಿ ಹೊಸ ಪ್ರತಿಭೆಗಳು ಹೇಗೆ ಅರಳುತ್ತಿವೆ; ಹೊಸ ಕತೆಗಳು ಹೇಗೆ ದೃಶ್ಯಕಾವ್ಯಗಳಾಗುತ್ತಿವೆ ಎಂಬುದನ್ನು ಅವರು ಅರ್ಥವಾಡಿಕೊಳ್ಳಬೇಕಿದೆ. ಹೋಗಿ ಹೋಗಿ ಹಳಸಣ್ಣವಾದ ರೀಮೇಕ್ ಚಿತ್ರಗಳಿಗೆ ಶೇ. 100 ತೆರಿಗೆ ವಿನಾಯ್ತಿ ನೀಡಿರುವ ಯಡಿಯೂರಪ್ಪ ತಮ್ಮ ತಪ್ಪನ್ನು ತಿದ್ದಿಕೊಳ್ಳಬೇಕಿದೆ.

ಆ ಸೃಜನಶೀಲತೆ ಅವರಲ್ಲಿದೆ ಎಂದು ಭಾವಿಸಿದ್ದೇವೆ. ಅದು ತಪ್ಪಲ್ಲ ಎಂದು ಪ್ರೂವ್ ಮಾಡುವ ಹೊಣೆ ಯಡಿಯೂರಪ್ಪನವರದ್ದು.

ಪೂಜಾಳ ಬಿಕಿನಿ ಪುರಾಣ



ಪೂಜಾ ಗಾಂಧಿ ಕನ್ನಡ ಚಿತ್ರರಂಗದಲ್ಲಿ ಸದ್ಯಕ್ಕೆ ಅನಭಿಷಕ್ತ ರಾಣಿ ಎಂಬುದರಲ್ಲಿ ಸಂಶಯವೇ ಇಲ್ಲ. ಹೀಗಾಗಿ ಕನ್ನಡ ಚಿತ್ರರಂಗದ ದೊಡ್ಡ ಸಣ್ಣ ಮತ್ತು ಮಧ್ಯಮ ನಾಯಕನಟರುಗಳೆಲ್ಲ ಈ ಗಾಂಧಿಯೇ ತಮ್ಮ ನಾಯಕಿಯಾಗಲಿ ಎಂದು ಕನವರಿಸುತ್ತಿದ್ದಾರೆ. ಈಕೆ ನಟಿಸಿದ ಚಿತ್ರಗಳೆಲ್ಲವೂ ಬಾಕ್ಸಾಫೀಸ್‌ನಲ್ಲಿ ಜಯಭೇರಿ ಬಾರಿಸಿರುವುದರಿಂದ ನಿರ್ಮಾಪಕರೂ ಈಕೆಯನ್ನು ಲಕ್ಕಿಸ್ಟಾರ್ ಎಂದು ಕರೆಯುತ್ತಿದ್ದಾರೆ.

ಆದರೆ ಪೂಜಾ ಗಾಂಧಿ ಇತ್ತೀಚೆಗೆ ಈ ಯಶಸ್ಸಿನ ಅಮಲಿನಲ್ಲಿ ತೇಲಾಡುತ್ತಿರುವಂತಿದೆ. ಇದಕ್ಕೆ ಸಾಕ್ಷಿಯೆಂಬಂತೆ ಆಕೆ ಜಗ್ಗೇಶ್ ನಾಯಕನಟನಾಗಿರುವ 'ಕೋಡಗನ ಕೋಳಿ ನುಂಗಿತ್ತಾ' ಚಿತ್ರದಲ್ಲಿ ಈಜುಡುಗೆಯಲ್ಲಿ ಮೊದಲ ಬಾರಿಗೆ ಕಾಣಿಸಿಕೊಂಡಿದ್ದಾಳೆ.

ಮೊದಲೇ ಚೋಟುದ್ದ ಇರುವ ಪೂಜಾ ಗಾಂಧಿ ಇತ್ತೀಚೆಗೆ ಬೋಂಡಾ ತರಹ ಊದಿಕೊಂಡಿದ್ದಾಳೆ. ಅಂತಹದ್ದರಲ್ಲಿ ಈಕೆ ಈಜುಡುಗೆಯಲ್ಲಿ ಕಾಣಿಸಿಕೊಳ್ಳುವ ಧೈರ್ಯ ಮಾಡುತ್ತಾಳೆ ಎಂದರೆ ಅದು ಯಶಸ್ಸಿನ ಅಮಲೇ ಇರಬೇಕಲ್ಲವೆ? ಇತ್ತೀಚೆಗೆ ಹಿಂದಿಯ ಕರೀನಾ ಕಪೂರ್ ಈಜುಡುಗೆ ಧರಿಸುವ ಮೊದಲು ತಿಂಗಳುಗಟ್ಟಲೆ ಉಪವಾಸ, ವ್ಯಾಯಾಮ ಮಾಡಿ ತೆಳ್ಳಗೆ ಬಳುಕುವಂತಾದಳು. ಆದರೆ ಅಂತಹ ಯಾವುದೇ ಶ್ರಮವನ್ನು ಹಾಕದೇ ತನ್ನ ಧಡೂತಿ ದೇಹವನ್ನು ಪೂಜಾ ಈಜುಡುಗೆಯೊಳಗೆ ತುರುಕಿದ್ದಾಳೆ.

ಒಂದು ವೇಳೆ ಪೂಜಾ ಗಾಂಧಿ ತನ್ನ ತೂಕ ಇಳಿಸಿದ್ದರೆ ಈಜುಡುಗೆಗೂ ಒಂದಿಷ್ಟು ಬೆಲೆ ಬರುತ್ತಿತ್ತು, ಆಕೆಯ ಸೌಂದರ್ಯವೂ ಇನ್ನಷ್ಟು ಹೆಚ್ಚುತ್ತಿತ್ತು, ಆದರೆ ಈಗ ಅದ್ಯಾವುದೂ ಚಿತ್ರರಸಿಕರ ಪಾಲಿಗೆ ಸಿಗದೇ ಕಣ್ಣಿಗೆ ಸೋಲ್ಪುಂಟಾಗುವುದು ಗ್ಯಾರಂಟಿ ಎಂಬಂತಾಗಿದೆ!

ಸಿನಿ Bits



ಕಳೆದ ವರ್ಷ 'ಕೈವಾರ ತಾತಯ್ಯ' ಎಂಬ ಪವಾಡ ಪುರುಷನ ಜೀವನವನ್ನಾಧರಿಸಿ ಸಿನಿಮಾ ಮಾಡಿದ್ದ ನಿರ್ದೇಶಕ ಪಲ್ಲಕ್ಕಿ, ಈ ಬಾರಿ ಪವಾಡ, ಮಹಿಮೆ, ಭಕ್ತಿಯನ್ನೆಲ್ಲಾ ಪಕ್ಕಕ್ಕಿಟ್ಟು ಜಾಗತೀಕರಣವನ್ನೇ ಕಥಾವಸ್ತುವನ್ನಾಗಿಸಿಕೊಂಡು ಚಿತ್ರ ಮಾಡಲು ಹೊರಟಿದ್ದಾರೆ.

ಪಲ್ಲಕ್ಕಿ ನಿರ್ದೇಶಿಸುತ್ತಿರುವ 'ದೇವನಹಳ್ಳಿ' ಚಿತ್ರದ ಮುಖಾಂತರ ಬೆಂಗಳೂರು ಮತ್ತು ಮತ್ತಿತರ ಕಡೆ ಭೂಮಾಫಿಯಾದಿಂದ ರೈತರು ಮತ್ತು ಬಡವರಿಗಾಗುತ್ತಿರುವ ಅನ್ಯಾಯ, ಬಹುರಾಷ್ಟ್ರೀಯ ಕಂಪೆನಿಗಳ ಕುತಂತ್ರ, ಅನಾಹುತಗಳನ್ನು ಬಯಲಿಗೆಳೆಯುತ್ತಾರಂತೆ.

ಈ ಚಿತ್ರ 8.8.2008ರ ಬೆಳಗ್ಗೆ 8 ಗಂಟೆಗೆ ಸೆಟ್ಟೇರುತ್ತದಂತೆ. ಎಂಟರ ನಂಟಿನಲ್ಲಿ ಆರಂಭವಾಗುತ್ತಿರುವ ಈ ಚಿತ್ರ ನಿರ್ಮಾಪಕರ ಗಂಟನ್ನು ಉಳಿಸಲಿ ಎಂಬುದು ನಮ್ಮ ಹಾರೈಕೆ.

■ ■ ■ ■ ■


'ಮೊಗ್ಗಿನ ಮನಸು' ಚಿತ್ರದ ಛಾಯಾಗ್ರಾಹಕ ಚಂದ್ರು ಬಗ್ಗೆ ಈಗ ಗಾಂಧಿನಗರ ಮಾತಾಡುತ್ತಿದೆ. ಗೆಳೆಯ ಸಂತೋಷ್ ರೈ ಪತಾಜೆ ನಿರ್ದೇಶನದ 'ಸವೆನ್ ಓ ಕ್ಲಾಕ್' ಚಿತ್ರದ ಮುಖಾಂತರ ಸ್ವತಂತ್ರ ಛಾಯಾಗ್ರಾಹಕರಾಗಿ ಉದ್ಯಮಕ್ಕೆ ಚಂದ್ರು ಕಾಲಿಟ್ಟರು. ಆನಂತರ 'ಸವಿಸವಿ ನೆನಪು', 'ಪಲ್ಲಕ್ಕಿ', 'ಕೈವಾರ ತಾತಯ್ಯ' ಮತ್ತು ಈಗ 'ಮೊಗ್ಗಿನ ಮನಸು' ಮತ್ತು 'ತಾಜ್‌ಮಹಲ್' ಚಿತ್ರಕ್ಕೆ ಛಾಯಾಗ್ರಹಣ ಮಾಡಿದ್ದಾರೆ ಚಂದ್ರು. ಈತನ ಬಹುತೇಕ ಚಿತ್ರಗಳು ವಿಮರ್ಶಕರ, ಪ್ರೇಕ್ಷಕರ ಮತ್ತು ನಿರ್ಮಾಪಕರ ಪ್ರಶಂಸೆಗೆ ಒಳಗಾಗಿದೆ. ಇನ್ನೂ ಗೃಹಸ್ಥಾಶ್ರಮಕ್ಕೆ ಕಾಲಿಡದ ಈ ಚಿಗುರು ಮೀಸೆಯ ಹುಡುಗ ದೃಶ್ಯಕಾವ್ಯ ಸೃಷ್ಟಿಸುವುದರಲ್ಲಿ ಕನ್ನಡದಲ್ಲಿ ಮೊದಲ ಸ್ಥಾನದಲ್ಲಿದ್ದ ದಿನೇಶ್ ಬಾಬುರನ್ನು ಕೂಡಾ ಓವರ್ ಟೇಕ್ ಮಾಡಿದ್ದಾರೆ.



ಚಂದ್ರುಗಿಂತ ಮೊದಲೇ ಉದ್ಯಮಕ್ಕೆ ಕಾಲಿಟ್ಟ ಮತ್ತೊಬ್ಬ ತರುಣ ಸತ್ಯ ಹೆಗಡೆ ಮತ್ತು 'ಮುಂಗಾರು ಮಳೆ'ಯ ಕೃಷ್ಣ ಕೂಡಾ ತಮ್ಮ ಕ್ಯಾಮೆರಾ ಕೈಚಳಕದಿಂದ ಪ್ರೇಕ್ಷಕರನ್ನು ಮೋಡಿ ಮಾಡಿರುವ ಹುಡುಗರು ಎಂಬುದನ್ನು ಇಲ್ಲಿ ಸ್ಮರಿಸಬೇಕು.

■ ■ ■ ■ ■

ವಿಷ್ಣುವರ್ಧನ್-ಸುಹಾಸಿನಿ-ದಿನೇಶ್ ಬಾಬು ಈ ತ್ರಿಮೂರ್ತಿಗಳು ಸುಮಾರು ಐದು ವರ್ಷದ ನಂತರ ಮತ್ತೆ ಒಂದೇ ಚಿತ್ರದಲ್ಲಿ ಒಟ್ಟು ಸೇರುತ್ತಿದ್ದಾರೆ. ಈ ಚಿತ್ರದ ಹೆಸರು 'ಮೇಷ್ಟ್ರು'. ವಿಷ್ಣು ವೃತ್ತಿ ಜೀವನ ಕವಲು ದಾರಿಯಲ್ಲಿರುವಾಗಲೆಲ್ಲ ಕೆಲವೊಮ್ಮೆ ದಿನೇಶ್ ಬಾಬು, ಹಲವೊಮ್ಮೆ ಸುಹಾಸಿನಿ ಆಪದ್ಬಾಂಧವರಂತೆ ಬಂದು ಅವರ ಕೈ ಹಿಡಿದಿದ್ದಾರೆ. ಈ ಬಾರಿ ಯಾರು ಯಾರ ಕೈಹಿಡಿಯುತ್ತಾರೋ? ಎಂಬ ಚರ್ಚೆ ಈಗ ಗಾಂಧಿನಗರದಲ್ಲಿ ಹುಟ್ಟಿಕೊಂಡಿದೆ. ಅಂದಹಾಗೆ ಈ ಚಿತ್ರ ಆಗಸ್ಟ್ ಮೊದಲ ವಾರದಲ್ಲಿ ಸೆಟ್ಟೇರುತ್ತಿದೆ.



■

R B P LANKESH, Kannada Weekly Price Rs. 12/- 6-8-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4.

ಜಯದ ಹಾದಿಯಲ್ಲಿ ಅಜಯ್

ಇಲ್ಲಿಯತನಕ ಸಣ್ಣಪುಟ್ಟ ರೋಲುಗಳಲ್ಲೇ ಕಾಣಿಸಿಕೊಂಡು ಹೈರಾಣಾಗಿದ್ದ ಅಜಯ್ ಎಂಬ ನಟನಿಗೆ ಕಡೆಗೂ 'ತಾಜ್‌ಮಹಲ್' ಚಿತ್ರದಿಂದ ಅದೃಷ್ಟ ಖುಲಾಯಿಸುವ ಲಕ್ಷಣಗಳು ಕಾಣಿಸುತ್ತಿವೆ. ಈ ಚಿತ್ರದಲ್ಲಿ ಈತನ ನಟನೆ ಮೊದಮೊದಲಿಗೆ ಸ್ವಲ್ಪ ಓವರ್ ಎನಿಸಿದರೂ ಆಮೇಲಾಮೇಲೆ ಸುಧಾರಣೆಗೊಳ್ಳುತ್ತದೆ.

'ಕಿಟ್ಟಿ' ಚಿತ್ರದ ಸಣ್ಣ ಪಾತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದ ಅಜಯ್ ಆ ನಂತರ 'ಎಕ್ಸ್‌ಕ್ಯೂಸ್‌ಮಿ' ಚಿತ್ರದಲ್ಲಿ ಒಳ್ಳೆ ಪರ್ಫಾರ್‌ಮೆನ್ಸ್ ನೀಡಿದ್ದನಾದರೂ ಆ ಚಿತ್ರದ ಇನ್ನೋರ್ವ ನಟನಾದ ಸುನೀಲ್ ರಾವ್‌ಗೆ ದೊರೆತಷ್ಟು ಅವಕಾಶ ಅಜಯ್‌ಗೆ ಸಿಕ್ಕಿರಲಿಲ್ಲ.

ಮೂರು ವರ್ಷಗಳ ಹಿಂದೆ ಹೊಸಪೇಟೆ ಬಳಿ ಮಗುವೊಂದರ ಮೇಲೆ ಕಾರು ಹತ್ತಿಸಿ ತೊಂದರೆಗೆ ಸಿಲುಕಿಕೊಂಡಿದ್ದ ಅಜಯ್ ಅದೇ ಸಮಯಕ್ಕೆ ಬಂದ "ಅಜಯ್ ದಿ ಗ್ರೇಟ್" ಎಂಬ ಚಿತ್ರವೂ ಮಕಾಡೆ ಬಿದ್ದಿತ್ತು. ನಂತರ ಬಂದ 'ಗ್ರೀನ್‌ಸಿಗ್ನಲ್' ಚಿತ್ರ ಆತನ ವೃತ್ತಿಬದುಕಿಗಂತೂ ಗ್ರೀನ್‌ಸಿಗ್ನಲ್ ನೀಡಿರಲಿಲ್ಲ. ಆಮೇಲೆ ಬಂದ 'ಗುಡ್‌ಲಕ್', 'ಅಮೃತವಾಹಿನಿ', 'ಗಣೇಶ' ಮತ್ತು 'ಹುಟ್ಟಿದರೆ ಕನ್ನಡನಾಡಲ್ಲಿ ಹುಟ್ಟಬೇಕು' ಈ ಯಾವ ಚಿತ್ರಗಳೂ ಈತನ ಕೈ ಹಿಡಿಯಲಿಲ್ಲ.

ಈಗ ಹೊಸ ತಂಡದ 'ತಾಜ್‌ಮಹಲ್'ನೊಂದಿಗೆ ಅಜಯ್ ಮತ್ತೊಮ್ಮೆ ಎದ್ದುಬಂದಿದ್ದಾನೆ. ಚಂದನೆಯ, ಮುದ್ದು ಮುಖದ ಈ ಹುಡುಗನಿಗೆ ಗುಡ್‌ಲಕ್.



'ಪುಟ್ಟಂಜಿ' ಗೆ ಅಂತರರಾಷ್ಟ್ರೀಯ ಪ್ರಶಸ್ತಿ



ಮೊನ್ನೆ ಮೊನ್ನೆ ಉಮಾಶ್ರೀ ಅವರಿಗೆ ಒಂದು ಅಂತಾರಾಷ್ಟ್ರೀಯ ಪ್ರಶಸ್ತಿ ದೊರಕಿತು. ಇದು ಗಿರೀಶ್ ಕಾಸರವಳ್ಳಿ ನಿರ್ದೇಶನದ ಇನ್ನೂ ಬಿಡುಗಡೆಯಾಗದಿರುವ 'ಗುಲಾಬಿ ಟಾಕೀಸ್' ಚಿತ್ರದ ಪಾತ್ರಕ್ಕಾಗಿ ದೊರಕಿದೆ. ಮೊನ್ನೆ ನಡೆದ **Osians Cine Fan Asia Arab Film Festival** ನಲ್ಲಿ ಭಾರತೀಯ ವಿಭಾಗದಲ್ಲಿ ಅತ್ಯುತ್ತಮ ಅಭಿನಯಕ್ಕಾಗಿ ಉಮಾಶ್ರೀ ಈ ಪ್ರಶಸ್ತಿ ಗೆದ್ದಿದ್ದಾರೆ. ವಿಶೇಷವೆಂದರೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಕನ್ನಡದ ಕಲಾವಿದೆಯೊಬ್ಬಳಿಗೆ ಪ್ರಶಸ್ತಿ ದೊರಕುತ್ತಿರುವುದು ಇದೇ ಮೊದಲ ಬಾರಿ.

ಇಲ್ಲಿ ರವೀಂದ್ರ ಕಲಾಕ್ಷೇತ್ರದಲ್ಲಿ ವಾರಕ್ಕೊಮ್ಮೆ ನಡೆಯುವ ಚಿತ್ರಕೂಟ ಅಭಿಮಾನಿ ಸಂಘ, ಸರಿಕರ ಸಂಘ ಇತ್ಯಾದಿ, ಇತ್ಯಾದಿ ಲೆಟರ್‌ಹೆಡ್ ಸಂಸ್ಥೆಗಳ ಪ್ರಶಸ್ತಿಗಳಿಗೆಲ್ಲಾ ಭಾರೀ ಪ್ರಚಾರ ನೀಡುವ ಮಾಧ್ಯಮದ ಜನ ಉಮಾಶ್ರೀಯ ಈ ಸಾಧನೆಯನ್ನು ಗುರುತಿಸದೇ ಇರುವುದು ನಿಜವಾಗಲೂ ಅಚ್ಚರಿ ಮೂಡಿಸುತ್ತದೆ.

ಬಹಳ ಹಿಂದೆ ಶಂಕರ್‌ನಾಗ್ ಮೊದಲ ಬಾರಿ 'ಒಂದಾನೊಂದು ಕಾಲದಲ್ಲಿ' ಚಿತ್ರದಲ್ಲಿ ನಟಿಸಿದಾಗ ಅವರಿಗೆ ಅತ್ಯುತ್ತಮ ನಟ ಎಂದು ಅಂತರರಾಷ್ಟ್ರೀಯ ಪ್ರಶಸ್ತಿ ದೊರಕಿತ್ತು. ಶಂಕರ್‌ನಂತರ ಅಂತರರಾಷ್ಟ್ರೀಯ ಮಟ್ಟದಲ್ಲಿ ಕನ್ನಡದ ಕಲಾವಿದೆಗೆ ಪ್ರಶಸ್ತಿ ದೊರಕುತ್ತಿರುವುದು ಇದೇ ಮೊದಲ ಬಾರಿ.

ಪುಟ್ಟಂಜಿಯ ಈ ಸಾಧನೆಗೆ ನಮ್ಮ ಅಭಿನಂದನೆಗಳು. ■



ವಿಜಯ್ ಪೌರುಷ!

ಇಲ್ಲಿರುವ ಫೋಟೊವನ್ನೊಮ್ಮೆ ನೋಡಿ. ಇದು 'ದುನಿಯಾ' ಖ್ಯಾತಿಯ ವಿಜಯ್ ಫೋಟೋ. ಮುಂದಿನವಾರ ಸೆಟ್ಟೇರಲಿರುವ 'ಜಂಗ್ಲಿ' ಚಿತ್ರಕ್ಕಾಗಿ ವಿಜಿ ಈ ರೀತಿ ತನ್ನ ದೇಹದಾರ್ಢ್ಯವನ್ನು ಉಬ್ಬಿಸಿಕೊಳ್ಳಲು ಅವರು ಸಾಕಷ್ಟು ಕಷ್ಟಪಟ್ಟಿದ್ದಾರೆ. ಸತತ ವ್ಯಾಯಾಮ ಮತ್ತು ಮಿತವಾದ ಆಹಾರ ಪದ್ಧತಿಯಿಂದ ಮಾತ್ರ ಇದೆಲ್ಲ ಸಾಧ್ಯ.

ಇತ್ತೀಚೆಗೆ ಬಾಲಿವುಡ್ಡಿನ ಶಾರುಕ್ ಖಾನ್ ಕೂಡ ಇಂತಹ 'ಸಿಕ್ಸ್‌ಪ್ಯಾಕ್' ಅನ್ನು ಪಡೆದಿದ್ದರಲ್ಲದೆ ಅದನ್ನು ಎಲ್ಲೆಡೆ ಪ್ರದರ್ಶಿಸಿದ್ದರು. ಅದೊಂದು ದೊಡ್ಡ ಸಾಧನೆ ಎಂಬಂತೆ ಎಲ್ಲೆಡೆ ಅದರ ಬಗ್ಗೆ ಕೊಚ್ಚಿಕೊಂಡಿದ್ದರು.

ಆದರೆ ವಿಜಿ ಮಾತ್ರ ಯಾವ ಸದ್ದುಗದ್ದಲವಿಲ್ಲದೆ ಪ್ರತಿದಿನ ಜಿಮ್‌ನಲ್ಲಿ ಶ್ರಮಪಟ್ಟು ಈ 'ಸಿಕ್ಸ್‌ಪ್ಯಾಕ್' ಅನ್ನು ಪಡೆದಿದ್ದಾರೆ. 'ಜಂಗ್ಲಿ' ಚಿತ್ರದ ಪಾತ್ರಕ್ಕೆ ವಿಜಯ್ ಈ ರೀತಿಯ ವಿಭಿನ್ನ ತಯಾರಿ ನಡೆಸುತ್ತಿರುವುದು ಸಂತೋಷದ ವಿಷಯ.



ಈ ಚಿತ್ರವನ್ನು ದುನಿಯಾ ಖ್ಯಾತಿಯ ಸೂರಿ ನಿರ್ದೇಶಿಸುತ್ತಿದ್ದಾರೆ. ಅಂದರೆ ಸೂರಿ- ವಿಜಿ ಜೋಡಿ 'ಜಂಗ್ಲಿ' ಮುಖಾಂತರ ಮತ್ತೊಮ್ಮೆ ಕನ್ನಡ ಪ್ರೇಕ್ಷಕ ಮಹಾಪ್ರಭುವನ್ನು ರಂಜಿಸಲಿದೆ.

* * * *

ಅಂದಹಾಗೆ ವಿಜಯ್ ಇಂತಹ 'ಸಿಕ್ಸ್‌ಪ್ಯಾಕ್' ಪಡೆದ ನಂತರ ಬೆಂಗಳೂರಿನ ಜಿಮ್ ಸೆಂಟರುಗಳ ಮತ್ತು ಗರಡಿಮನೆಗಳ ಚಿಂದಗಿಯೇ ಬದಲಾಗಿ ಹೋಗಿದೆ.

ಕರ‍್ರಗಿರುವ ವಿಜಿಯೇ ಇಂತಹ 'ಸಿಕ್ಸ್‌ಪ್ಯಾಕ್' ಹೊಂದಿರುವಾಗ ನಾವೇನು ಕಮ್ಮಿ ಎಂಬಂತೆ ಈಚುಪೀಚುಗಳಂತಿರುವ ನರಪೇತಲರೂ ಈಗ ಜಿಮ್ ಕಡೆ ದೌಡಾಯಿಸುತ್ತಿದ್ದಾರಂತೆ. ವಿಜಿಯ ಪ್ರಭಾವದಿಂದ ಮೊನ್ನಿನ ತನಕ ಬಣಗುಟ್ಟುತ್ತಿದ್ದ ಗರಡಿಮನೆಗಳೆಲ್ಲಾ ಇಂದು ಸಂತೆಯಂತೆ ಗಿಜಿಗುಡುತ್ತಿವೆ.

ಸದ್ಯ ವಿಜಿ ಶರ್ಟು ಹಾಕ್ಕೊಳ್ಳಲ್ಲ ಅಂತ ಈತನ ಅಭಿಮಾನಿಗಳು ಕೂಡ "ಅಂಗಿ ಯಾಕೆ ಬೇಕು ಸಜ್ಜನರಿಗೆ...." ಅಂತ ದಾಸರ ಪದ ಹಾಡಿಕೊಂಡು ಬರಿಮೈಲಿ ಓಡಾಡದಿದ್ದರೆ ಅಷ್ಟೇ ಸಾಕು!

ಓಳು ಬಿಡುತ್ತಿರುವ ಓಂಪ್ರಕಾಶ್



ಓಂ ಪ್ರಕಾಶ್‌ರಾವ್ ಎಂಬ ಕಮಂಗಿ ನಿರ್ದೇಶಕ ಶರತ್‌ಕುಮಾರ್ ಅಭಿನಯಿಸುತ್ತಿರುವ ತಮಿಳು ಚಿತ್ರವೊಂದನ್ನು ನಿರ್ದೇಶಿಸಲು ಚೆನ್ನೈ ಕಡೆಗೆ ಎಗರಿಹೋಗುತ್ತಿದ್ದಾರೆ. ಇದರ ಬಗ್ಗೆ ಓಂ ಪ್ರಕಾಶ್ ಬಾಂಬ್ ಬ್ಲಾಸ್ಟ್‌ಗಿಂತಲೂ ಹೆಚ್ಚು ಪ್ರಚಾರ ಪಡೆದುಕೊಳ್ಳುತ್ತಿದ್ದಾರೆ. ಈ ಖುಷಿಯಲ್ಲಿ ಸಿಕ್ಕಾಪಟ್ಟೆ ಎಕ್ಸೈಟ್‌ಮೆಂಟಿಗೆ ಒಳಗಾಗಿ ಏನೇನೋ ಮಾತಾಡಲು ಆರಂಭಿಸಿದ್ದಾರೆ.

ಎಲ್ಲೆಂದರಲ್ಲಿ ನಿಂತು ಬಾಯಿಗೆ ಬಂದಂತೆ ರೈಲು ಬಿಡುತ್ತಿದ್ದ ಓಂ ಪ್ರಕಾಶ್ "ಕನ್ನಡದಿಂದ ತಮಿಳಿಗೆ ಹೋಗಿ ಚಿತ್ರ ನಿರ್ದೇಶಿಸುತ್ತಿರುವ ಮೊದಲ ಕನ್ನಡಿಗ ನಾನು" ಎನ್ನುತ್ತಿದ್ದಾರೆ. ಬಹಳ ವರ್ಷಗಳ ಹಿಂದೆಯೇ ತಮಿಳು ಸಿನಿಮಾಗಳನ್ನು ನಿರ್ದೇಶಿಸಿರುವ ಪುಟ್ಟಣ್ಣ ಕಣಗಾಲ್, ಸಿದ್ದಲಿಂಗಯ್ಯರಂಥ ಹಿರಿಯರು ಈತನ ನೆನಪಿಗೆ ಬರಲಿಲ್ಲವೇ? ಹೋಗಲಿ ಬಿಡಿ, ಓಂ ಪ್ರಕಾಶನ ಈ ಮಾತಿಗೆ ಅವರೇನೋ ತಲೆ ಕೆಡಿಸಿಕೊಳ್ಳುವುದಿಲ್ಲ. ಆದರೆ ನಿಜಕ್ಕೂ ತಲೆಕೆಡಿಸಿಕೊಂಡು ಥರಥರಾ ಸಿಟ್ಟಿನಿಂದ ಪರಪರನೆ ತಲೆ ಕೆರೆದುಕೊಳ್ಳುತ್ತಿರುವುದು ಎಸ್. ನಾರಾಯಣ್ ಎಂಬ ಮತ್ತೊಬ್ಬ ಬಂಡಲ್ ನಿರ್ದೇಶಕ. ಎರಡು ವರ್ಷದ ಹಿಂದಷ್ಟೇ ತಮಿಳು ಚಿತ್ರವೊಂದನ್ನು ನಿರ್ದೇಶಿಸಿ ಅಲ್ಲಿನವರಿಂದ ಮುಖಕ್ಕೆ ಥೂ ಎಂದು ಉಗಿಸಿಕೊಂಡು ಬಂದಿತ್ತು ಈ ನಾಣಿ! ಆದರೂ ಓಂ ಪ್ರಕಾಶನ ವಿರುದ್ಧ ಈತ ಈಗ ಕಟಕಟನೆ ಹಲ್ಲು ಕಡಿಯುತ್ತಿದ್ದಾನಂತೆ.

KAS ನೇಮಕಾತಿ
PUC ನೇಮಕಾತಿ
B.ed ಪ್ರವೇಶ ಪರೀಕ್ಷೆ
KES ಮುಖ್ಯ ಪರೀಕ್ಷೆ
ಸಬ್ ರಿಜಿಸ್ಟ್ರಾರ್ ಮಾದರಿ ಪ್ರಶ್ನಪತ್ರಿಕೆ
ಪೊಲೀಸ್ ನೇಮಕಾತಿ



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, ...